ಮಂಗಳವಾರ, ಆಗಸ್ಟ್ 8, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 219 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಮಣಿಪುರ ಹಿಂಸೆ: ಸಂಸತ್ತಿನಲ್ಲಿ ಚರ್ಚೆ ಸಂಕ್ಷಿಪ್ತವೇ, ವಿಸ್ತೃತವೇ?

ವಾಹನ ರಿಟೇಲ್ ಮಾರಾಟ ಹೆಚ್ಚಳ 8

₹1,225 ಕೋಟಿ ಬಳಸದ ರಾಜ್ಯ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,953 ▲	19,597 ▲	₹61,300 (ಬೆಂಗಳೂರು)	₹74,200 (ಬೆಂಗಳೂರು)	82.75 ▲

ಸಚಿವ ಚಲುವರಾಯಸ್ವಾಮಿ ವಿರುದ್ಧ 7 ಅಧಿಕಾರಿಗಳ ದೂರು? ● ಸೂಕ್ತಕ್ರಮ: ಸಿಎಸ್‌ಗೆ ಸೂಚನೆ

ಲಂಚ: ರಾಜಭವನ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮಂಡ್ಯ: 'ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಲಂಚ ನೀಡುವಂತೆ ತಮ್ಮನ್ನು ಒತ್ತಾಯಿಸಿದರು' ಎಂದು ಆರೋಪಿಸಿ ಕೃಷಿ ಇಲಾಖೆ ಅಧಿಕಾರಿಗಳು ಬರೆದಿದ್ದಾರೆನ್ನಲಾದ ಪತ್ರದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿಗೆ ರಾಜಭವನ ಪತ್ರ ಬರೆದಿದೆ.


ಕೃಷಿ ಇಲಾಖೆಯಲ್ಲಿ ಎಲ್ಲ ಹಂತದ ಅಧಿಕಾರಿಗಳ ಹುದ್ದೆಗೆ ತಕ್ಕಂತೆ ದರ ನಿಗದಿ ಮಾಡಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದರು. ಅದಾದ ಬಳಿಕ, ಯಾವ ಹುದ್ದೆಗೆ ಎಷ್ಟು ದರ ಎಂಬ ಪಟ್ಟಿಯೊಂದು ಬಿಡುಗಡೆಯಾಗಿತ್ತು. ಅದು ತಣ್ಣಗಾದ ಬೆನ್ನಲ್ಲೇ, ಮತ್ತೊಂದು ಪತ್ರ ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸುವ ಸಾಧ್ಯತೆ ಇದೆ. ವರ್ಗಾವಣೆಯ ಗುಸುಗುಸು ಈಗ ರಾಜಭವನದ ಕದ ತಟ್ಟಿದೆ ಎನ್ನಲಾಗಿದ್ದು, ಖುದ್ದು ರಾಜಭವನವೇ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿರುವುದು ಹೊಸ ಬೆಳವಣಿಗೆಯಾಗಿದೆ.

'ಈ ಪತ್ರವೇ ನಕಲಿ ಹಾಗೂ ನನ್ನ ವಿರುದ್ಧ ನಡೆಸುತ್ತಿರುವ ಕುತಂತ್ರ' ಎಂದು ಸಚಿವ ಚಲುವರಾಯಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ರಾಜಭವನದ ಪತ್ರ: ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರ ಪರವಾಗಿ ರಾಜ್ಯಪಾಲರ ಅಧೀನ ಕಾರ್ಯದರ್ಶಿ ಜಿ.ಪ್ರದೀಪ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾಶರ್ಮ ಅವರಿಗೆ ಬರೆದಿರುವ ಪತ್ರ ಸೋಮವಾರ ಬಹಿರಂಗಗೊಂಡಿದೆ.

'ಮಂಡ್ಯ ಜಿಲ್ಲೆಯ ಮಂಡ್ಯ, ಮಳವಳ್ಳಿ, ಕೃಷ್ಣರಾಜಪೇಟೆ, ಪಾಂಡವಪುರ, ನಾಗಮಂಗಲ, ಶ್ರೀರಂಗಪಟ್ಟಣ ಮತ್ತು ಮದ್ದೂರು ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರು ಮತ್ತು ಸಿಬ್ಬಂದಿಯು ಸಚಿವ ಚಲುವರಾಯಸ್ವಾಮಿ ವಿರುದ್ಧ ದೂರು ನೀಡಿದ್ದಾರೆ. ದೂರಿನಲ್ಲಿ ಅಧಿಕಾರಿಗಳು ಉಲ್ಲೇಖಿಸಿರುವಂತೆ ಅಧಿಕಾರಿ ಮತ್ತು ಸಿಬ್ಬಂದಿಯಿಂದ ₹6 ಲಕ್ಷದಿಂದ ₹8 ಲಕ್ಷದವರೆಗೆ ನೀಡುವಂತೆ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಮೂಲಕ ಒತ್ತಡ ಹೇರುತ್ತಿದ್ದಾರೆ. ಲಂಚ ಕೇಳುವ ಇಂತಹ ಅನಿಷ್ಟ ಪದ್ಧತಿಗೆ ಕಡಿವಾಣ ಹಾಕಲು ಕ್ರಮ ವಹಿಸದಿದ್ದರೆ ಅಧಿಕಾರಿಗಳು ಕುಟುಂಬದ ಸದಸ್ಯರ ಜತೆಗೆ ವಿಷ ಕುಡಿಯುವುದಾಗಿ ತಿಳಿಸಿದ್ದಾರೆ. ಈ ದೂರನ್ನು ನಿಯಮದ ಅನುಸಾರ ಪರಿಶೀಲಿಸಿ, ಸೂಕ್ತ ಕ್ರಮವಹಿಸಬೇಕು' ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಸೂಚಿಸಿದ್ದಾರೆ.

7ನೇ ಪುಟ ನೋಡಿ


KARNATAKA GOVERNOR'S SECRETARIAT

No: GS 01 ADM 2023.

ದಿನಾಂಕ: 01-08-2023

ರಾಜಭವನದಿಂದ ಬಂದಿದೆ ಎನ್ನಲಾದ ಪತ್ರ

ಜಾಲತಾಣದಲ್ಲಿ ಹರಿದಾಡುತ್ತಿರುವ ಪತ್ರ ನಕಲಿಯಾದುದು ಎಂದು ಬಯಲಾಗಿದೆ. ಹೀಗಿದ್ದರೂ ಈ ಸಂಬಂಧ ಪರಿಶೀಲನೆ ನಡೆಸಿ, ಅಗತ್ಯ ಕಂಡು ಬಂದಲ್ಲಿ ತನಿಖೆ ನಡೆಸುತ್ತೇವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ತನಿಖೆಗೆ ಸಿ.ಎಂಗೆ ಮನವಿ ಚಲುವರಾಯಸ್ವಾಮಿ



'ಕೆಲವರು ಹುಡುಕಿ ಹುಡುಕಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ, ಹಿಂದೆ ಬಸ್ ಚಾಲಕ ಆತ್ಮಹತ್ಯೆಯತ್ನ ಪ್ರಕರಣದಲ್ಲೂ ಇದೇ ರೀತಿ ಕುತಂತ್ರ ಮಾಡಿದ್ದರು. ಇದೊಂದು ನಕಲಿ ಪತ್ರವಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳೇ ಹೇಳಿದ್ದಾರೆ. ಆದರೂ ಪತ್ರದ ಸತ್ಯಾಸತ್ಯತೆ ಬಗ್ಗೆ ತನಿಖೆ ನಡೆಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇನೆ' ಎಂದು ಚಲುವರಾಯಸ್ವಾಮಿ ತಿಳಿಸಿದರು. 'ಕೃಷಿ ಇಲಾಖೆ ಜಂಟಿ ನಿರ್ದೇಶಕ ಈಗಾಗಲೇ ಸಹಾಯಕ ನಿರ್ದೇಶಕರ ಜೊತೆ ಆನ್‌ಲೈನ್ ಸಭೆ ನಡೆಸಿದ್ದಾರೆ. ಯಾರೂ ಕೂಡ ಈ ರೀತಿ ಪತ್ರ ಬರೆದಿಲ್ಲ ಎಂದು ತಿಳಿಸಿರುವ ಮಾಹಿತಿ ಸಿಕ್ಕಿದೆ. ಪ್ರಾಥಮಿಕ ತನಿಖೆಯಿಂದ ಅದೊಂದು ನಕಲಿ ಪತ್ರ ಎಂದು ಗೊತ್ತಾಗಿದೆ. ಈ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೂ ಸೂಚಿಸಿದ್ದೇನೆ' ಎಂದರು.

ಪತ್ರ ಬರೆದಿಲ್ಲ: ಜೆ.ಡಿ ಸ್ಪಷ್ಟನೆ

'ನಮ್ಮ ಇಲಾಖೆಯ ಸಹಾಯಕ ನಿರ್ದೇಶಕರು ಕೃಷಿ ಸಚಿವರ ವಿರುದ್ಧ ಪತ್ರ ಬರೆದಿಲ್ಲ, ನಮ್ಮ ಜಿಲ್ಲೆಯಿಂದ ಯಾವುದೇ ದೂರು ರಾಜ್ಯಪಾಲರ ಕಚೇರಿಗೆ ಹೋಗಿಲ್ಲ' ಎಂದು ಕೃಷಿ ಇಲಾಖೆಯ ಮಂಡ್ಯದ ಜಂಟಿ ನಿರ್ದೇಶಕ ವಿ.ಎಸ್.ಅಶೋಕ್ ಹೇಳಿದರು.

'ಎಲ್ಲಾ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ ಮಾಹಿತಿ ಪಡೆದಿದ್ದೇನೆ, ಕೃಷಿ ಸಚಿವರ ವಿರುದ್ಧ ಪತ್ರ ಬರೆದಿಲ್ಲ ಎಂದು ಎಲ್ಲರೂ ತಿಳಿಸಿದ್ದಾರೆ. ಈ ಬಗ್ಗೆ ಸಚಿವರು ವಿವರಣೆ ಕೋರಿದ್ದರು. ನಮ್ಮ ಅಧಿಕಾರಿಗಳು ರಾಜ್ಯಪಾಲರಿಗೆ ಪತ್ರ ಬರೆದಿಲ್ಲ ಎಂದು ತಿಳಿಸಿದ್ದೇನೆ' ಎಂದು ಅವರು ಸ್ಪಷ್ಟಪಡಿಸಿದರು.

ಮಂಡ್ಯದಲ್ಲಿ ನಾವು ಏಳಕ್ಕೆ ಆರು ಗೆದ್ದು ಬಿಟ್ಟಿದ್ದೀವಲ್ಲ, ಅದನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಹೊಟ್ಟೆ ಕಿಚ್ಚಿನಿಂದ ಆರೋಪಗಳನ್ನು ಮಾಡುತ್ತಿದ್ದಾರೆ

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ

ಸಿದ್ದರಾಮಯ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ಗರಿಷ್ಠ ಮಟ್ಟ ತಲುಪಿದೆ. ಹಣ ಕೊಟ್ಟವರಿಗೆ ಹುದ್ದೆಗಳನ್ನು ಹರಾಜು ಹಾಕಲಾಗುತ್ತಿದೆ

ಬಸನಗೌಡ ಪಾಟೀಲ ಯತ್ನಾಳ
ಬಿಜೆಪಿ ಶಾಸಕ

ಬಿಬಿಎಂಪಿ ಕಾಮಗಾರಿ ತನಿಖೆಗೆ ಎಸ್‌ಐಟಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019-20ರಿಂದ 2022-23ರವರೆಗೆ ನಡೆದಿರುವ ವಿವಿಧ ಕಾಮಗಾರಿಗಳ ಬಗ್ಗೆ ವಿವರವಾದ ತನಿಖೆ ನಡೆಸಲು ರಾಜ್ಯ ಸರ್ಕಾರವು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ನಾಲ್ಕು ತನಿಖಾ ಸಮಿತಿಗಳನ್ನು ರಚಿಸಿದೆ. 4

ಮಣಿಪುರದಲ್ಲಿ ಪರಿಹಾರ, ಪುನರ್ವಸತಿ ನಿಗಾ

'ಸುಪ್ರೀಂ' ತ್ರಿಸದಸ್ಯ ಸಮಿತಿ ರಚನೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಉಲ್ಬಣಗೊಂಡಿರುವುದರ ನಡುವೆಯೇ ಗಲಭೆಯ ಸಂತ್ರಸ್ತರಿಗೆ ಪರಿಹಾರ ನೀಡಿಕೆ ಮತ್ತು ಪುನರ್ವಸತಿಯ ಮೇಲ್ವಿಚಾರಣೆಗೆ ಹೈಕೋರ್ಟ್‌ನ ಮೂವರು ನಿವೃತ್ತ ಮಹಿಳಾ ನ್ಯಾಯಮೂರ್ತಿಗಳ ಸಮಿತಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ರಚಿಸಿದೆ. ಅಪರಾಧ ಪ್ರಕರಣಗಳ ತನಿಖೆಯ ಮೇಲೆ ನಿಗಾ ಇರಿಸುವಂತೆ ಮಹಾರಾಷ್ಟ್ರದ ಮಾಜಿ ಪೊಲೀಸ್ ಮುಖ್ಯಸ್ಥ ದತ್ತಾತ್ರೇಯ ಪಡಸಾಲ್ಗೀಕರ್ ಅವರನ್ನು ಕೋರ್ಟ್ ಕೇಳಿಕೊಂಡಿದೆ.

ಕಾನೂನು ಮತ್ತು ಸುವ್ಯವಸ್ಥೆಯ ಮೇಲೆ ಜನರ ವಿಶ್ವಾಸವನ್ನು ಮರುಸ್ಥಾಪಿಸುವುದಕ್ಕಾಗಿ ಈ ಕ್ರಮ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಜೊತೆಗೆ, ಮಣಿಪುರದ ಒಟ್ಟಾರೆ ಪರಿಸ್ಥಿತಿಯ ಮೇಲೆ ನಿಗಾ ಇರಿಸಲೂ ನಿರ್ಧರಿಸಿದೆ.

ಮಹಿಳೆಯರನ್ನು ಬೆತ್ತಲುಗೊಳಿಸಿ ಮೆರವಣಿಗೆ ನಡೆಸಿದ ವಿಡಿಯೊ ಅತ್ಯಂತ ಆಘಾತ ಉಂಟು ಮಾಡುವಂತಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿ ಇದ್ದಾರೆ.

ಮುಖ್ಯಾಂಶಗಳು

- **ಮೂವರು ಸದಸ್ಯರ ಸಮಿತಿಯಿಂದ ಕೋರ್ಟ್‌ಗೆ ನೇರ ವರದಿ**
- **ಹಿಂಸಾಚಾರದ ಕುರಿತಂತೆ 6,523 ಎಫ್‌ಐಆರ್ ದಾಖಲಾಗಿದೆ**

ಸಮಿತಿಯಲ್ಲಿ ಯಾರಿದ್ದಾರೆ?

- ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಗೀತಾ ಮಿತ್ತಲ್– ಸಮಿತಿಯ ಮುಖ್ಯಸ್ಥೆ
- ಬಾಂಬೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಾಲಿನಿ ಪಿ. ಜೋಷಿ
- ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆಶಾ ಮೆನನ್



11ನೇ ಪುಟ ನೋಡಿ

ನಟ ವಿಜಯ ರಾಘವೇಂದ್ರ ಪತ್ನಿ ಸ್ಪಂದನಾ ನಿಧನ

ಬೆಂಗಳೂರು: ನಟ ವಿಜಯ ರಾಘವೇಂದ್ರ ಅವರ ಪತ್ನಿ ಸ್ಪಂದನಾ (37) ಅವರು ಥಾಯ್ಲೆಂಡ್‌ನಲ್ಲಿ ನಿಧನರಾಗಿದ್ದಾರೆ. ರಕ್ತದ ಒತ್ತಡ ಕಡಿಮೆಯಾಗಿ ಹೃದಯ ಸ್ತಂಭನದಿಂದ ಅವರು ಮೃತಪಟ್ಟಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ. 7



ಸಂಸತ್ ಸದಸ್ಯತ್ವ ಮರುಸ್ಥಾಪನೆಯಾದ ಬಳಿಕ ಲೋಕಸಭೆಯ ಕಲಾಪದಲ್ಲಿ ಪಾಲ್ಗೊಳ್ಳಲು ಸೋಮವಾರ ಆಗಮಿಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪಕ್ಷದ ಸದಸ್ಯರು ಸ್ವಾಗತಿಸಿದರು –ಪಿಟಿಐ ಚಿತ್ರ

ಸದಸ್ಯತ್ವ ಮರುಸ್ಥಾಪನೆ: 'ಇಂಡಿಯಾ'ಕ್ಕೆ ಹೊಸ ಹುರುಪು

ಸಂಸತ್‌ಗೆ ಮರಳಿದ ರಾಹುಲ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 136 ದಿನಗಳ ಬಳಿಕ ಸೋಮವಾರ ಲೋಕಸಭೆ ಅಂಗಳ ಪ್ರವೇಶಿಸಿದ್ದಾರೆ.

ಸಂಸತ್ತಿನ ಉಭಯ ಸದನಗಳಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಭಾರಿ ಜಟಾಪಟಿ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ಬಿಗಿಪಟ್ಟು ಹಿಡಿದಿರುವ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿವೆ. ಮಂಗಳವಾರದಿಂದ ಇದರ ಮೇಲಿನ ಚರ್ಚೆ ಆರಂಭವಾಗಲಿದೆ. ಅದರ ಮುನ್ನಾ ದಿನವೇ ರಾಹುಲ್ ಅವರ ಮರು ಪ್ರವೇಶವು, ವಿರೋಧ ಪಕ್ಷಗಳ ಮೈತ್ರಿಕೂಟಕ್ಕೆ ಚೈತನ್ಯ ತುಂಬಿದೆ.

ರಾಹುಲ್ ಅವರು ಮಾನ ಹಾನಿ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ಗುಜರಾತ್‌ನ ಸೂರತ್ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಂತರ ತಡೆ ನೀಡಿದೆ. ಹಾಗಾಗಿ, ಅವರ ಸದಸ್ಯತ್ವವನ್ನು ಮರುಸ್ಥಾಪಿಸುವಂತೆ ಅಂದು ರಾತ್ರಿಯೇ ಕಾಂಗ್ರೆಸ್ ಪಕ್ಷವು ಸ್ಪೀಕರ್‌ಗೆ ಮನವಿ ಸಲ್ಲಿಸಿತ್ತು. ಆದರೆ ಸದಸ್ಯತ್ವವನ್ನು ತಕ್ಷಣವೇ ಮರುಸ್ಥಾಪನೆ ಮಾಡಿರಲಿಲ್ಲ.

ಸ್ಪೀಕರ್ ಅವರ 'ವಿಳಂಬ ಧೋರಣೆ' ಖಂಡಿಸಿ ಸಂಸತ್‌ನಲ್ಲಿ ಹೋರಾಡಲು 'ಇಂಡಿಯಾ' ನಿರ್ಧರಿಸಿತ್ತು. ಆದರೆ, ಬೆಳಿಗ್ಗೆ 10.15ಕ್ಕೆ ಅನರ್ಹತೆ ಆದೇಶವನ್ನು ರದ್ದುಗೊಳಿಸಿ ಲೋಕಸಭಾ ಕಾರ್ಯಾಲಯವು ಅಧಿಸೂಚನೆ ಹೊರಡಿಸಿತು. ಸುಪ್ರೀಂ ಕೋರ್ಟ್‌ನ ಮುಂದಿನ ಆದೇಶಕ್ಕೆ ಅನ್ವಯಿಸಿ ಸದಸ್ಯತ್ವವನ್ನು ಮರು ಸ್ಥಾಪಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

ಸಂಸತ್‌ಗೆ ದೌಡಾಯಿಸಿದ ರಾಹುಲ್: ಸಚಿವಾಲಯದಿಂದ ಮಾಹಿತಿ ಹೊರಬಿದ್ದ ತಕ್ಷಣವೇ ಕೆಳಮನೆಯ ಕಲಾಪದಲ್ಲಿ ಪಾಲ್ಗೊಳ್ಳಲು ಆಗಮಿಸಿದ ರಾಹುಲ್, ಮೊದಲು ಸಂಸತ್‌ನ ಆವರಣದಲ್ಲಿರುವ ಮಹಾತ್ಮ ಗಾಂಧಿ ಅವರ ಪ್ರತಿಮೆಗೆ ನಮನ ಸಲ್ಲಿಸಿದರು. ಬಳಿಕ ಮಧ್ಯಾಹ್ನ 12 ಗಂಟೆಗೆ ನಿಗದಿಯಾಗಿದ್ದ ಕಲಾಪದಲ್ಲಿ ಪಾಲ್ಗೊಂಡ ಅವರು, ತಮಗೆ ನಿಗದಿಪಡಿಸಿದ ಕುರ್ಚಿಯಲ್ಲಿ ಆಸೀನರಾದರು.

11ನೇ ಪುಟ ನೋಡಿ

ರಾಹುಲ್ ಸಂಸತ್‌ಗೆ ಮರಳಿದ್ದಾರೆ. ಹಾಗಾಗಿ, ಅಲ್ಲಿ ಜನರ ನೈಜ ಸಮಸ್ಯೆಗಳು ಪುನಃ ಪ್ರತಿಧ್ವನಿಸಲಿವೆ

ಪ್ರಿಯಾಂಕಾ ಗಾಂಧಿ
ಕಾಂಗ್ರೆಸ್ ನಾಯಕಿ

ಇದು ಪ್ರಜಾಪ್ರಭುತ್ವಕ್ಕೆ ಸಂದ ಜಯ. ರಾಹುಲ್ ದೇಶದ ಧ್ವನಿಯಾಗಿದ್ದು ಎಂದಿಗೂ ಅವರು ಮೌನವಾಗುವುದಿಲ್ಲ. ಸತ್ಯ ಹೇಳಲು ಹಿಂಜರಿಯುವುದಿಲ್ಲ

ಕೆ.ಸಿ. ವೇಣುಗೋಪಾಲ್
ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಉಸ್ತುವಾರಿ' ಸಮ್ಮುಖ ಅಹವಾಲು ಆಲಿಕೆ

ಮುನಿಸು ತಣಿಸಲು ಸಿ.ಎಂ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಹಂಚಿಕೆ, ವರ್ಗಾವಣೆ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದು ಮುನಿಸಿಕೊಂಡಿರುವ ಪಕ್ಷದ ಶಾಸಕರ ಜೊತೆಗಿನ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಆರಂಭಿಸಿದ್ದಾರೆ.

ತುಮಕೂರು, ಯಾದಗಿರಿ, ಚಿತ್ರದುರ್ಗ, ಬಾಗಲಕೋಟೆ, ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳ ಶಾಸಕರ ಜೊತೆ ಗೃಹ ಕಚೇರಿ ಕೃಷ್ಣಾದಲ್ಲಿ ಸಭೆ ನಡೆಸಿದ ಮುಖ್ಯಮಂತ್ರಿ, ಅವರ ಅಹವಾಲುಗಳನ್ನು ಆಲಿಸಿದರು. ತಮ್ಮ ಬೇಡಿಕೆಗಳ ಬಗ್ಗೆ ಉಸ್ತುವಾರಿ ಸಚಿವರು ಮತ್ತು ಇತರ ಸಚಿವರು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬುದನ್ನು ಶಾಸಕರು ಮುಖ್ಯಮಂತ್ರಿಯ ಗಮನಕ್ಕೆ ತಂದರು.

ಈ ವೇಳೆ ಮುಖ್ಯಮಂತ್ರಿ, 'ಪ್ರಸಕ್ತ ವರ್ಷ ಹೆಚ್ಚಿನ ಅನುದಾನದ ನಿರೀಕ್ಷೆ ಬೇಡ. ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು. ಏನೇ ಸಮಸ್ಯೆಗಳಿದ್ದರೂ ಉಸ್ತುವಾರಿ ಸಚಿವರ ಗಮನಕ್ಕೆ ತನ್ನಿ' ಎಂದು ಶಾಸಕರಿಗೆ ಸಲಹೆ ನೀಡಿದರು. ಅಲ್ಲದೆ, ಶಾಸಕರ ಜೊತೆ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವರಿಗೂ ಸೂಚಿಸಿದರು.

7ನೇ ಪುಟ ನೋಡಿ

ನಾನು ಮತ್ತು ಮುಖ್ಯಮಂತ್ರಿಯವರು ಶಾಸಕರ ಅಹವಾಲುಗಳನ್ನು ಆಲಿಸಿದ್ದೇವೆ. ಕ್ಷೇತ್ರದ ಸಮಸ್ಯೆ, ಸರ್ಕಾರದ ಕಾರ್ಯಕ್ರಮಗಳ ಜಾರಿ ಬಗ್ಗೆ ಚರ್ಚೆ ಮಾಡಿದ್ದೇವೆ. ಸತತವಾಗಿ ಒಂದು ವಾರ ಈ ರೀತಿ ಚರ್ಚೆ ಮಾಡುತ್ತೇವೆ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ವಿದೇಶಿ ಬ್ರ್ಯಾಂಡ್‌ಗಳ ಚಿಲ್ಲರೆ ಮದ್ಯ ಮಾರಾಟ

ಎಂಎಸ್‌ಐಎಲ್‌ನಿಂದ ಹೈಟೆಕ್ ಮದ್ಯ ಮಳಿಗೆ

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಾದ್ಯಂತ ಪ್ರೀಮಿಯಂ ವಿದೇಶಿ ಬ್ರ್ಯಾಂಡ್‌ಗಳ ಚಿಲ್ಲರೆ ಮದ್ಯ ಮಾರಾಟಕ್ಕೆ 'ಹೈಟೆಕ್' ಮಳಿಗೆಗಳನ್ನು ತೆರೆಯಲು ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಮುಂದಾಗಿದೆ. ಆ ಮೂಲಕ, ವಾರ್ಷಿಕ ₹150 ಕೋಟಿಯಿಂದ ₹200 ಕೋಟಿ ಹೆಚ್ಚುವರಿ ವಹಿವಾಟು ನಡೆಸುವ ಗುರಿ ಹೊಂದಿದೆ.

ರಾಜ್ಯದ ಬಹುತೇಕ ನಗರಗಳಲ್ಲಿ ಮದ್ಯ ಮಾರಾಟದ ಬೃಹತ್ ಖಾಸಗಿ ಶೋ ರೂಂಗಳು ಇವೆ. ಅದೇ ಮಾದರಿಯಲ್ಲಿ, ಬಾಡಿಗೆ ಕಟ್ಟಡಗಳಲ್ಲಿ ಎಂಎಸ್‌ಐಎಲ್ ಮದ್ಯದಂಗಡಿಗಳೂ ಶೀಘ್ರದಲ್ಲಿ ಬರಲಿವೆ.

ಮೊದಲ ಹಂತದಲ್ಲಿ ಬೆಂಗಳೂರಿನಲ್ಲಿ 10, ಬೆಳಗಾವಿ, ಮೈಸೂರು, ಮಂಗಳೂರು, ದಾವಣಗೆರೆ ಸೇರಿದಂತೆ ದೊಡ್ಡ ನಗರಗಳಲ್ಲಿ ತಲಾ 2, ಜಿಲ್ಲಾ ಕೇಂದ್ರಗಳಲ್ಲಿ ಒಂದೊಂದು ಅತ್ಯಾಧುನಿಕ ವಿನ್ಯಾಸದ ಮದ್ಯದಂಗಡಿಯನ್ನು ತೆರೆಯಲು ಎಂಎಸ್‌ಐಎಲ್ ನಿರ್ಧರಿಸಿದೆ. ಮುಂದಿನ ಹಂತದಲ್ಲಿ ಬೆಂಗಳೂರಿನಲ್ಲಿ ಇನ್ನೂ 40 ಹೈಟೆಕ್ ಮದ್ಯದಂಗಡಿಗಳು ಬರಲಿವೆ.

ಬೆಂಗಳೂರಿನಲ್ಲಿ ಸುಮಾರು 1,500 ಚದರ ಅಡಿ ವಿಸ್ತೀರ್ಣ, ಜಿಲ್ಲಾ ಕೇಂದ್ರಗಳಲ್ಲಿ 1,000 ಚದರ ಅಡಿ ವಿಸ್ತೀರ್ಣದಲ್ಲಿ ಜನಾಕರ್ಷಕವಾಗಿ ಮದ್ಯದ ಮಳಿಗೆ ತೆರೆಯಲು ಈಗಾಗಲೇ ಯೋಜನೆ ಸಿದ್ಧಗೊಂಡಿದೆ. ಬೆಂಗಳೂರು, ದಾವಣಗೆರೆ ಸೇರಿದಂತೆ ಕೆಲವು ಕಡೆ ಜಾಗವನ್ನೂ ಗುರುತಿಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರಿ ಬೇಡಿಕೆ ಇರುವ ಸ್ಕಾಚ್, ವಿಸ್ಕಿ, ವೊಡ್ಕಾ, ವೈನ್‌ಗಳು ಇಲ್ಲಿ ಸಿಗಲಿವೆ.

7ನೇ ಪುಟ ನೋಡಿ

ಎಂಎಸ್‌ಐಎಲ್ ಮದ್ಯ ಮಾರಾಟ ಸಾಧನೆ

ವರ್ಷ	ವಹಿವಾಟು (₹ ಕೋಟಿಗಳಲ್ಲಿ)
2021–22	2,399.78
2022–23	2,660.70

ಅಬಕಾರಿ ಆದಾಯ

ವರ್ಷ	ಸಂಗ್ರಹ (₹ ಕೋಟಿಗಳಲ್ಲಿ)
2020–21	23,332
2021–22	26,377
2022–23	29,920

ರಾಜ್ಯದಲ್ಲಿ ಮದ್ಯ ಮಾರಾಟ ಪರವಾನಗಿ

ಯಾವುದು?	ಎಷ್ಟಿವೆ?
ಸಿಎಲ್–2 (ಚಿಲ್ಲರೆ ಅಂಗಡಿ)	3,982
ಸಿಎಲ್–4(ಕ್ಲಬ್‌ಗಳು)	277
ಸಿಎಲ್–6ಎ(ಸ್ಟಾರ್ ಹೋಟೆಲ್‌ಗಳು)	82
ಸಿಎಲ್–7(ಹೋಟೆಲ್ ಮತ್ತು ವಸತಿಗೃಹ)	2,279
ಸಿಎಲ್–8(ಮಿಲಿಟರಿ ಕ್ಯಾಂಟೀನ್ ಮಳಿಗೆ)	66
ಸಿಎಲ್–9(ಬಾರ್ ಮತ್ತು ರೆಸ್ಟೋರೆಂಟ್)	3,626
ಸಿಎಲ್–11ಸಿ (ಎಂಎಸ್‌ಐಎಲ್ ಮದ್ಯ ಮಳಿಗೆ)	1,023
ಆರ್‌ವಿಬಿ (ರಿಟೈಲ್ ವೆಂಡ್ ಆಫ್ ಬಿಯರ್)	730
ವೈನ್ ಟವರ್	192
ವೈನ್ ಬೋಟಿಕ್	97
ಮೈಕ್ರೋ ಬ್ರೀವರಿ	68
ಇತರ	32
ಒಟ್ಟು	12,454

ದುಬಾರಿ ಬೆಲೆಯ ಮದ್ಯ ಮಾರಾಟ ಖಾಸಗಿಯವರ ಸ್ವತ್ತಲ್ಲ. ಎಂಎಸ್‌ಐಎಲ್ ಕೂಡ ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು; ಹಣವಂತರನ್ನೂ ನಮ್ಮ ಮಳಿಗೆಯತ್ತ ಸೆಳೆಯಬೇಕು

ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಪರಿಶೀಲನೆ

ಸಮಸ್ಯೆಯ ಆಗರವಾದ ವಸತಿ ಶಾಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಾಮರಾಜಪೇಟೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಹಾಗೂ ಸದಸ್ಯರು ಸೋಮವಾರ ದಿಢೀರ್ ಭೇಟಿ ನೀಡಿ ಶಾಲೆಯ ಸ್ಥಿತಿ ಪರಿಶೀಲಿಸಿದರು. ರಾಜ್ಯದ ವಿವಿಧ ಜಿಲ್ಲೆಯ 200 ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುತ್ತಿದ್ದಾರೆ.

ವಸತಿ ಶಾಲೆಯ ತರಗತಿ ನಡೆಯುವ ಕೊಠಡಿಗಳು ಶಿಥಿಲಗೊಂಡಿದ್ದು, ಸಣ್ಣ ಮಳೆಗೂ ಕೊಠಡಿಗಳು ಸೋರುತ್ತಿವೆ. ಕುಡಿಯಲು ಶುದ್ಧ ನೀರು ಲಭಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.

ಸ್ನಾನದ ಕೋಣೆಯಲ್ಲಿ ಬಳಸಿದ ನೀರು ಸರಾಗವಾಗಿ ಹೊರಗೆ ಹರಿಯುತ್ತಿಲ್ಲ. ಮಲಗಲು ಎಲ್ಲರಿಗೂ ಕಾಟ್, ಬೆಡ್‌ಗಳ ವ್ಯವಸ್ಥೆ ಇಲ್ಲ. ತರಗತಿಯಲ್ಲಿ ಡೆಸ್ಕ್ ವ್ಯವಸ್ಥೆ ಇಲ್ಲ. ಫ್ಯಾನ್ ಕೆಟ್ಟು ಹೋಗಿದೆ ಎಂದು ಹೇಳಿದರು.

10ನೇ ತರಗತಿಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಕೂಲವಾಗುವ ಡೆಸ್ಕ್‌ಗಳನ್ನು ಕೊಡಿಸಿ ಎಂದು ಕೋರಿದರು. ರಾಜಧಾನಿಯ ವಸತಿ ಶಾಲೆಯ ಸ್ಥಿತಿಯೇ ಹೀಗಾದರೆ ಗ್ರಾಮೀಣ ಪ್ರದೇಶಗಳ ವಸತಿ ಶಾಲೆಗಳ ಪರಿಸ್ಥಿತಿ ಹೇಗೆ ಎಂದು ಕೆ. ನಾಗಣ್ಣಗೌಡ ಅವರು ಪ್ರಶ್ನಿಸಿದರು.

ಶಿಕ್ಷಣ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದೇ ನಡೆಯಬೇಕು. ಮಕ್ಕಳ ರಕ್ಷಣಾ ನೀತಿ ಜಾರಿಗೆ ಬಂದಿದೆ. ಆದರೆ, ಈ ಶಾಲೆಯಲ್ಲಿ ಮಕ್ಕಳ ರಕ್ಷಣಾ ನೀತಿ ಹಾಗೂ ಮಕ್ಕಳ ಸಂರಕ್ಷಣಾ ಸಮಿತಿ ರಚಿಸಿಲ್ಲ ಎಂದು ಸದಸ್ಯ ಶಶಿಧರ ಕೋಸಂಬೆ ಬೇಸರ ವ್ಯಕ್ತಪಡಿಸಿದರು.

ಶಾಲೆಯ ಅಡುಗೆ ಕೋಣೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಶುಚಿತ್ವ ಕಾಪಾಡಬೇಕು. ಕಸ ಗುಡಿಸಲು ಶಾಲಾ ಮಕ್ಕಳನ್ನು ಬಳಕೆ ಮಾಡಿಕೊಳ್ಳಬಾರದು ಎಂದು ಸದಸ್ಯ ಶೇಖರ್ ಗೌಡ ರಾಮತನಾಳ ಅವರು ವಾರ್ಡ್‌ನ ಶಕುಂತಾ ಅವರಿಗೆ ತಾಕೀತು ಮಾಡಿದರು. ವಸತಿ ಶಾಲೆಯ ಪ್ರಾಂಶುಪಾಲರಾದ ಜ್ಯೋತಿ ಅವರು ಇದ್ದರು.



ನಗರದ ಚಾಮರಾಜಪೇಟೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳ ಸಮಸ್ಯೆಯನ್ನು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಹಾಗೂ ಸದಸ್ಯರು ಆಲಿಸಿದರು.

ಚಲುವರಾಯಸ್ವಾಮಿ ವಿರುದ್ಧದ ಆರೋಪ

ಹೈಕೋರ್ಟ್‌ನಿಂದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆ ಜಾರಿಗೆ ಆಗ್ರಹಿಸಿ ನಡೆಸಲಾದ ಪಾದಯಾತ್ರೆ ವೇಳೆ ಕೋವಿಡ್ ನಿಯಮ ಉಲ್ಲಂಘಿಸಿದ ಆರೋಪದಡಿ ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ವಿರುದ್ಧ ಕನಕಪುರ ತಾಲ್ಲೂಕಿನ ಐಜೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.



ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ 42ನೇ ಎಸಿಎಂಎಂ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಪಡಿಸುವಂತೆ ಕೋರಿ ಚಲುವರಾಯಸ್ವಾಮಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

ಇದೇ ಆರೋಪದಡಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಐಜೂರು ಠಾಣಾ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ಈ ಹಿಂದೆ ರದ್ದುಪಡಿಸಿತ್ತು. ಇದೇ ಆದೇಶವನ್ನು ಪರಿಗಣಿಸಿದ ನ್ಯಾಯಪೀಠ ಚಲುವರಾಯಸ್ವಾಮಿ ವಿರುದ್ಧದ ಪ್ರಕರಣವನ್ನೂ ರದ್ದುಪಡಿಸಿ ಸೋಮವಾರ ಆದೇಶಿಸಿದೆ.

ಸ್ವಯಂಪ್ರೇರಿತ ದೂರು ದಾಖಲಿಸಲು ಆಗ್ರಹ

ಬೆಂಗಳೂರು: 'ಕೃಷಿ ಸಚಿವ ಚಲುವರಾಯಸ್ವಾಮಿ ಅವರ ವಿರುದ್ಧ ಲೋಕಾಯುಕ್ತ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕು. ಅವರನ್ನು ಮುಖ್ಯಮಂತ್ರಿ ಸಚಿವ ಸಂಪುಟದಿಂದ ವಜಾಗೊಳಿಸಬೇಕು' ಎಂದು ಆಮ್ ಆದ್ಮಿ ಪಕ್ಷದ ಉಪಾಧ್ಯಕ್ಷ ಮೋಹನ್ ದಾಸರಿ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕೃಷಿ ಸಚಿವರು, ತಮ್ಮ ಇಲಾಖೆಯ ಅಧಿಕಾರಿಗಳಿಂದ ತಿಂಗಳಿಗೆ ತಲಾ ₹ 6ರಿಂದ 8 ಲಕ್ಷ ಕೇಳುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಅಧಿಕಾರಿಗಳು ರಾಜ್ಯಪಾಲರಿಗೂ ದೂರ ನೀಡಿದ್ದಾರೆ. ಅದರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಾಲೆಷ್ಟು ಎಂದು ಜನರು ಕೇಳುವ ಮೊದಲು ಚಲುವರಾಯಸ್ವಾಮಿ ಅವರನ್ನು ತಕ್ಷಣ ವಜಾಗೊಳಿಸಬೇಕು' ಎಂದು ಆಗ್ರಹಿಸಿದರು.

'ಸಚಿವರ ವಿರುದ್ಧ ರಾಜ್ಯಪಾಲರಿಗೆ ಧೈರ್ಯವಾಗಿ ದೂರು ಸಲ್ಲಿಸಿರುವ ಅಧಿಕಾರಿಗಳಿಗೆ ಸರ್ಕಾರ ರಕ್ಷಣೆ ನೀಡಬೇಕು. ಸಿ.ಎಂ ಮತ್ತು ಡಿಸಿಎಂ ಖುದ್ದಾಗಿ ಪ್ರಕರಣವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು.

'ಹಿಂದಿನ ಬಿಜೆಪಿ ಸರ್ಕಾರದ ಶೇ 40 ಕಮಿಷನ್ ವಿರುದ್ಧ ಸಿದ್ದರಾಮಯ್ಯ ರಾಜ್ಯದಾದ್ಯಂತ ಹೋರಾಟ ನಡೆಸಿದ್ದರು. ಆದರೆ, ಈಗ ಬಿಜೆಪಿ ಸರ್ಕಾರ ಹೋಗಿ ಕಾಂಗ್ರೆಸ್ ಸರ್ಕಾರ ಬಂದಿದೆ. ಭ್ರಷ್ಟಾಚಾರ, ಕಮಿಷನ್ ದಂಧೆ ಅಸ್ತಿತ್ವ ಹಿಂದಿನಂತೆಯೇ ಇದೆ' ಎಂದು ಹೇಳಿದರು.

ಮುಖಂಡರಾದ ಜಗದೀಶ್ ಚಂದ್ರ, ಸಾಮಾಜಿಕ ಜಾಲತಾಣಗಳ ಮುಖ್ಯಸ್ಥ ದರ್ಶನ್ ಜೈನ್ ಇದ್ದರು.

ಪ್ರತಿಭಟನೆ 10ಕ್ಕೆ

ಬೆಂಗಳೂರು: ಪಿಂಚಣಿದಾರರ ಅಹವಾಲು ಮಂಡಿಸಲು ಕೇಂದ್ರ ಸಚಿವರ ಕಚೇರಿಗೆ ತೆರಳಿದ್ದ ರಾಷ್ಟ್ರೀಯ ಸಂಘರ್ಷ ಸಮಿತಿ ಅಧ್ಯಕ್ಷ ಕಮಾಂಡರ್ ಅಶೋಕ್ ರಾವತ್ ಮೇಲೆ ನಡೆಸಿರುವ ಹಲ್ಲೆಯನ್ನು ಖಂಡಿಸಿ ಆ.10ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿಯ ಆವರಣದಲ್ಲಿ 'ಇಪಿಎಸ್-95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆ' ಮತ್ತು ರಾಷ್ಟ್ರೀಯ ಸಂಘರ್ಷ ಸಮಿತಿ ಜಂಟಿಯಾಗಿ ಪ್ರತಿಭಟನೆ ನಡೆಸಲಿದೆ.

ಕನಿಷ್ಠ ಪಿಂಚಣಿ ₹7,500, ಭತ್ಯೆ, ವೈದ್ಯಕೀಯ ಸೌಲಭ್ಯ ನೀಡಬೇಕು ಸಹಿತ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಹಲವು ಬಾರಿ ಮನವಿ ಮಾಡಿದ್ದರೂ ಕೇಂದ್ರ ಸರ್ಕಾರ ಸ್ಪಂದಿಸಿರಲಿಲ್ಲ. ಕೇಂದ್ರ ಸಚಿವರನ್ನು ಭೇಟಿ ಮಾಡಿ ಮಾತುಕತೆಗೆ ತೆರಳಿದ್ದ ವೇಳೆ ಹಲ್ಲೆ ನಡೆಸಲಾಗಿದೆ. ಹಲ್ಲೆ ವಿರೋಧಿಸಿ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಎಲ್ಲರೂ ಭಾಗವಹಿಸಿ ಶಕ್ತಿ ಪ್ರದರ್ಶಿಸಬೇಕು ಎಂದು ಇಪಿಎಸ್-95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಕಾರ್ಯಾಧ್ಯಕ್ಷ ನಂಜುಂಡೇಗೌಡ ತಿಳಿಸಿದ್ದಾರೆ.

ಕಾವ್ಯ ಜಗತ್ತಿನ ಮಾಂತ್ರಿಕ ಕಿ.ರಂ. ನಾಗರಾಜ್

'ಕಾಡುವ ಕಿ.ರಂ' ಅಹೋರಾತ್ರಿ ಕಾರ್ಯಕ್ರಮ: ಕವಿಗೋಷ್ಠಿ, ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾತಿನಲ್ಲಿಯೇ ಮಾಂತ್ರಿಕತೆ ಸೃಷ್ಟಿಸುತ್ತಿದ್ದ ಕಿ.ರಂ ನಾಗರಾಜ್ ಅವರು ಕಾವ್ಯ ಜಗತ್ತಿನ ಮಾಂತ್ರಿಕ ಶಕ್ತಿಯಾಗಿದ್ದರು' ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಬಣ್ಣಿಸಿದರು.

ನಗರದಲ್ಲಿ ಸೋಮವಾರ ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಶನ್, ಮಿಂಚುಳ್ಳಿ ಸಾಹಿತ್ಯ ಪತ್ರಿಕೆ ಆಯೋಜಿಸಿದ್ದ 'ಕಾಡುವ ಕಿ.ರಂ ಅಹೋರಾತ್ರಿ ಕಾರ್ಯಕ್ರಮ'ದಲ್ಲಿ ಅವರು ಮಾತನಾಡಿದರು.

'ಪ್ರಾಧ್ಯಾಪಕರಾಗಿದ್ದ ಅವಧಿಯಲ್ಲಿ ಕಿರಂ ಅವರು ವಿದ್ಯಾರ್ಥಿಗಳು ಅರಿವು ವಿಸ್ತಾರಗೊಳಿಸಿದ್ದರು. ಅಲ್ಲದೇ ಸಾಹಿತ್ಯದೊಂದಿಗೆ ಇತರೆ ವಿಚಾರಗಳನ್ನೂ ಸಮ್ಮಿಳಿತಗೊಳಿಸಿ ಬೋಧಿಸುತ್ತಿದ್ದರು' ಎಂದು ಹೇಳಿದರು.

'ಸಂಗೀತ, ಆಹಾರ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸೌಂದರ್ಯ ಪ್ರಜ್ಞೆ ಹುಡುಕುವ ಆಸಕ್ತಿ ಅವರಲ್ಲಿತ್ತು. ನಮ್ಮ ನಡುವೆ ಇಂದು ಬೇಕಾದಷ್ಟು ಸಾಹಿತಿಗಳು ಸಿಗುತ್ತಾರೆ. ಆದರೆ, ಸಾಹಿತ್ಯದೊಂದಿಗೆ ಸಾಹಿತ್ಯೇತರ ವಿಚಾರಗಳ ಬಗ್ಗೆಯೂ ಆಸಕ್ತಿಯುಳ್ಳವರ ಸಂಖ್ಯೆ ಕಡಿಮೆಯೇ. ಆದರೆ, ಕಿ.ರಂ ಅವರಿಗೆ ಸಾಹಿತ್ಯೇತರ ವಿಚಾರಗಳಲ್ಲೂ ಆಳವಾದ ಜ್ಞಾನವಿತ್ತು' ಎಂದು ಹೇಳಿದರು.

'ಯಾವುದೇ ಸಂದರ್ಭದಲ್ಲೂ ಪುರಸ್ಕಾರ ವಾಪಸ್ ನೀಡುವುದಿಲ್ಲ ಎನ್ನುವ ಟಿಪ್ಪಣಿ ಬರೆಸಿಕೊಂಡು ಪುರಸ್ಕಾರ ನೀಡುವಂತೆ ಕೇಂದ್ರ ಸರ್ಕಾರವು ಪ್ರಕಟಣೆ ಹೊರಡಿಸಿದೆ. 50 ವರ್ಷಗಳ ಹಿಂದೆಯೇ ಈ ರೀತಿಯ ಕಾಲ ಎದುರಾಗಬಹುದು ಎಂದು ಕಿ.ರಂ ಊಹಿಸಿದ್ದರು. ಅದರ ಕುರಿತು ಲೇಖನವನ್ನೂ ಬರೆದಿದ್ದರು' ಎಂದರು.

ಆಯೋಜಕ ಪ್ರದೀಪ್ ಮಾಲ್ಗುಡಿ ಮಾತನಾಡಿ, 'ಇದು 10ನೇ ವರ್ಷದ ಕಾರ್ಯಕ್ರಮ. ಕಿ.ರಂ ಅವರು ರಾತ್ರಿ ವೇಳೆ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಅದರ ಪ್ರೇರಣೆಯಿಂದ ಕಾಡುವ ಕಿ.ರಂ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಿದೆ. ಇಂದು ಕಾವ್ಯಕ್ಕೆ ಮನ್ನಣೆ ಸಿಗುತ್ತಿಲ್ಲ. ವಿಮರ್ಶೆಯನ್ನೂ ಮಾಡುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕವಿ ಎಚ್.ಎಸ್.ಶಿವಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

ಚಿತ್ರಕಲಾವಿದ ಎಂ.ಎಸ್.ಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಎನ್. ಕವನಾ ಇದ್ದರು.

ಇದೇ ವೇಳೆ ಶಂಕರ್ ಸಿಹಿಮೊಗ್ಗೆ ಹಾಗೂ ಸೂರ್ಯಕೀರ್ತಿ ಸಂಪಾದನೆಯ 'ಕಿ.ರಂ ಹೊಸ ಕವಿತೆ' ಕೃತಿ ಬಿಡುಗಡೆ ಮಾಡಲಾಯಿತು. ರಾತ್ರಿಯಿಡೀ ನಾಟಕ ಪ್ರದರ್ಶನ, ಜನಪದ ಗಾಯನ, ಕವಿಗೋಷ್ಠಿಗಳು ನಡೆದವು.



ನಗರದಲ್ಲಿ ಸೋಮವಾರ ನಡೆದ 'ಕಾಡುವ ಕಿ.ರಂ ಕಾರ್ಯಕ್ರಮ'ದಲ್ಲಿ ಸಾಹಿತಿಗಳಾದ ನಾಗೇಶ್ ದಸೂಡಿ, ನಾಗತಿಹಳ್ಳಿ ರಮೇಶ್, ಕಲಾವಿದೆ ಸಿ.ಎಸ್.ನಿರ್ಮಲಕುಮಾರಿ, ಮೌಢ್ಯದ ವಿರುದ್ಧ ವಿಜ್ಞಾನದ ನಡಿಗೆ ಕಾರ್ಯಕ್ರಮ ಆಯೋಜಕ ನರೇಂದ್ರ ನಾಯಕ್, ಸಾಹಿತಿಗಳಾದ ಆರ್.ಜಿ.ಹಳ್ಳಿ ನಾಗರಾಜ್, ಸುಬ್ಬು ಹೊಲೆಯಾರ್ ಅವರಿಗೆ '2023ನೇ ಸಾಲಿನ ಕಿ.ರಂ ನಾಗರಾಜ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು. – ಪ್ರಜಾವಾಣಿ ಚಿತ್ರ

ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 8ರಂದು ಬೆಳಿಗ್ಗೆ 10ರಿಂದ ಸಂಜೆ 4ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸ್ಥಳಗಳು: ರಾಮಯ್ಯ ಆಸ್ಪತ್ರೆ, ಪೈಪ್‌ಲೈನ್ ರಸ್ತೆ, ಎಂ.ಎಸ್.ಆರ್ ನಗರ, ಬಿಇಎಲ್ ರಸ್ತೆ, ಸದಾಶಿವನಗರ ಪೊಲೀಸ್ ಠಾಣೆ, ಎಜಿಎಸ್ ಲೇಔಟ್, ಜಲದರ್ಶಿನಿ ಲೇಔಟ್, ಎ.ಕೆ. ಕಾಲೊನಿ, ಶ್ರೀನಿಕೇತ್ ಅಪಾರ್ಟ್‌ಮೆಂಟ್, ಕಾಫಿ ಡೇ, ಸೀನಪ್ಪ ಲೇಔಟ್, ಇಸ್ರೊ, ಡಾಲರ್ಸ್ ಕಾಲೊನಿ, ಚಿಕ್ಕಮಾರನಹಳ್ಳಿ, ಗೌರಿ ಅಪಾರ್ಟ್‌ಮೆಂಟ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆಯೂ ವ್ಯತ್ಯಯ

ಮತ್ತಿಕೆರೆ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 9ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸ್ಥಳಗಳು: ಲೊಟ್ಟೆಗೊಲ್ಲಹಳ್ಳಿ, ಮುನಿಹನುಮಯ್ಯ ಕಾಲೊನಿ, ಆರ್. ಕೆ. ಗಾರ್ಡನ್, ಸಂಜೀವಪ್ಪ ಕಾಲೊನಿ, ಎಂಎಲ್‌ಎ ಲೇಔಟ್, ನೇತಾಜಿನಗರ, ಮತ್ತಿಕೆರೆ, ಮೋಹನಕುಮಾರನಗರ, ಜೆ.ಪಿ. ಪಾರ್ಕ್, ಬಿ.ಕೆ. ನಗರ, ಎಲ್‌ಐಸಿ ಕಾಲೊನಿ, ಪಂಪನಗರ, ಯಶವಂತಪುರ, ಎಚ್‌ಎಂಟಿ ಲೇಔಟ್, ಗುರುಮೂರ್ತಿರೆಡ್ಡಿ ಕಾಲೊನಿ, ಬೃಂದಾವನ ನಗರ, ಮತ್ತಿಕೆರೆ 2ನೇ ಹಂತ, ವಿ.ಆರ್. ಲೇಔಟ್, ಎಸ್‌ಬಿಎಂ ಕಾಲೊನಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ

ಜೂಜಾಟ: ನಾಲ್ವರು ವಶಕ್ಕೆ

ವಿಜಯಪುರ (ದೇವನಹಳ್ಳಿ): ಹೋಬಳಿಯ ಎ.ರಂಗನಾಥಪುರ ಗ್ರಾಮದಲ್ಲಿ ರಾಜಕಾಲುವೆಯ ಬಳಿ ಭಾನುವಾರ ಜೂಜಾಟದಲ್ಲಿ ತೊಡಗಿದ್ದ ನಾಲ್ವರನ್ನು ವಿಜಯಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಂಜುನಾಥ್, ಮುಜಾಹಿದ್, ಅಜಾಜ್, ಗೋವಿಂದ ಬಂಧಿತರು. ಅವರಿಂದ ₹16,510 ವಶಪಡಿಸಿಕೊಳ್ಳಲಾಗಿದೆ. ವಿಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾನಮತ್ತರಾಗಿ ಅಡ್ಡಾದಿಡ್ಡಿ ಕಾರು ಚಾಲನೆ ● ರಾಮನಗರ ಜಿ.ಪಂ. ಮಾಜಿ ಸದಸ್ಯೆಯ ಮಗ ಬಂಧನ

ಸರಣಿ ಅಪಘಾತ: ತಂದೆ–ಮಗ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆಯೊಬ್ಬರ ಮಗ ಪಾನಮತ್ತರಾಗಿ ಅಡ್ಡಾದಿಡ್ಡಿ ಕಾರು ಚಲಾಯಿಸಿ ಸರಣಿ ಅಪಘಾತವನ್ನುಂಟು ಮಾಡಿದ್ದು, ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ರಘು ನಾಯಕ್ (65) ಹಾಗೂ ಅವರ ಮಗ ಚಿರಂಜೀವಿ (25) ಮೃತಪಟ್ಟಿದ್ದಾರೆ.

'ದಾವಣಗೆರೆಯ ರಘು ನಾಯಕ್, ಮಗ ಚಿರಂಜೀವಿ ಹಾಗೂ ಕುಟುಂಬದವರ ಜೊತೆ ಸಿಂಗಪುರ ಲೇಔಟ್ ಬಳಿಯ ಕುವೆಂಪುನಗರದಲ್ಲಿ ವಾಸವಿದ್ದರು. ಪುಸ್ತಕ ಮಾರಾಟ ವ್ಯಾಪಾರ ಮಾಡುತ್ತಿದ್ದರು. ಇವರಿಬ್ಬರು ಸಂಬಂಧಿ ವಾಸು ನಾಯಕ್ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಸದಾಶಿವನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಅಪಘಾತಕ್ಕೆ ಕಾರಣವಾಗಿರುವ ಆಕಾಶ್ ಹಾಗೂ ಕಾರಿನಲ್ಲಿದ್ದ ನಿಖಿತ್ ಅವರನ್ನು ಬಂಧಿಸಲಾಗಿದೆ. ಇಬ್ಬರೂ ಮದ್ಯ ಕುಡಿದಿರುವುದು ಪರೀಕ್ಷೆಯಿಂದ ಗೊತ್ತಾಗಿದೆ. ಕಾರಿನಲ್ಲಿದ್ದ ಮೂವರು ಯುವಕರು ಪರಾರಿಯಾಗಿದ್ದಾರೆ. ಅಪಘಾತದಲ್ಲಿ ರಘು ಅವರ ಅಳಿಯ ವಾಸು ನಾಯಕ್ ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ತಿಳಿಸಿದರು.

ಮದ್ಯದ ಪಾರ್ಟಿ ಮಾಡಿದ್ದ ಸ್ನೇಹಿತರು: 'ರಾಮನಗರ ಜಿ.ಪಂ. ಸದಸ್ಯೆಯೊಬ್ಬರ ಮಗ ಆಕಾಶ್, ಮತ್ತಿಕೆರೆಯಲ್ಲಿ ವಾಸವಿದ್ದ. ಈತನ ತಂದೆ, ಗುತ್ತಿಗೆದಾರ. ಸ್ನೇಹಿತರ ಜೊತೆ ಭಾನುವಾರ ರಾತ್ರಿ ಆಕಾಶ್ ಮದ್ಯದ ಪಾರ್ಟಿ ಮಾಡಿದ್ದ. ರಾತ್ರಿ 11.45ರ ಸುಮಾರಿಗೆ ಮಾರುತಿ ಇಕೊ ಕಾರಿನಲ್ಲಿ ನ್ಯೂ ಬಿ.ಇ.ಎಲ್ ರಸ್ತೆಯಲ್ಲಿ ಹೊರಟಿದ್ದ' ಎಂದು ಪೊಲೀಸರು ಹೇಳಿದರು.

'ಪಾನಮತ್ತನಾಗಿದ್ದ ಆಕಾಶ್, ಅತೀ ವೇಗವಾಗಿ ಅಡ್ಡಾದಿಡ್ಡಿ ಕಾರು ಚಲಾಯಿಸಿದ್ದ. ಇಸ್ರೊ ಜಂಕ್ಷನ್‌ನಲ್ಲಿ ಆಟೊವೊಂದಕ್ಕೆ ಕಾರು ಗುದ್ದಿತ್ತು. ನಂತರ, ಸಿಗ್ನಲ್‌ನಲ್ಲಿ ನಿಂತಿದ್ದ ದ್ವಿಚಕ್ರ ವಾಹನಕ್ಕೂ ಕಾರು ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ದ್ವಿಚಕ್ರ ವಾಹನದಲ್ಲಿದ್ದ ರಘು ಹಾಗೂ ಚಿರಂಜೀವಿ ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಆಕಾಶ್‌ನನ್ನು ಹಿಡಿದುಕೊಟ್ಟ ಜನ: 'ಅಪಘಾತದ ಬಳಿಕ ಕಾರು ಸಮೇತ ಎಲ್ಲರೂ ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದರು. ಆದರೆ, ಸ್ಥಳೀಯರು ಕಾರು ಬೆನ್ನಟ್ಟಿ ಮಾರ್ಗಮಧ್ಯೆ ಅಡ್ಡಗಟ್ಟಿದ್ದರು' ಎಂದು ಪೊಲೀಸರು ಹೇಳಿದರು.

'ಕಾರಿನಿಂದ ಇಳಿದಿದ್ದ ನಿಖಿತ್ ಹಾಗೂ ಮೂವರು ಯುವಕರು ಸ್ಥಳದಿಂದ ಓಡಿಹೋಗಿದ್ದರು. ಚಾಲಕ ಆಕಾಶ್‌ನನ್ನು ಸ್ಥಳೀಯರು ಬೆನ್ನಟ್ಟಿ ಹಿಡಿದಿದ್ದರು. ಆತನನ್ನು ಸಿಬ್ಬಂದಿ ವಶಕ್ಕೆ ಪಡೆದಿದ್ದರು. ಬಂಧನ ಭೀತಿಯಲ್ಲಿದ್ದ ನಿತಿನ್ ಠಾಣೆಗೆ ಬಂದು ಶರಣಾಗಿದ್ದಾನೆ' ಎಂದು ಪೊಲೀಸರು ಹೇಳಿದರು.

'ಕ್ಯಾಮೆರಾ ದೃಶ್ಯಾವಳಿ ಸಂಗ್ರಹ'

'ಅಪಘಾತಕ್ಕೆ ಸಂಬಂಧಪಟ್ಟಂತೆ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಲಾಗಿದೆ. ಕಾರಿನಲ್ಲಿದ್ದ ಎಲ್ಲರೂ ಮದ್ಯ ಕುಡಿದಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಂಚಾರ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಭಾನುವಾರ ರಾತ್ರಿ ಸಂಭವಿಸಿರುವ ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಅಪರಾಧ ಸುದ್ದಿಗಳು

ಸ್ಕೂಟರ್ ಉರುಳಿ ಮಗಳು ಸಾವು, ತಂದೆಗೆ ಗಾಯ

ಬೆಂಗಳೂರು: ಪೀಣ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸ್ಕೂಟರ್ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಬಾಲಕಿ ನಕ್ಷತ್ರ (8) ಮೃತಪಟ್ಟಿದ್ದಾರೆ. ಆಕೆಯ ತಂದೆ ರಮೇಶ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಗಂಗೊಂಡನಹಳ್ಳಿ ನಿವಾಸಿ ರಮೇಶ್ ಹಾಗೂ ಮಗಳು ನಕ್ಷತ್ರ, ನೆಲಗೆದರನಹಳ್ಳಿ ಮುಖ್ಯರಸ್ತೆಯಲ್ಲಿ ಭಾನುವಾರ ರಾತ್ರಿ ಸ್ಕೂಟರ್‌ನಲ್ಲಿ ಹೊರಟಿದ್ದಾಗ ಅವಘಡ ಸಂಭವಿಸಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸರು ಹೇಳಿದರು. 'ರಮೇಶ್ ಅವರು ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ನಕ್ಷತ್ರ, ಎರಡನೇ ತರಗತಿಯಲ್ಲಿ ಓದುತ್ತಿದ್ದಳು' ಎಂದರು.

ಬ್ಯಾಗ್ ಮರೆತು ಬಂದಿದ್ದ ತಂದೆ: 'ಭಾನುವಾರ ಕೆಲಸಕ್ಕೆ ಹೋಗಿದ್ದ ರಮೇಶ್, ಎಂದಿನಂತೆ ಸಂಜೆ ಮನೆಗೆ ವಾಪಸ್ಸಾಗಿದ್ದರು. ಆದರೆ, ಊಟದ ಬ್ಯಾಗ್ ಕಾರ್ಖಾನೆಯಲ್ಲಿ ಮರೆತು ಬಂದಿದ್ದರು' ಎಂದು ಪೊಲೀಸರು ತಿಳಿಸಿದರು. 'ಬ್ಯಾಗ್ ತರುವುದಕ್ಕಾಗಿ ಪುನಃ ಕಾರ್ಖಾನೆಯತ್ತ ಹೋಗಲು ಸಜ್ಜಾಗಿದ್ದರು. ಮಗಳು ನಕ್ಷತ್ರ ಸಹ ತಂದೆ ಜೊತೆ ಹೋಗುವುದಾಗಿ ಹಠ ಮಾಡಿದ್ದಳು. ಹೀಗಾಗಿ, ಮಗಳನ್ನು ಸ್ಕೂಟರ್‌ನಲ್ಲಿ ಹತ್ತಿಸಿಕೊಂಡು ರಮೇಶ್ ಕಾರ್ಖಾನೆಯತ್ತ ತೆರಳುತ್ತಿದ್ದರು' ಎಂದರು.

'ಮಾರ್ಗಮಧ್ಯೆಯೇ ಸ್ಕೂಟರ್ ಉರುಳಿಬಿದ್ದಿತ್ತು. ತಂದೆ–ಮಗಳು ಇಬ್ಬರೂ ವಾಹನ ಸಮೇತ ರಸ್ತೆಗೆ ಬಿದ್ದಿದ್ದರು. ತೀವ್ರ ಗಾಯಗೊಂಡಿದ್ದ ಬಾಲಕಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆಕೆ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ತಿಳಿಸಿದರು.

ಪಿಎಸ್‌ಐ ಹಗರಣ: ಅರ್ಜಿ ವಿಚಾರಣೆ ಇದೇ 16ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಆರೋಪದ ಹಿನ್ನೆಲೆಯಲ್ಲಿ ಈ ಮೊದಲು ನಡೆಸಿದ್ದ ಲಿಖಿತ ಪರೀಕ್ಷೆ ರದ್ದುಪಡಿಸಿ, ಹೊಸದಾಗಿ ಪರೀಕ್ಷೆ ನಡೆಸಲು ಈ ಹಿಂದಿನ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿ ಆಯ್ಕೆಯಾಗಿದ್ದ ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್‌ಗೆ ಇದೇ 16ಕ್ಕೆ ಮುಂದೂಡಿದೆ.

ಈ ಕುರಿತಂತೆ ಎನ್.ವಿ. ಚಂದನ್ ಸೇರಿದಂತೆ ಆಯ್ಕೆ ಪಟ್ಟಿಯಲ್ಲಿ ಹೆಸರಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಹಾಗೂ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ವಾದ ಮಂಡನೆಗೆ ಸ್ವಲ್ಪ ಕಾಲಾವಕಾಶ ನೀಡುವಂತೆ ಕೋರಿದರು. ಇದೇ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರೂ, ಅರ್ಜಿಯನ್ನು ಇದೇ 16ರಂದು ವಿಚಾರಣೆಗೆ ನಿಗದಿಪಡಿಸುವಂತೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು. ಅಂತೆಯೇ, ಅಂದು ಅರ್ಜಿಗೆ ಸಂಬಂಧಿಸಿದ ಉಭಯ ಪಕ್ಷಗಾರರು ವಾದ ಮಂಡನೆಗೆ ಸಿದ್ಧವಾಗಿರಬೇಕು ಎಂದು ಮೌಖಿಕವಾಗಿ ಸೂಚಿಸಿತು.

ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಪಿಎಸ್‌ಐ ನೇಮಕಾತಿಗೆ ನಡೆಸಲಾಗಿದ್ದ ಲಿಖಿತ ಪರೀಕ್ಷೆಯನ್ನು ಈ ಹಿಂದಿನ ಬಿಜೆಪಿ ಸರ್ಕಾರ ರದ್ದುಪಡಿಸಿತ್ತು. ಮರುಪರೀಕ್ಷೆ ನಡೆಸುವುದಾಗಿ 2022ರ ಏಪ್ರಿಲ್ 29ರಂದು ಆದೇಶಿಸಿತ್ತು. ಈ ಆದೇಶ ರದ್ದು ಕೋರಿ ಆಯ್ಕೆಯಾಗಿದ್ದ ಕೆಲ ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಗೆ (ಕೆಎಟಿ) ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಕೆಎಟಿ 2022ರ ಜುಲೈ 19ರಂದು ವಜಾಗೊಳಿಸಿತ್ತು.

ಸರಗಳವು: ಸಿಕ್ಕಿಬಿದ್ದ ಅಚ್ಯುತ್‌ಕುಮಾರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಜೈಲು ವಾಸ ಅನುಭವಿಸಿ ಜಾಮೀನು ಮೇಲೆ ಹೊರಬಂದು ಪುನಃ ಕಳ್ಳತನ ಎಸಗುತ್ತಿದ್ದ ಆರೋಪಿ ಅಚ್ಯುತ್‌ಕುಮಾರ್ ಅಲಿಯಾಸ್ ವಿಶ್ವನಾಥ್‌ನನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡದ ನಿವಾಸಿ ಅಚ್ಯುತ್‌ಕುಮಾರ್, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಮಾರ್ಚ್‌ನಲ್ಲಿ ಈತನನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದರು. ಏಪ್ರಿಲ್‌ನಲ್ಲಿ ಜಾಮೀನು ಪಡೆದು ಹೊರಗೆ ಬಂದಿದ್ದ ಈತ, ಬನಶಂಕರಿ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಸರಗಳವು ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ಕೃತ್ಯದ ಬಳಿಕ ಆರೋಪಿ ಮೈಸೂರಿಗೆ ಹೋಗಿ ತಲೆಮರೆಸಿಕೊಂಡಿದ್ದ. ಮಹಿಳೆ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು, ಮೈಸೂರಿನಲ್ಲಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಈತನಿಂದ ₹ 9.40 ಲಕ್ಷ ಮೌಲ್ಯದ 4 ಚಿನ್ನದ ಸರ ಹಾಗೂ ಪಲ್ಸರ್ ಬೈಕ್ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಸುಳಿವು ಸಿಗಬಾರದೆಂದು ಮನೆ ಬದಲಾವಣೆ: 'ಆರೋಪಿ ಅಚ್ಯುತ್ ಕುಮಾರ್ ಇದುವರೆಗೂ ರಾಜ್ಯದ 160 ಕಡೆಗಳಲ್ಲಿ ಸರಗಳವು ಮಾಡಿದ್ದಾನೆ. ತನ್ನ ವಿಳಾಸದ ಬಗ್ಗೆ ಸುಳಿವು ಸಿಗಬಾರದೆಂಬ ಕಾರಣಕ್ಕೆ ಆರೋಪಿ, ಪದೇ ಪದೇ ಮನೆ ಬದಲಾಯಿಸುತ್ತಿರುತ್ತಾನೆ' ಎಂದು ಪೊಲೀಸರು ಹೇಳಿದರು.

'ಕೃತ್ಯದಿಂದ ಬಂದ ಚಿನ್ನಾಭರಣವನ್ನು ಆರೋಪಿ, ಕಡಿಮೆ ಬೆಲೆಗೆ ಪರಿಚಯಸ್ಥರಿಗೆ ಮಾರುತ್ತಿದ್ದ. ಈತನ ಪತ್ನಿಯೂ ಕೃತ್ಯಕ್ಕೆ ಸಹಕರಿಸುತ್ತಿದ್ದ ಮಾಹಿತಿ ಇದೆ. ಚಿನ್ನಾಭರಣ ಮಾರಾಟದಿಂದ ಬಂದ ಹಣವನ್ನು ಆರೋಪಿ, ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಪಲ್ಸರ್ ಬೈಕ್‌ನಲ್ಲಿ ಹೆಚ್ಚಾಗಿ ಸುತ್ತಾಡುತ್ತಿದ್ದ ಆರೋಪಿ, ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಮಹಿಳೆಯರನ್ನು ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದ' ಎಂದರು.

ಗುಂಡೇಟು ತಿಂದಿದ್ದ: 'ಅಚ್ಯುತ್‌ಕುಮಾರ್‌ನನ್ನು ಬಂಧಿಸಲು ಪಶ್ಚಿಮ ವಿಭಾಗದ ಪೊಲೀಸರು 2018ರಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ್ದರು. ಬಂಧನ ವೇಳೆ ಪೊಲೀಸರ ಮೇಲೆ ಹಲ್ಲೆಗೆ ಯತ್ನಿಸಿದ್ದ ಅಚ್ಯುತ್‌ಕುಮಾರ್‌ನನ್ನು ಕಾಲಿಗೆ ಗುಂಡು ಹಾರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಗುಂಡೇಟಿನಿಂದ ಕಾಲಿಗೆ ತೀವ್ರ ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಅಚ್ಯುತ್ ಗುಣಮುಖವಾಗಿದ್ದ. ಇದಾದ ನಂತರವೂ ಈತ ಮೇಲಿಂದ ಮೇಲೆ ಕೃತ್ಯ ಎಸಗುತ್ತಿದ್ದಾನೆ' ಎಂದು ತಿಳಿಸಿದರು.

ರೌಡಿ ಹತ್ಯೆ: 14 ಆರೋಪಿಗಳು ಬಂಧನ

ಬೆಂಗಳೂರು: ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ಮಹೇಶ್ ಹತ್ಯೆ ಪ್ರಕರಣದಲ್ಲಿ 14 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಆಗಸ್ಟ್ 4ರಂದು ಕೃತ್ಯ ಎಸಗಿದ್ದ ಆರೋಪಿಗಳು, ತಮಿಳುನಾಡಿನತ್ತ ಹೊರಟಿದ್ದರು. ಪ್ರಕರಣ ದಾಖಲಾದ ಕೆಲವೇ ಗಂಟೆಗಳಲ್ಲಿ ಹೊಸೂರು ಬಳಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಸಿದ್ದಾಪುರ ಸುನೀಲ್, ಕಣ್ಣನ್, ಪ್ರದೀಪ್, ಮನು, ಶ್ರೀನಿವಾಸ್ ಅಲಿಯಾಸ್ ಪಾಪ ಸೇರಿ 14 ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

'ಮಹೇಶ್, ಅಪರಾಧ ಹಿನ್ನೆಲೆಯುಳ್ಳವ. ಸಿದ್ದಾಪುರ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು. ಹಳೇ ವೈಷಮ್ಯದಿಂದಾಗಿ ಎದುರಾಳಿ ತಂಡದವರೇ ಈತನನ್ನು ಹತ್ಯೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಟೆಸ್ಟ್ ಡ್ರೈವ್ ನೆಪದಲ್ಲಿ ಬೈಕ್ ಕಳ್ಳತನ


ಬೆಂಗಳೂರು: 'ಗ್ರಾಹಕರ ಸೋಗಿನಲ್ಲಿ ಮನೆಗೆ ಬಂದಿದ್ದ ಅಪರಿಚಿತನೊಬ್ಬ, ಟೆಸ್ಟ್‌ಡ್ರೈವ್ ನೆಪದಲ್ಲಿ ಬೈಕ್ ಕದ್ದೊಯ್ದಿದ್ದಾನೆ' ಎಂದು ವ್ಯಕ್ತಿಯೊಬ್ಬರು ನಂದಿನಿ ಲೇಔಟ್ ಠಾಣೆಗೆ ದೂರು ನೀಡಿದ್ದಾರೆ.

'ಯಮಹಾ ಆರ್.ಎಕ್ಸ್ 135 ಬೈಕ್ ಮಾರಾಟಕ್ಕೆ ಇರಿಸಿದ್ದೆ. ಒಎಲ್‌ಎಕ್ಸ್ ಜಾಲತಾಣದಲ್ಲಿ ಫೋಟೊ ಅಪ್‌ಲೋಡ್ ಮಾಡಿದ್ದೆ. ರ್‍ಯಾಪಿಡೊ ಬೈಕ್ ಟ್ಯಾಕ್ಸಿಯಲ್ಲಿ ಬಂದಿದ್ದ ಆರೋಪಿ, ಬೈಕ್ ತೆಗೆದುಕೊಂಡು ಹೋಗಿದ್ದಾನೆ. ವಾಪಸು ಬಂದಿಲ್ಲ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸರು, 'ಬೈಕ್ ಕಳ್ಳತನ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

ನಿಧನ ವಾರ್ತೆ

ಟಿ.ಎಸ್. ಉಮೇಶ್



ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಪ್ರಸರಣ ವಿಭಾಗದ ನಿವೃತ್ತ ಉದ್ಯೋಗಿ ಟಿ.ಎಸ್. ಉಮೇಶ್ (58) ಅವರು ಸೋಮವಾರ ನಿಧನರಾದರು.

ಕುಮಾರಸ್ವಾಮಿ ಲೇಔಟ್ ನಿವಾಸಿಯಾಗಿದ್ದ ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಸ್ವಗ್ರಾಮವಾದ ತೀರ್ಥಹಳ್ಳಿ ತಾಲ್ಲೂಕಿನ ತೂದೂರು ಬಳಿಯ ಜಾವಳ್ಳಿಯಲ್ಲಿ ಮಂಗಳವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸಂಪರ್ಕಕ್ಕೆ: 98800–21116

ವೇಣುಗೋಪಾಲ್



ಬೆಂಗಳೂರು: ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ಮತ್ತು ಲೇಖಕ ಡಾ. ಸಿ.ವಿ. ವೇಣುಗೋಪಾಲ್ ಸೋಮವಾರ ಸಂಜೆ ಬೆಂಗಳೂರಿನಲ್ಲಿ ನಿಧನರಾದರು. ಅಲ್ಪಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 84 ವರ್ಷ ವಯಸ್ಸಾಗಿತ್ತು.

ವೇಣುಗೋಪಾಲ್ ಅವರಿಗೆ ಹೆಣ್ಣುಮಕ್ಕಳಾದ ವರದಾ, ವಂದನಾ ಮತ್ತು ಮಗ ವಿನೋದ್ ಇದ್ದಾರೆ. ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಹೆಬ್ಬಾಳ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳ ನೆಚ್ಚಿನ ಅಧ್ಯಾಪಕರಾಗಿದ್ದ ಅವರು, ಕೆಲಕಾಲ ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಉತ್ತಮ ಕಾರ್ಯಕ್ರಮಗಳನ್ನು ಸಂಯೋಜಿಸಿದ್ದರು.

ಕನ್ನಡದ ಹಲವು ಕಥೆ, ಕಾದಂಬರಿ ಮತ್ತು ನಾಟಕಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದರು.

ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆ ಅಲ್ವಂತೆ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು 2023-24ನೇ ಸಾಲಿನ ಬಜೆಟ್ ನಲ್ಲಿ ಘೋಷಿಸಿದ್ದ ಕೇಂದ್ರ ಸರ್ಕಾರ, ಅದಕ್ಕಾಗಿ ₹ 5,300 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದರೆ, ಈಗ ಅದು ರಾಷ್ಟ್ರೀಯ ಯೋಜನೆಯಲ್ಲ ಎನ್ನುತ್ತಿದ್ದಾರೆ' ಎಂದು ಕೇಂದ್ರ ಸರ್ಕಾರದ ವಿರುದ್ಧ ಉಪ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯೋಜನೆಗೆ ಸಂಬಂಧಿಸಿದಂತೆ ಜಲಸಂಪನ್ಮೂಲ ಇಲಾಖೆಯಲ್ಲಿ ₹ 600 ಕೋಟಿ ಮಾತ್ರ ಇದೆ. ಆದರೆ, ₹1.25 ಕೋಟಿ ಮೊತ್ತದ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ' ಎಂದು ಹೇಳಿದರು.



ಬೆಂಗಳೂರಿನ ಯಕ್ಷಸಿಂಚನ ಟ್ರಸ್ಟ್‌ನ 14ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ನಡೆದ ಬಡಗುತಿಟ್ಟು ಪೌರಾಣಿಕ ಯಕ್ಷತೋತ್ಸವದಲ್ಲಿ ಯಕ್ಷಗುರು ಐನ್ಬೈಲು ಪರಮೇಶ್ವರ ಹೆಗಡೆ ಅವರಿಗೆ 'ಸಾರ್ಥಕ ಸಾಧಕ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ಸಾಹಿತಿಗಳಾದ ಶ್ರೀಧರ್ ಡಿ.ಎಸ್., ಜಗದೀಶ್ ಶರ್ಮ ಸಂಪ, ಅಂಕಣಕಾರ ಕಿರಣ್ ಉಪಾಧ್ಯಾಯ, ಯಕ್ಷಗಾನ ಕಲಾವಿದ ಕೃಷ್ಣಮೂರ್ತಿ ತುಂಗ ಇದ್ದರು.

ಕನ್ನಡ ಪೀಠಕ್ಕೆ ನೆರವು ಕೋರಿದ ಜೆಎನ್‌ಯು ಕುಲಪತಿ

ಪ್ರಜಾವಾಣಿ ವಾರ್ತೆ

ತುಮಕೂರು: ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಕನ್ನಡ ಅಧ್ಯಯನ ಪೀಠಕ್ಕೆ ಆರ್ಥಿಕ ನೆರವು ನೀಡುವಂತೆ ಜೆಎನ್‌ಯು ಕುಲಪತಿ ಪ್ರೊ.ಶಾಂತಿಶ್ರೀ ಧೂಳಿಪುಡಿ ಪಂಡಿತ್ ಅವರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ತುಮಕೂರು ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ಘಟಿಕೋತ್ಸವದಲ್ಲಿ ಘಟಿಕೋತ್ಸವ ಭಾಷಣ ಮಾಡುವ ಸಮಯದಲ್ಲಿ ವೇದಿಕೆಯಲ್ಲಿದ್ದ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರಿಗೆ ಮನವಿ ಸಲ್ಲಿಸಿದರು.

ತಮಿಳು ಅಧ್ಯಯನ ಪೀಠದ ಚಟುವಟಿಕೆಗಳಿಗೆ ತಮಿಳುನಾಡು ಸರ್ಕಾರ ₹10 ಕೋಟಿ ಕೊಡುತ್ತಿದೆ. ಅದೇ ರೀತಿ ಕರ್ನಾಟಕ ಸರ್ಕಾರ ಸಹ ಹೆಚ್ಚಿನ ಆರ್ಥಿಕ ನೆರವು ನೀಡಿದರೆ ಕನ್ನಡ ಅಧ್ಯಯನ ಪೀಠದ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲು ಸಹಕಾರಿಯಾಗುತ್ತದೆ ಎಂದರು. ನಂತರ ಮಾತನಾಡಿದ ಸಚಿವ ಸುಧಾಕರ್ ಅವರು, ರಾಜ್ಯ ಸರ್ಕಾರದಿಂದ ಅಗತ್ಯ ಆರ್ಥಿಕ ನೆರವು ನೀಡುವ ಭರವಸೆ ನೀಡಿದರು.

ಪಿಒಪಿ, ಬಣ್ಣದ ಮೂರ್ತಿ: ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಹೋಬಳಿ ಗಡಿಮಾವು ಗ್ರಾಮದ ವಿವೇಕಾನಂದ ಕಾಲೇಜು ಬಳಿಯ ಕಂದಾಯ ಜಮೀನಿನಲ್ಲಿ ಪರಿಸರಕ್ಕೆ ಹಾನಿಕರವಾದ ಪಿಒಪಿ ಗಣೇಶ ಮೂರ್ತಿಗಳನ್ನು ಸಿದ್ಧಪಡಿಸುತ್ತಿರುವುದು ಗಮನಕ್ಕೆ ಬಂದಿದ್ದು, ಕ್ರಮ ಕೈಗೊಳ್ಳುವಂತೆ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಜಿಲ್ಲಾಧಿಕಾರಿಗೆ ಸೂಚಿಸಿದ್ದಾರೆ.

ಆ ಸ್ಥಳದಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡು ಪರಿಸರ ಮತ್ತು ಜಲ ಮಾಲಿನ್ಯಕ್ಕೆ ಮಾರಕವಾದ ಪಿಒಪಿ ಮೂರ್ತಿಗಳನ್ನು ಮಾರಾಟಕ್ಕೆ ಸಿದ್ಧಪಡಿಸಲಾಗಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಇಂತಹ ಮೂರ್ತಿಗಳನ್ನು ಸಿದ್ಧಪಡಿಸಿರುವುದನ್ನು ದೃಢಪಡಿಸಿದ್ದಾರೆ. 2019ರಲ್ಲೇ ಘಟಕ ಮುಚ್ಚಲು ಆದೇಶ ನೀಡಿದ್ದರೂ, ಕಾನೂನು ಬಾಹಿರವಾಗಿ ಮುಂದುವರಿಸಲಾಗಿದೆ. ಪ್ರಾಧಿಕಾರದಿಂದಲೂ ಅನುಮತಿ ಪಡೆದಿಲ್ಲ. ಘಟಕವನ್ನು ತಕ್ಷಣ ಮುಚ್ಚಿಸಬೇಕು ಎಂದಿದ್ದಾರೆ.

ನೀರಿನಲ್ಲಿ ಸರಿಯಾಗಿ ಕರಗದ, ಬಾವಿ, ಕೆರೆ, ಸರೋವರ, ನದಿ ನೀರನ್ನು ಕಲುಷಿತಗೊಳಿಸುವ ರಾಸಾಯನಿಕ ಬಣ್ಣ ಲೇಪಿತ, ಪಿಒಪಿ ಗಣಪತಿ ಮೂರ್ತಿಗಳ ತಯಾರಿಕೆ, ದಾಸ್ತಾನು ಮತ್ತು ಮಾರಾಟ ಮಾಡದಂತೆ, ಜನರು ಅಂತಹ ಮೂರ್ತಿಗಳನ್ನು ಬಳಸದಂತೆ ಸಚಿವ ಖಂಡ್ರೆ ಮನವಿ ಮಾಡಿದ್ದಾರೆ. ಕಲುಷಿತ ನೀರು ಸೇವನೆಯಿಂದ ರಾಜ್ಯದ ವಿವಿಧೆಡೆ ಜೀವಹಾನಿ ಪ್ರಕರಣಗಳು ನಡೆದಿವೆ.

ಹಾಗಾಗಿ, ಲೋಹಯುಕ್ತ ಅಪಾಯಕಾರಿ ರಾಸಾಯನಿಕ ಬಣ್ಣ ಬಳಸಿದ ಮೂರ್ತಿಗಳ ತಯಾರಿಕೆ, ದಾಸ್ತಾನು, ಮಾರಾಟ ಮಾಡದಂತೆ ಜಾಗೃತಿ ಮೂಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಿದ್ದಾರೆ.

ಡಿ. ಕೇಶವಮೂರ್ತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಧಾರ್ಮಿಕ ಕಾಯ್ದೆ ಸಿಂಧುತ್ವ ಪ್ರಶ್ನೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣಾ) ಕಾಯ್ದೆ–2021ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಡಿ. ಕೇಶವಮೂರ್ತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿದ್ದು, ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಅಡ್ವೊಕೇಟ್ ಜನರಲ್ ಅವರಿಗೆ ಆದೇಶಿಸಿದೆ.

ಆಕ್ಷೇಪವೇನು?: 'ಹೊಸ ಕಾಯ್ದೆಯ ಅನುಸಾರ 2021ರ ಅಕ್ಟೋಬರ್ 21ಕ್ಕೂ ಮುನ್ನ ನಿರ್ಮಿಸಿರುವ ಅಕ್ರಮ ಮತ್ತು ಕಾನೂನಾತ್ಮಕ ಕಟ್ಟಡಗಳನ್ನು ಒಂದೇ ಎಂದು ಪರಿಗಣಿಸಲಾಗಿದ್ದು, ರಕ್ಷಣೆ ಒದಗಿಸಲಾಗಿದೆ. ನಿರ್ಮಾಣ ಹಂತದಲ್ಲಿರುವ ಕಟ್ಟಡಗಳು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ–1961, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ–1976, ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ–1964, ಬೆಂಗಳೂರು ಮೆಟ್ರೊಪಾಲಿಟನ್ ವ್ಯಾಪ್ತಿ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–1985, ಬಿಬಿಎಂಪಿ ಕಾಯ್ದೆ–2020ಕ್ಕೆ ವಿರುದ್ಧವಾಗಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ಅಕ್ರಮ ಧಾರ್ಮಿಕ ಕಟ್ಟಡಗಳ ತೆರವಿಗೆ ಸಂಬಂಧಿಸಿದಂತೆ 2009ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳು ಮತ್ತು ಹೈಕೋರ್ಟ್‌ನಲ್ಲಿ ಈ ಸಂಬಂಧ ದಾಖಲಾಗಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ನೀಡಲಾಗಿರುವ ಆದೇಶಗಳನ್ನು ತಿರಸ್ಕರಿಸುವ ಉದ್ದೇಶವನ್ನು ಈ ಕಾಯ್ದೆಯ ಕಲಂ 3 ಹೊಂದಿದೆ' ಎಂಬುದು ಅರ್ಜಿದಾರರ ಆಕ್ಷೇಪ.

ಅಂಗವಿಕಲರ ನಿರ್ಲಕ್ಷ್ಯ: ಕೇಂದ್ರಕ್ಕೆ ನೋಟಿಸ್

ಬೆಂಗಳೂರು: 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–6ರಲ್ಲಿ (ಎನ್‌ಎಫ್‌ಎಚ್‌ಎಸ್-6) ಯಾವ ಯಾವ ರೀತಿಯ ಅಂಗವಿಕಲತೆ ಇದೆ ಎಂಬು ದನ್ನು ಗುರುತಿಸುವ ಗೋಜಿಗೆ ಹೋಗಿಲ್ಲ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಜಾವೇದ್ ಅಬಿದಿ ಪ್ರತಿಷ್ಠಾನ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯ ಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಕೋರಿಕೆ ಏನು?: 'ಮಾಧ್ಯಮ ವರದಿಗಳ ಉಲ್ಲೇಖಿಸಿ ತಾಂತ್ರಿಕ ಸಲಹಾ ಸಮಿತಿಯ ಸಲಹೆಯ ಮೇರೆಗೆ ಎನ್‌ಎಫ್‌ಎಚ್‌ಎಸ್-6 ರಲ್ಲಿ ಅಂಗವಿಕಲರನ್ನು ಹೊರಗಿಡಲಾಗಿದೆ. ಗಣತಿದಾರರಿಗೆ ಅಂಗವೈಕಲ್ಯಬಗ್ಗೆ ಕೇಳಲು, ಮೌಲ್ಯಮಾಪನ ಮಾಡಲು ತರಬೇತಿ ಅಥವಾ ಅರ್ಹತೆ ಇಲ್ಲ. ಅಂಗವಿಕಲರ ಹಕ್ಕುಗಳ ಕಾಯ್ದೆ 2016ರ ವೇಳಾಪಟ್ಟಿಯಲ್ಲಿ ಉಲ್ಲೇ ಖಿಸಲಾದ 21 ಅಂಗವೈಕಲ್ಯಗಳನ್ನು ಎನ್‌ಎಫ್ ಎಚ್‌ಎಸ್-6ರ ಪ್ರಶ್ನಾವಳಿ ಯಲ್ಲಿ ಸೇರಿಸಲು ಆರೋಗ್ಯ ಸಚಿವಾಲಯಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

29ನೇ ವಿಶ್ವ ಆದಿವಾಸಿ ದಿನಾಚರಣೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಹಾಗೂ ಕನಕ ಗುರುಪೀಠ ಕಾಗಿನೆಲೆ ಮಹಾಸಂಸ್ಥಾನದಿಂದ ಆಗಸ್ಟ್ 9ರಂದು 29ನೇ ವಿಶ್ವ ಆದಿವಾಸಿ ದಿನಾಚರಣೆ ಹಾಗೂ ಆದಿವಾಸಿಗಳ ಕಲಾಮೇಳವನ್ನು ಬೆಂಗಳೂರಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ ರಾಜ್ಯಾಧ್ಯಕ್ಷ ಎಂ. ಕೃಷ್ಣಯ್ಯ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿರುವ ಆದಿವಾಸಿಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಆದಿವಾಸಿಗಳ ಕೇಂದ್ರಿತ ಉನ್ನತ ಮತ್ತು ಸಮಗ್ರ ಅಧ್ಯಯನಕ್ಕೆ ಪಶ್ಚಿಮಘಟ್ಟದ ಜಿಲ್ಲೆಯೊಂದರಲ್ಲಿ ಬುಡಕಟ್ಟು ವಿಶ್ವ ವಿದ್ಯಾಲಯ ಸ್ಥಾಪಿಸಬೇಕು. ಆದಿಮ ಬುಡಕಟ್ಟು ಲಕ್ಷಣ ಹೊಂದಿರುವ ಕರ್ನಾಟಕದ ಆದಿವಾಸಿಗಳ ವೈಜ್ಞಾನಿಕ ಕುಲಶಾಸ್ತ್ರಿಯ ಅಧ್ಯಯನ ನಡೆಸಬೇಕು' ಎಂದು ಆಗ್ರಹಿಸಿದರು.

'ಆದಿಮ ಬುಡಕಟ್ಟಿಗೆ ಸೇರಿಸುವುದು, ಪರಿಶಿಷ್ಟ ಪಂಗಡದ ವಿಮುಕ್ತ ಬುಡಕಟ್ಟುಗಳ ಮಕ್ಕಳ ವಿದ್ಯಾರ್ಜನೆಗೆ ಏಕಲವ್ಯ ಮಾದರಿ ವಸತಿ ಶಾಲೆ ಪ್ರಾರಂಭಿಸಬೇಕು. ರಾಜ್ಯದ ಮೂಲ ಬುಡಕಟ್ಟುಗಳ ಅರಣ್ಯ ಹಕ್ಕುಗಳನ್ನು ಸಂರಕ್ಷಿಸಲು ಪಶ್ಚಿಮಘಟ್ಟ ಪ್ರದೇಶವನ್ನು ಸಂವಿಧಾನದ 6ನೇ ಅನುಸೂಚಿಯಲ್ಲಿ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಅವರು ಒತ್ತಾಯಿಸಿದರು.

ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದು, ಕನಕ ಗುರುಪೀಠದ ಸಿದ್ಧರಾಮಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ 'ಆದಿವಾಸಿ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕೆ.ಎಂ. ಮೈತ್ರಿ ಅವರ 'ಸೂಕ್ಷ್ಮ ಮೂಲ ಆದಿವಾಸಿಗಳು' ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು' ಎಂದು ಎಂ. ಕೃಷ್ಣಯ್ಯ ಅವರು ಮಾಹಿತಿ ನೀಡಿದರು.

ಕೆಂಪೇಗೌಡ ಪುತ್ಥಳಿ ಅನಾವರಣ 10ಕ್ಕೆ

ವಿಜಯಪುರ (ದೇವನಹಳ್ಳಿ): ದೇವನಹಳ್ಳಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಆ.10 ರಂದು ಬೆಳಿಗ್ಗೆ 11 ಗಂಟೆಗೆ ನಾಡ ಪ್ರಭು ಕೆಂಪೇಗೌಡ ಪ್ರತಿಮೆ ಅನಾವರಣ, ಜಯಂತಿ ಸಮಾರಂಭ ನಡೆಯಲಿದೆ ಎಂದು ತಾಲ್ಲೂಕು ಒಕ್ಕಲಿಗರ ಸಂಘದ ನಿರ್ದೇಶಕ ಬಿ.ಚೇತನ್ ಗೌಡ ತಿಳಿಸಿದರು.

ಆದಿಚುಂಚನಗಿರಿ ಮಹಾ ಸಂಸ್ಥಾನಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ. ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಸಂಸ್ಥಾನಮಠ ಕ್ಷೇತ್ರ ಪಟ್ಟದನಾಯಕನಹಳ್ಳಿಯ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಮತ್ತಿತರರು ಪಾಲ್ಗೊಳ್ಳುವರು ಎಂದು ತಿಳಿಸಿದರು.







2019–20ರಿಂದ 2022–23ರವರೆಗಿನ ಕಾಮಗಾರಿಗಳ ಪರಿಶೀಲನೆ

ಬಿಬಿಎಂಪಿ ಕಾಮಗಾರಿ ತನಿಖೆಗೆ ಎಸ್‌ಐಟಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019-20ರಿಂದ 2022-23ರವರೆಗೆ ನಡೆದಿರುವ ಕಾಮಗಾರಿಗಳ ಬಗ್ಗೆ ವಿವರವಾದ ತನಿಖೆ ನಡೆಸಲು ಸರ್ಕಾರ ನಾಲ್ಕು ತನಿಖಾ ಸಮಿತಿಗಳನ್ನು ರಚಿಸಿದೆ.

ನಾಲ್ವರು ಐಎಎಸ್ ಅಧಿಕಾರಿಗಳ ನೇತೃತ್ವದ ತನಿಖಾ ಸಮಿತಿಗಳಲ್ಲಿ ಲೋಕೋಪಯೋಗಿ ಇಲಾಖೆ, ಕೆಪಿಟಿಸಿಎಲ್, ಎನ್‌ಎಚ್‌ಎಐ ನಿವೃತ್ತ ಎಂಜಿನಿಯರ್‌ಗಳು ಸದಸ್ಯರಾಗಿದ್ದಾರೆ. ಆಗಸ್ಟ್ 5ರಂದು ತನಿಖಾ ಸಮಿತಿಗಳನ್ನು ರಚಿಸಲಾಗಿದ್ದು, 30 ದಿನಗಳಲ್ಲಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

ಘನತ್ಯಾಜ್ಯ ನಿರ್ವಹಣೆ, ರಸ್ತೆ ಅಭಿವೃದ್ಧಿ, ಒಎಫ್‌ಸಿ ಕೇಬಲ್ ಅಳವಡಿಕೆ, ಬೃಹತ್ ನೀರುಗಾಲುವೆ, ಕೇಂದ್ರ ನಗರ ಯೋಜನೆ ವಿಭಾಗಗಳಲ್ಲಿ ನಕ್ಷೆ ಮಂಜೂರು, ಸ್ವಾಧೀನಾನುಭವ ಪತ್ರ ನೀಡಿಕೆ, ಕೆರೆ ಅಭಿವೃದ್ಧಿ ಹಾಗೂ ಸ್ಮಾರ್ಟ್ ಸಿಟಿ ಯೋಜನೆಗಳ ಕಾಮಗಾರಿಗಳು, ವಾರ್ಡ್‌ಮಟ್ಟದ ಕಾಮಗಾರಿಗಳ ಬಗ್ಗೆ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತ ದೂರು ಪ್ರಕರಣಗಳಲ್ಲಿ ಸ್ಥಳ ಮತ್ತು ದಾಖಲಾತಿಗಳ ಪರಾಮರ್ಶೆ ಮಾಡಬೇಕು. ಆರೋಪಿತರ ಸ್ಪಷ್ಟ ಗುರುತಿಸುವಿಕೆ ಸಹಿತ ಪೂರ್ಣ ವರದಿಯನ್ನು ಸರಿಯಾದ ಶಿಫಾರಸಿನೊಂದಿಗೆ ಸಲ್ಲಿಸಲು ಆದೇಶಿಸಲಾಗಿದೆ.

'ಬಿಬಿಎಂಪಿ ಕಾಮಗಾರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದು, ನಾಗರಿಕರು, ಜನಪ್ರತಿನಿಧಿಗಳು, ಮಾಧ್ಯಮಗಳು ಮತ್ತು ಗುತ್ತಿಗೆದಾರರ ಸಂಘಗಳಿಂದ ಸಾಕಷ್ಟು ದೂರುಗಳು ಬಂದಿವೆ. ಕಾಮಗಾರಿಗಳನ್ನು ನಡೆಸದೆ ಬಿಲ್ ಪಾವತಿ, ಟೆಂಡರ್ ನೀಡುವಲ್ಲಿ ಕೆಟಿಪಿಪಿ ನಿಯಮಗಳನ್ನು ಉಲ್ಲಂಘಿಸಿರುವುದು, ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡದಿರುವುದು, ಅನುಮೋದಿತ ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸದಿರುವ ದೂರುಗಳು ಬಂದಿವೆ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಬಿಬಿಎಂಪಿ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ಸಂಪೂರ್ಣವಾದ ತನಿಖೆ ನಡೆಸುವ ಅಗತ್ಯವಿದ್ದು, ಇದಕ್ಕೆ ತಜ್ಞರ ತನಿಖಾ ಸಮಿತಿ ರಚಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೋರಿದ್ದರು. ಅದರಂತೆ ತನಿಖಾ ಸಮಿತಿಗಳನ್ನು ರಚಿಸಲಾಗಿದೆ.

ಯಾವ ಅಂಶಗಳ ಬಗ್ಗೆ ತನಿಖೆ...

- ಕಾಮಗಾರಿಗಳಿಗೆ ಶಾಸನಾಬದ್ಧ ಅನುಮತಿಗಳ ಪರಿಶೀಲನೆ, ಟೆಂಡರ್‌ಗಳಲ್ಲಿ ಮೌಲ್ಯಮಾಪನ, ಅನರ್ಹರಿಗೆ ಟೆಂಡರ್ ನೀಡಿರುವುದು, ಪ್ರಮಾಣ ಪತ್ರಗಳ ಪರಿಶೀಲನೆ, ಗುತ್ತಿಗೆದಾರರ ವಾರ್ಷಿಕ ವಹಿವಾಟು, ಪೂರ್ವಾನುಭವ ಪ್ರಮಾಣ ಪತ್ರ ಪರಿಶೀಲನೆ.
- ನಿರ್ದಿಷ್ಟ ಗುತ್ತಿಗೆದಾರ ಹೆಸರಿನಲ್ಲಿ ಕಾರ್ಯಾದೇಶ ನೀಡಿದ್ದು, ಹಣ ಬೇರೆಯವರಿಗೆ ಪಾವತಿ, ಟೆಂಡರ್ ಕರೆಯದೆ ಹಿಂದಿನ ಕಾರ್ಯಾದೇಶ ವಿಸ್ತರಣೆ, ಕಾಮಗಾರಿಗಳಿಗೆ ಅನಗತ್ಯ ಮರುವೆಚ್ಚ, ಕಟ್ಟಡಗಳಿಗೆ ನಕ್ಷೆ, ಸ್ವಾಧೀನಾನುಭವ ಪತ್ರ ನೀಡಿಕೆಯಲ್ಲಿ ಪಾಲಿಕೆಗೆ ಆಗಿರುವ ಆರ್ಥಿಕ ನಷ್ಟಗಳ ವಿವರಣೆ.
- ಅನುಮತಿ ಪಡೆಯದೆ ಒಎಫ್‌ಸಿ ಕೇಬಲ್‌ಗಳ ಅಳವಡಿಕೆ, ಹೆಚ್ಚುವರಿ ಅಳವಡಿಕೆಗೆ ಕಡಿಮೆ ಲೆಕ್ಕ, ಅನಧಿಕೃತ ಅಳವಡಿಕೆ, ಆರ್ಥಿಕ ನಷ್ಟ, ಯೋಜನೆಗಳ ಗುಣಮಟ್ಟ, ವಾಸ್ತವ ಕಾರ್ಯಾದೇಶ, ಮೂಲ ಅಂದಾಜು ವೆಚ್ಚ ಹೆಚ್ಚಳ, ಅನುಷ್ಠಾನದಲ್ಲಿ ಲೋಪ-ದೋಷ ಪರಿಶೀಲನೆ, ಕಾಮಗಾರಿಗೆ ಮುನ್ನ ಸಾಮಗ್ರಿಗಳ ಗುಣಮಟ್ಟ ಪರಿಶೀಲನೆ ಆಗಿದೆಯೇ, ಅದಕ್ಕೆ ಸಂಬಂಧಿಸಿದಂತೆ ಏಜೆನ್ಸಿ ನೀಡಿರುವ ವರದಿಗಳನ್ನು ಪರಿಶೀಲಿಸುವುದು
- ಆಯಾ ವಿಭಾಗಗಳ ಅಧಿಕಾರಿಗಳು ತನಿಖಾ ಸಮಿತಿಗೆ ಅಗತ್ಯ ಮಾಹಿತಿ ಒದಗಿಸಬೇಕು. ವಾಹನ, ಭತ್ಯೆ, ಕಚೇರಿ, ಅಗತ್ಯ ಉಪಕರಣಗಳನ್ನು ನೀಡಬೇಕು ಎಂದು ಸೂಚಿಸಲಾಗಿದೆ. ಗುಣಮಟ್ಟ ಪರೀಕ್ಷೆಗೆ 3ನೇ ಸ್ವತಂತ್ರ ಏಜೆನ್ಸಿಯನ್ನು ಆಯಾ ಸಮಿತಿಗಳ ಅಧ್ಯಕ್ಷರ ಅನುಮತಿ ಮೇರೆಗೆ ನಿಯೋಜಿಸಿಕೊಳ್ಳಬಹುದು ಎಂದು ಆದೇಶಿಸಲಾಗಿದೆ.

ಬಿಬಿಎಂಪಿ ಸುದ್ದಿ

ತನಿಖಾ ಸಮಿತಿಗಳು

- **ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳು:** ಅಧ್ಯಕ್ಷ- ಉಜ್ವಲ್ ಕುಮಾರ್, ಸದಸ್ಯರು- ಕ್ಯಾಪ್ಟನ್ ದೊಡ್ಡಿಹಾಳ್, ಮುಖ್ಯ ಎಂಜಿನಿಯರ್(ನಿವೃತ್ತ), ಬಸವರಾಜ ಕೋಟೆ, ಮುಖ್ಯ ಎಂಜಿನಿಯರ್(ನಿವೃತ್ತ), ಇಬ್ಬರೂ ಲೋಕೋಪಯೋಗಿ ಇಲಾಖೆ, ಟಿ. ಪ್ರಭಾಕರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್(ನಿವೃತ್ತ), ಕೆಪಿಟಿಸಿಎಲ್.
- **ರಸ್ತೆ ಅಭಿವೃದ್ಧಿ ಕಾಮಗಾರಿಗಳು ಹಾಗೂ ಒಎಫ್‌ಸಿ ಕೇಬಲ್‌ಗೆ ಅನುಮತಿ:** ಅಧ್ಯಕ್ಷ- ಅಮ್ಲಾನ್ ಆದಿತ್ಯ ಬಿಸ್ವಾಸ್, ಸದಸ್ಯರು- ಪ್ರಭಾಕರ್ ಡಿ. ಹಮ್ಮಿಗೆ, ಮುಖ್ಯ ಎಂಜಿನಿಯರ್(ನಿವೃತ್ತ) ಲೋಕೋಪಯೋಗಿ, ಜ್ವಾಲೇಂದ್ರ ಕುಮಾರ್, ಪ್ರಧಾನ ವ್ಯವಸ್ಥಾಪಕ(ನಿವೃತ್ತ), ಎನ್‌ಎಚ್‌ಎಐ, ಕೆ. ಮೋಹನ್, ಮುಖ್ಯ ಎಂಜಿನಿಯರ್ (ನಿವೃತ್ತ), ಬಸವರಾಜ್ ಶಂಶಿಮಠ ಬಿ.ಎನ್., ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ), ಎನ್.ಎಸ್. ಮೋಹನ್, ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ), ಲೋಕೋಪಯೋಗಿ ಇಲಾಖೆ.
- **ಬೃಹತ್ ನೀರುಗಾಲುವೆ ಕಾಮಗಾರಿಗಳು ಹಾಗೂ ಕೇಂದ್ರ ನಗರ ಯೋಜನೆ ವಿಭಾಗಗಳಲ್ಲಿ ನಕ್ಷೆ ಮಂಜೂರು, ಸ್ವಾಧೀನಾನುಭವ ಪತ್ರ (ಒಸಿ) ನೀಡಿಕೆ:** ಅಧ್ಯಕ್ಷ- ಪಿ. ಸಿ. ಜಾಫರ್, ಸದಸ್ಯರು- ಎಚ್. ಬಿ. ಸಿದ್ಧಗಂಗಪ್ಪ, ಕಾರ್ಯದರ್ಶಿ(ನಿವೃತ್ತ), ಇ. ಐ. ಸಿ. ಆರ್, ಎಚ್. ಆರ್. ರಾಮಕೃಷ್ಣ, ಮುಖ್ಯ ಎಂಜಿನಿಯರ್ (ನಿವೃತ್ತ), ಮಲ್ಲೇಶ್, ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ), ಲೋಕೋಪಯೋಗಿ ಇಲಾಖೆ.
- **ಕೆರೆ ಅಭಿವೃದ್ಧಿ ಕಾಮಗಾರಿಗಳು, ಸ್ಮಾರ್ಟ್ ಸಿಟಿ ಯೋಜನೆಗಳ ಕಾಮಗಾರಿಗಳು ಮತ್ತು ವಾರ್ಡ್ ಮಟ್ಟದ ಕಾಮಗಾರಿಗಳು:** ಅಧ್ಯಕ್ಷ- ಡಾ. ವಿಶಾಲ್ ಆರ್., ಸದಸ್ಯರು- ಬೀಸೇಗೌಡ, ಮುಖ್ಯ ಎಂಜಿನಿಯರ್(ನಿವೃತ್ತ), ಎಚ್. ಪಿ. ಪ್ರಕಾಶ್, ಕಾರ್ಯಪಾಲಕ ಎಂಜಿನಿಯರ್(ನಿವೃತ್ತ), ಶ್ರೀಕಾಂತ್, ಕಾರ್ಯಪಾಲಕ ಎಂಜಿನಿಯರ್(ನಿವೃತ್ತ), ಎಚ್. ಕುಮಾರ್, ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ), ಜಿ.ಎಸ್. ಗೋಪಿನಾಥ್, ಎಂಜಿನಿಯರ್ (ನಿವೃತ್ತ), ಲೋಕೋಪಯೋಗಿ ಇಲಾಖೆ.



ಪ್ರತಿಭಟನೆ ಮಣಿಪುರದಲ್ಲಿ ಹಿಂಸೆ ಕೊನೆಗೊಳಿಸಿ ಶಾಂತಿ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿ ವಿವಿಧ ಕ್ರೈಸ್ತ ಸಂಘಟನೆಗಳು ನಗರದ ಟಿ.ಸಿ. ಪಾಳ್ಯದ ಡಾನ್ ಬಾಸ್ಕೊ ಕಾಲೇಜು ಮೈದಾನದಲ್ಲಿ ಭಾನುವಾರ ಶಾಂತಿಯುತ ಪ್ರತಿಭಟನೆ ನಡೆಸಿದವು. ಮಂಡ್ಯ ಧರ್ಮಪ್ರಾಂತ್ಯದ ಬಿಷಪ್ ಮಾರ್ ಸೆಬಾಸ್ಟೈನ್ ಎಡಯಂತ್ರತ್, ಮಾಜಿ ಸಂಸದ ರಾಜೀವ್ ಗೌಡ, ಕೇಂಬ್ರಿಡ್ಜ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಿ.ಕೆ. ಮೋಹನ್ ಬಾಬು, ವಿಧಾನ ಪರಿಷತ್ ಮಾಜಿ ಸದಸ್ಯ ನಾರಾಯಣಸ್ವಾಮಿ ಇದ್ದರು.

ಉಪಾಧ್ಯಕ್ಷರಾಗಿ ಭಾಸ್ಕರರಾವ್ ನೇಮಕ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾಗಿ ಭಾಸ್ಕರರಾವ್ ಅವರನ್ನು ನೇಮಕ ಮಾಡಲಾಗಿದೆ. ಜತೆಗೆ ಮೈಸೂರು ಜಿಲ್ಲೆಯ ಉಸ್ತುವಾರಿಯನ್ನು ನೀಡಲಾಗಿದೆ ಎಂದು ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಪಿಎಸ್‌ಸಿ ರ್‍ಯಾಂಕ್ ಪಡೆದ ಶಿಲ್ಪಶ್ರೀಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಪಿಎಸ್‌ಸಿ ಪರೀಕ್ಷೆಯಲ್ಲಿ 349ನೇ ರ್‍ಯಾಂಕ್ ಪಡೆದಿರುವ ಶಿಲ್ಪಶ್ರೀ ಆರ್. ಅವರನ್ನು ಕರ್ನಾಟಕ ಭೋವಿ ಕ್ಷೇಮಾಭಿವೃದ್ಧಿ ಸಂಘದಿಂದ ಸನ್ಮಾನಿಸಲಾಯಿತು.

ನಗರದ ಜಸ್ಮಾದೇವಿ ಮಂದಿರ ಕಲ್ಯಾಣ ಮಂಟಪದಲ್ಲಿ ನಡೆದ ಸಂಘದ 23ನೇ ವಾರ್ಷಿಕೋತ್ಸವ ಮತ್ತು 44ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸನ್ಮಾನ ಮಾಡಲಾಯಿತು.

ಹೈಸ್ಕೂಲ್‌ನಿಂದ ಉನ್ನತ ಶಿಕ್ಷಣದವರೆಗೆ ಉತ್ತಮ ಅಂಕ ಪಡೆದಿರುವ ಭೋವಿ ಸಮಾಜದ 442 ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ವಾರ್ಷಿಕೋತ್ಸವದ ಅಂಗವಾಗಿ ಮಹಾಗಣಪತಿ ಹೋಮ, ದುರ್ಗಾ ಹೋಮ, ಕುಂಭಾಭಿಷೇಕ ಮಹೋತ್ಸವ, ಗೋಪೂಜೆ, ಮಂಟಪ ಪ್ರವೇಶ, ಗಣೇಶ ಪೂಜೆಗಳು ನಡೆದವು. ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಯುಪಿಎಸ್‌ಸಿ ಪರೀಕ್ಷೆಯಲ್ಲಿ 349ನೇ ರ್‍ಯಾಂಕ್ ಪಡೆದಿರುವ ಶಿಲ್ಪಶ್ರೀ ಆರ್. ಅವರನ್ನು ಕರ್ನಾಟಕ ಭೋವಿ ಕ್ಷೇಮಾಭಿವೃದ್ಧಿ ಸಂಘದಿಂದ ಸನ್ಮಾನಿಸಲಾಯಿತು.

ಶತಮಾನೋತ್ಸವ ಸಮಾರಂಭ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘದ ಶತಮಾನೋತ್ಸವ ಸಮಾರಂಭವು ಆಗಸ್ಟ್ 9ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ರವಿ ಎಂ. ತಿರ್ಲಾಪೂರ, '1919ರಲ್ಲಿ ಪ್ರಾರಂಭವಾದ ಕರ್ನಾಟಕ ಆಡಳಿತ ಸೇವೆ ಅಧಿಕಾರಗಳ ಸಂಘವು 2019ಕ್ಕೆ ನೂರು ವರ್ಷಗಳನ್ನು ಪೂರೈಸಿತ್ತು. ಕೋವಿಡ್ ಕಾರಣದಿಂದ ಶತಮಾನೋತ್ಸವವನ್ನು ಮುಂದೂಡಲಾಗಿತ್ತು' ಎಂದು ತಿಳಿಸಿದರು.

'ಈ ಸಮಾರಂಭವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಉದ್ಘಾಟಿಸಲಿದ್ದಾರೆ. ಸಂಘದ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಮತ್ತು ನವೀಕರಣ ಕಾಮಗಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸ್ಮರಣ ಸಂಚಿಕೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಲಿದ್ದಾರೆ' ಎಂದರು.

'ಟಿ.ಎಂ. ವಿಜಯಭಾಸ್ಕರ, ರಾಜೀವ್ ಚಾವ್ಲಾ, ಗುರುರಾಜ ಕರಜಗಿ ಮತ್ತು ಟಿ.ವಿ. ಮೋಹನ್ ದಾಸ್ ಪೈ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಐಎಸ್‌ಇಸಿ ವರದಿ, ಮೊಬೈಲ್ ಆ್ಯಪ್ ಮತ್ತು ವೆಬ್‌ಸೈಟ್ ಬಿಡುಗಡೆ ಮಾಡಲಾಗುತ್ತದೆ' ಎಂದು ಹೇಳಿದರು.

ಶಾಸಕರ ತಂದೆಗೆ ಗ್ರಾ.ಪಂ.ಉಪಾಧ್ಯಕ್ಷ ಸ್ಥಾನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ರೇಣುಕಮ್ಮ, ನೆಲಮಂಗಲ ಕಾಂಗ್ರೆಸ್ ಶಾಸಕ ಎನ್.ಶ್ರೀನಿವಾಸ್ ಅವರ ತಂದೆ ನಿವೃತ್ತ ಶಿಕ್ಷಕ ವಿ.ನಾಗರಾಜಯ್ಯ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವಿ. ನಾಗರಾಜಯ್ಯ, ಶಿಕ್ಷಕ, ಮುಖ್ಯ-ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಶೈಕ್ಷಣಿಕ, ಸಾಮಾಜಿಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮಸ್ಥರ ಒತ್ತಾಯದ ಮೇರೆಗೆ ಗ್ರಾಮ ಪಂಚಾಯಿತಿ ಚುನಾವಣೆಗೆ ಚಿಕ್ಕನಹಳ್ಳಿ ವಾರ್ಡ್‌ನಿಂದ ಸ್ಪರ್ಧಿಸಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಮಾಗಡಿ ಮುಖ್ಯರಸ್ತೆಯ ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಡಿ.ಆನಂದಸ್ವಾಮಿ, ಉಪಾಧ್ಯಕ್ಷರಾಗಿ ಚೇತನ ಕೆ. ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿ.ಆನಂದಸ್ವಾಮಿ ಅವರು 20ವರ್ಷಗಳಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ.ಹನುಮಂತಯ್ಯ ಅವರ ಸಹೋದರರಾಗಿದ್ದಾರೆ. ಇವರ ತಂದೆ ದೊಡ್ಡಯ್ಯ ಅವರು ಪ್ರಥಮ ಗ್ರಾ.ಪಂ. ಅಧ್ಯಕ್ಷರಾಗಿದ್ದರು.

ನಗರದಲ್ಲಿ ಇಂದು

ಶೈಕ್ಷಣಿಕ ಸಪ್ತಾಹದ ಸಮಾರೋಪ ಸಮಾರಂಭ: ಅತಿಥಿಗಳು: ರಾಮಕೃಷ್ಣ ರೆಡ್ಡಿ ಕೆ., ಜುಬೈರ್ ಅನ್ವರ್, ಅಧ್ಯಕ್ಷತೆ: ಉಮರ್ ಇಸ್ಮಾಯಿಲ್ ಖಾನ್, ಆಯೋಜನೆ: ಅಲ್–ಅಮೀನ್ ಎಜುಕೇಷನಲ್ ಸೊಸೈಟಿ, ಸ್ಥಳ: ಅಲ್–ಅಮೀನ್ ಕಾಲೇಜು, ಲಾಲ್‌ಬಾಗ್ ಮುಖ್ಯಗೇಟ್, ಬೆಳಿಗ್ಗೆ 11

ರಾಷ್ಟ್ರಕವಿ ಕುವೆಂಪು ಅವರ ಜಯಂತಿ, 'ರಾಷ್ಟ್ರಕವಿ ಕುವೆಂಪು ಪ್ರಶಸ್ತಿ' ಪ್ರದಾನ ಹಾಗೂ ಕುವೆಂಪು ಸಾಂಸ್ಕೃತಿಕ ಉತ್ಸವ: ಉದ್ಘಾಟನೆ, ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, 'ಕುವೆಂಪು ಕರ್ನಾಟಕ ರತ್ನ' ಪ್ರಶಸ್ತಿ ಪುರಸ್ಕೃತರು: ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ಶಿವರಾಜ್ ಎಸ್. ತಂಗಡಗಿ, ಪ್ರಶಸ್ತಿ ಪುರಸ್ಕೃತರು: ಮಲ್ಲಿಕಾ ಎಸ್. ಘಂಟಿ, ಎಚ್. ರವಿಕುಮಾರ್, ಅತಿಥಿಗಳು: ತಾರಿಣಿ ಚಿದಾನಂದಗೌಡ, ಕೆ. ಚಿದಾನಂದಗೌಡ, ವೂಡೇ ಪಿ. ಕೃಷ್ಣ, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

'ವಚನ ಸಾಹಿತ್ಯದಲ್ಲಿ ದಾಂಪತ್ಯ' ದತ್ತಿ ಉಪನ್ಯಾಸ: ವಿಜಯಕುಮಾರ್ ಎಸ್. ಕಟಗಿಹಳ್ಳಿಮಠ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5

ಎಚ್.ಕೆ. ರಂಗನಾಥ ನೆನಪು: ಪುಷ್ಪ ನಮನ: ವಿಜಯಾ, ನಾಗೇಶ್, ಅರುಣಾ, ಅಶುತೋಶ್ ಹುಕ್ಕೇರಿ, ಪ್ರಸ್ತಾವನೆ: ಕೆ.ಆರ್. ಸುಧೀಂದ್ರ ಶರ್ಮ, ಅತಿಥಿಗಳು: ಎಸ್. ಶಂಕರ್, ಮಾಲತಿ ಶರ್ಮ, 'ಎಚ್. ಕೆ.ಆರ್' ನೆನಪು: ಎಸ್.ಪಿ. ಗುರುದಾಸ್, 'ರಾಜ್ಯಶ್ರೀ' ನಾಟಕ ಪ್ರದರ್ಶನ: ರಚನೆ: ಎಚ್.ಕೆ. ರಂಗನಾಥ, ನಿರ್ದೇಶನ: ಬಿ.ವಿ. ರಾಜಾರಾಂ, ತಂಡ: ಕಲಾಗಂಗೋತ್ರಿ, ಆಯೋಜನೆ: ರಂಗ, ಸಂಗ, ಭಾರತೀಯ ವಿದ್ಯಾಭವನ, ಸ್ಥಳ: ಭಾರತೀಯ ವಿದ್ಯಾಭವನದ ಇ.ಎಸ್.ವಿ. ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30

ಸಂವಾದ: ಕೆ. ಸಚ್ಚಿದಾನಂದನ್, ಅಂಜುಂ ಹಸನ್, ಆಯೋಜನೆ: ಟೊಟೊ ಫಂಡ್ಸ್ ದ ಆರ್ಟ್ಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30



ಕೆ.ಸಚ್ಚಿದಾನಂದನ್

ಪ್ರವಚನ ವಾಹಿನಿ: 'ಶ್ರೀರಾಮಕೃಷ್ಣ ವಚನ ವೇದ' ಕುರಿತ ಉಪನ್ಯಾಸ: ಸ್ವಾಮಿ ಯೋಗೇಶ್ವರಾನಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ: nagaradalli_indu@prajavani.co.in

ವಾರ್ಡ್‌ಗಳ ಪುನರ್‌ವಿಂಗಡಣೆ • ಸರ್ಕಾರದಿಂದ ಮಾರ್ಗಸೂಚಿ ಬಿಡುಗಡೆ

ಬಿಬಿಎಂಪಿಗೆ 2 ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2011ರ ಜನಗಣತಿ ಬಳಸಿಕೊಂಡು ವಾರ್ಡ್ ವಿಂಗಡನೆ ಮಾಡಲು ಪುನರ್‌ವಿಂಗಡನಾ ಸಮಿತಿ ಮಾರ್ಗಸೂಚಿ ಪ್ರಕಟಿಸಿದೆ. 2 ತಿಂಗಳ ಒಳಗೆ ಪುನರ್ ವಿಂಗಡಣೆ ಮಾಡಲು ಸರ್ಕಾರ ಸೂಚಿಸಿದೆ.

ಹಿಂದಿನ ಬಿಜೆಪಿ ಸರ್ಕಾರವು 198 ಇದ್ದ ಸದಸ್ಯ ಸ್ಥಾನಗಳನ್ನು 243ಕ್ಕೆ ಏರಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ಕಾಂಗ್ರೆಸ್ ಸರ್ಕಾರ ಮೂರು ದಿನಗಳ ಹಿಂದೆಯಷ್ಟೇ ಹಿಂದಕ್ಕೆ ಪಡೆದಿತ್ತು. 225ಕ್ಕೆ ಇಳಿಸಿ ಹೊಸ ಅಧಿಸೂಚನೆ ಹೊರಡಿಸಿತ್ತು. 2011ರ ಜನಗಣತಿಯ ಆಧಾರದಲ್ಲಿ ವಾರ್ಡ್‌ಗಳನ್ನು ವಿಂಗಡನೆ ಮಾಡಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಆಯಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಒಳಗೇ ಇರುವಂತೆ ವಾರ್ಡ್‌ಗಳನ್ನು ವಿಂಗಡನೆ ಮಾಡಬೇಕು. ಭೌತಿಕ ಲಕ್ಷಣ, ಸಂವಹನ ಸೌಲಭ್ಯ, ಸಾರ್ವಜನಿಕರ ಅನುಕೂಲಗಳನ್ನು ಪರಿಗಣಿಸಿ ವಿಂಗಡಿಸಬೇಕು. ಸಂಪರ್ಕ ಹೊಂದಿರದ ವಾರ್ಡ್‌ಗಳಿಗೆ ಪ್ರದೇಶಗಳನ್ನು ಜೋಡಿಸಬಾರದು. ಆಡಳಿತಾತ್ಮಕ ಘಟಕಗಳು ವಿಭಜನೆಯಾಗದಂತೆ ನೋಡಿಕೊಳ್ಳಬೇಕು. ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಗಜೆಟ್ ಮತ್ತು ಎರಡು ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಆಕ್ಷೇಪ, ಸಲಹೆಗಳನ್ನು ಲಿಖಿತ ರೂಪದಲ್ಲಿ ಆಹ್ವಾನಿಸಬೇಕು. ಅದಕ್ಕೆ 15 ದಿನಗಳ ಅವಕಾಶ ನೀಡಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಆಕ್ಷೇಪಣೆ ಅಥವಾ ಸಲಹೆಗಳನ್ನು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ. ಸರ್ಕಾರವು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ಪುನರ್ ವಿಂಗಡಣಾ ಸಮಿತಿಯನ್ನು ರಚಿಸಿದೆ. ಎರಡು ತಿಂಗಳ ಒಳಗೆ ವಿಂಗಡಣಾ ಕಾರ್ಯವನ್ನು ಪೂರ್ಣಗೊಳಿಸಲು ಸೂಚನೆ ನೀಡಿದೆ.

‘ಫ್ಲೈ ಓವರ್, ಸುರಂಗ ರಸ್ತೆ: 2 ಸಂಸ್ಥೆಗಳಿಂದಷ್ಟೆ ಅರ್ಜಿ’

ಬೆಂಗಳೂರು: ‘ಫ್ಲೈ ಓವರ್, ಸುರಂಗ ರಸ್ತೆ ಸೇರಿದಂತೆ ನಗರದ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳಬಹುದು ಎಂಬ ವಿಚಾರವಾಗಿ ನಾವು ಆಸಕ್ತ ಸಂಸ್ಥೆಗಳಿಂದ ಅರ್ಜಿ (ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್) ಕರೆದಿದ್ದೆವು. ಕೇವಲ ಎರಡು ಸಂಸ್ಥೆಗಳು ಮಾತ್ರ ಮುಂದೆ ಬಂದಿವೆ’ ಎಂದು ಬೆಂಗಳೂರು ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಇನ್ನು ಹೆಚ್ಚಿನ ಸಂಸ್ಥೆಗಳು ಭಾಗವಹಿಸಬೇಕು ಎಂಬ ಉದ್ದೇಶದಿಂದ ಅದರ ಅವಧಿಯನ್ನು ಏಳು ದಿನಗಳ ಕಾಲ ವಿಸ್ತರಣೆ ಮಾಡಲಾಗಿದೆ’ ಎಂದರು.

‘ಫ್ಲೈ ಓವರ್, ಸುರಂಗ ರಸ್ತೆ, ಆರ್ಥಿಕತೆ ಸೇರಿದಂತೆ ಎಲ್ಲ ಆಯಾಮದಲ್ಲಿ ಮಾಹಿತಿ ಪಡೆಯಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಅರ್ಜಿ ಆಹ್ವಾನಿಸಲಾಗಿದೆ’ ಎಂದೂ ತಿಳಿಸಿದರು.

ಬಿಲ್ ಪಾವತಿ ಆಗಲಿದೆ: ಬಿಬಿಎಂಪಿ ಗುತ್ತಿಗೆದಾರರ ಬಿಲ್ ಪಾವತಿ ವಿಚಾರವಾಗಿ ಕೇಳಿದ ಪ್ರಶ್ನೆಗೆ, ‘ಯಾರು ಸರಿಯಾದ ರೀತಿಯಲ್ಲಿ ಕಾಮಗಾರಿ ಮಾಡಿದ್ದಾರೋ ಅವರಿಗೆ ಬಿಲ್ ಪಾವತಿ ಆಗಲಿದೆ’ ಎಂದರು.

ಬಿಬಿಎಂಪಿ ಕಾಮಗಾರಿಗಳ ಅಕ್ರಮ ತನಿಖೆಗೆ ಎಸ್‌ಐಟಿ ರಚಿಸಿರುವ ಬಗ್ಗೆ ಕೇಳಿದಾಗ, ‘ನಾನು ಯಾವುದೇ ಎಸ್‌ಐಟಿ ರಚನೆ ಮಾಡಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಯಾವಾಗ ಯಾವ ಕಾಮಗಾರಿಗೆ ಟೆಂಡರ್ ಆಯಿತು, ಕಾಮಗಾರಿಗೆ ಯಾವಾಗ ಅನುಮತಿ ಸಿಕ್ಕಿತು, ಯಾವಾಗ ಕಾಮಗಾರಿ ಮುಗಿಯಿತು, ಯಾವಾಗ ಬಿಲ್ ಪಾಸ್ ಆಗಿದೆ, ಕಾಮಗಾರಿ ಗುಣಮಟ್ಟ ಹೇಗಿದೆ ಎಂದು ಪರಿಶೀಲನೆ ಮಾಡಬೇಕಿದೆ. ₹ 2 ಕೋಟಿ ಕಾಮಗಾರಿಯಲ್ಲಿ ₹ 1.99 ಕೋಟಿ ಬಿಲ್ ನೀಡಿದ್ದು ಕೇವಲ ₹ 1 ಲಕ್ಷ ಮಾತ್ರ ಬಾಕಿ ಉಳಿಸಿದ್ದಾರೆ. ಇಂತಹ ಸುಮಾರು 25 ಪ್ರಕರಣಗಳಿವೆ. ಈ ಬಗ್ಗೆ ನಾನು ಮಾಹಿತಿ ಪಡೆಯಬೇಕಿದೆ’ ಎಂದರು.

ಅಧಿಕಾರಿಗಳು ಈವರೆಗೂ ಎಷ್ಟು ಕಾಮಗಾರಿಗಳ ಮಾಹಿತಿ ನೀಡಿದ್ದಾರೆ ಎಂದು ಕೇಳಿದಾಗ, ‘ಅಧಿಕಾರಿಗಳು ಇನ್ನೂ ಮಾಹಿತಿ ನೀಡಿಲ್ಲ. ನಾನು ಕೆಲವು ಮಾನದಂಡಗಳನ್ನು ಹಾಕಿದ್ದು, ಅದರ ಮೇಲೆ ಅಧ್ಯಯನ ಮಾಡಿ ವರದಿ ನೀಡಲಿದ್ದಾರೆ’ ಎಂದರು.

‘ಪ್ರತಿ ಸಮುದಾಯಕ್ಕೆ ನಿಗಮ ಕಷ್ಟ’

ಭಾವಸಾರ ಕ್ಷತ್ರೀಯ ಪದಾಧಿಕಾರಿಗಳ ಸಭೆಯಲ್ಲಿ ಸಚಿವ ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿ ಸಮಾಜಕ್ಕೆ ಪ್ರತ್ಯೇಕ ನಿಗಮ ಸ್ಥಾಪಿಸುವುದು ಕಷ್ಟ. ಈಗಿರುವ ನಿಗಮಗಳಲ್ಲೇ ತಮಗೆ ಸಂಬಂಧಪಟ್ಟ ಪಾಲು ಎಷ್ಟು ಎಂಬುದನ್ನು ಆಯಾ ಸಮಾಜಗಳು ಗುರುತಿಸಿ ಪಡೆದುಕೊಳ್ಳಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಅಖಿಲ ಭಾರತ ಭಾವಸಾರ ಕ್ಷತ್ರೀಯ ಮಹಾಸಭಾದ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಹಿಂದುಳಿದ ವರ್ಗಗಳಿಗೆ ಈಗಾಗಲೇ ಅಭಿವೃದ್ಧಿ ನಿಗಮ ಇದೆ. ಯಾರಿಗೂ ತೊಂದರೆ ನೀಡದ, ಶ್ರಮಜೀವಿಗಳೇ ಇರುವ ಭಾವಸಾರ ಕ್ಷತ್ರಿಯ ಸಮಾಜವು ಈ ನಿಗಮದ ಮೂಲಕವೇ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.



ಅಖಿಲ ಭಾರತೀಯ ಭಾವಸಾರ ಕ್ಷತ್ರೀಯ ಮಹಾಸಭಾದ ರಾಜ್ಯಮಟ್ಟದ ಸಭೆಯಲ್ಲಿ ಭಾವಸಾರ ಕ್ಷತ್ರೀಯ ಉನ್ನತ ಅಧಿಕಾರ ಸಮಿತಿ ಅಧ್ಯಕ್ಷ ಆರ್. ರಮೇಶ್ ತಾಪ್ಸೆ, ಭಾವಸಾರ ಕ್ಷತ್ರೀಯ ಮಹಾಸಭಾದ ರಾಜ್ಯಾಧ್ಯಕ್ಷ ಎನ್.ವಿ. ಶ್ರೀವಿವಾಸ್ ರಾವ್ ಪಿಸ್ಸೆ, ಪಂಡರಪುರದ ಪ್ರಭಾಕರ ದಾದ ಬೋಧಲೆ ಮಹಾರಾಜ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅಖಿಲ ಭಾರತ ಭಾವಸಾರ ಕ್ಷತ್ರೀಯ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ರಾಜು ಜಾವಲ್ಕರ್ ಇದ್ದರು —ಪ್ರಜಾವಾಣಿ ಚಿತ್ರ

‘ಯಾವುದೋ ಒಂದು ಸಮಾಜ ಬೆಳವಣಿಗೆಯಾದರೆ ಮಾತ್ರ ದೇಶದ ಅಭಿವೃದ್ಧಿಯಾಗುವುದಿಲ್ಲ. ಎಲ್ಲ ಸಮುದಾಯಗಳ ಜನರು ಅಭಿವೃದ್ಧಿಯಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಎಲ್ಲ ಜಾತಿ, ಧರ್ಮಗಳ ಜನರು ಬೆಳೆಯಬೇಕು. ಪ್ರತಿಭಾವಂತರು, ಬುದ್ಧಿವಂತರು ಎಲ್ಲ ಸಮುದಾಯಗಳಲ್ಲಿ ಇರುತ್ತಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸಬೇಕು’ ಎಂದರು.

ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಎಂ. ಲಮಾಣಿ ಮಾತನಾಡಿ, ‘ಪಂಡರಾಪುರದಲ್ಲಿ ಅತಿಥಿಗೃಹ ನಿರ್ಮಿಸಬೇಕು ಎಂದು ನಾನು ಹಿಂದೆ ಮುಜರಾಯಿ ಸಚಿವನಾಗಿದ್ದಾಗ ಯೋಜನೆ ರೂಪಿಸಿದ್ದೆ. ನಂತರದ ಚುನಾವಣೆಯಲ್ಲಿ ನಮ್ಮ ಸರ್ಕಾರ ಬರಲಿಲ್ಲ. ಹೀಗಾಗಿ, ಈ ಯೋಜನೆ ನನೆಗುದಿಗೆ ಬಿತ್ತು. ಮತ್ತೆ ಈ ಯೋಜನೆ ಆರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ತಿಳಿಸಿದರು.

ಪಂಡರಪುರದ ಪ್ರಭಾಕರ ದಾದ ಬೋಧಲೆ ಮಹಾರಾಜ್ ಸಾನ್ನಿಧ್ಯ ವಹಿಸಿದ್ದರು. ಅಖಿಲ ಭಾರತ ಭಾವಸಾರ ಕ್ಷತ್ರೀಯ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ರಾಜು ಜಾವಲ್ಕರ್, ರಾಜ್ಯಾಧ್ಯಕ್ಷ ಎನ್.ವಿ. ಶ್ರೀವಿವಾಸ್ ರಾವ್ ಪಿಸ್ಸೆ, ಉನ್ನತ ಅಧಿಕಾರ ಸಮಿತಿ ಅಧ್ಯಕ್ಷ ಆರ್. ರಮೇಶ್ ತಾಪ್ಸೆ, ಅನುಪಮಾ, ಸುಜಾತ ಇದ್ದರು.

ಮಹಿಳಾ ಯಕ್ಷಗಾನ ತಂಡದ ಲಾಂಛನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹಿಳಾ ಯಕ್ಷಗಾನ ತಂಡ 25ನೇ ವರ್ಷಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ರಜತ ಮಹೋತ್ಸವದ ಲಾಂಛನ ಮತ್ತು ಬ್ಯಾನರ್ ಅನ್ನು ನಗರದ ನಯನ ಸಭಾಂಗಣದಲ್ಲಿ ವಾರ್ತಾಧಿಕಾರಿ ಸಹನಾ ಎಂ. ಬಿಡುಗಡೆ ಮಾಡಿದರು.

ಮಹಿಳಾ ಯಕ್ಷಗಾನ ತಂಡವನ್ನು 25 ವರ್ಷಗಳ ಕಾಲ ಮುನ್ನಡೆಸಿದ್ದಲ್ಲದೇ ಮುಂದಕ್ಕೂ ಗಟ್ಟಿ ಹೆಜ್ಜೆ ಹಾಕುತ್ತಿರುವುದು ಅಭಿಮಾನದ ವಿಷಯ. ವಿದ್ಯಾರ್ಥಿಗಳು, ಐಟಿ ಉದ್ಯೋಗಿಗಳು, ಮತ್ತಿತರ ಕ್ಷೇತ್ರಗಳ ಮಹಿಳೆಯರನ್ನು ಒಂದೆಡೆ ಸೇರಿಸಿ ಯಕ್ಷಗಾನ ಕಲಿಸಿ ಕಲೆಯನ್ನು ಉಳಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಸಹನಾ ಮೆಚ್ಚುಗೆ ವ್ಯಕ್ತಪಡಿಸಿದರು.



ಕರ್ನಾಟಕ ಮಹಿಳಾ ಯಕ್ಷಗಾನ ತಂಡ ವಿದ್ಯಾರ್ಥಿಗಳು ಯಕ್ಷಗಾನ ಪೂರ್ವ ರಂಗವನ್ನು ಪ್ರದರ್ಶಿಸಿದರು

ಶ್ರೀ ಲಕ್ಷ್ಮಿ ನರಸಿಂಹ ಟ್ರಸ್ಟ್ ಸ್ಥಾಪಕ ಪಿ.ಸಿ. ಮುಕುಂದ ರಾವ್, ರೇವತಿ ಸುರೇಶ್, ಮಟ್ಟಿ ರಾಮಚಂದ್ರ ರಾವ್, ಕರ್ನಾಟಕ ಮಹಿಳಾ ಯಕ್ಷಗಾನ ತಂಡದ ನಿರ್ದೇಶಕಿ ಗೌರಿ ಕೆ. ಇದ್ದರು. ಕಾರ್ಯಕ್ರಮಕ್ಕಿಂತ ಮೊದಲು ಯಕ್ಷಗಾನ ಪೂರ್ವ ರಂಗವನ್ನು ತಂಡದ ವಿದ್ಯಾರ್ಥಿಗಳು ನಡೆಸಿಕೊಟ್ಟರು.

‘ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವಲ್ಲಿ ವಿದ್ಯಾಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ ಎಂದು ವೈಟ್‌ಫೀಲ್ಡ್ ಏರಿಯಾ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ಕೆ.ರಾಜೇಶ್ ಮಲ್ಯ ಹೇಳಿದರು.

ಹೂಡಿಯ ಗೋಪಾಲನ್ ಕಾಲೇಜು ಆಫ್ ಕಾಮರ್ಸ್ ಆವರಣದಲ್ಲಿ ಏರ್ಪಡಿಸಿದ್ದ ‘ಫಿಯೆಸ್ಟಾ’ ಕಾರ್ಯಕ್ರಮದಲ್ಲಿ ಮಾತನಾಡಿದರು.ಗೋಪಾಲನ್ ಫೌಂಡೇಷನ್ ಜಂಟಿ ಕಾರ್ಯದರ್ಶಿ ಸುನೀತ್ ಪ್ರಭಾಕರ್, ಸಿಇಒ ಸಿ.ಎಂ. ಬಾಸ್ಕರ್ ರೆಡ್ಡಿ, ಡೀನ್ ಆನಂದಪ್ಪ, ಪ್ರಾಂಶುಪಾಲರಾದ ಕೆ.ಸುಜಿ, ರಾಜೇಂದ್ರ ಇದ್ದರು.

ಪುರುಷ ಪ್ರಧಾನ ವ್ಯವಸ್ಥೆಯೇ ಮಹಿಳೆಗೆ ಶತ್ರು: ಗಾಯತ್ರಿ

ಬೆಂಗಳೂರು: ಹೆಣ್ಣು, ಹೆಣ್ಣಿನ ದೇಹ ಎಲ್ಲ ನನಗೇ ಸೇರಿದ್ದು ಎನ್ನುವ ಪುರುಷ ಪ್ರಧಾನ ಮನಸ್ಥಿತಿಯ ವ್ಯವಸ್ಥೆಯೇ ಮಹಿಳೆಯರಿಗೆ ಶತ್ರು ಎಂದು ಮಹಿಳಾಪರ ಹೋರಾಟಗಾರ್ತಿ ಎನ್. ಗಾಯತ್ರಿ ಹೇಳಿದರು.

ಭಾರತೀಯ ಮಹಿಳಾ ಒಕ್ಕೂಟದ ಬೆಂಗಳೂರು ಜಿಲ್ಲಾ 5ನೇ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಕಾನೂನು ಎಷ್ಟೇ ಇದ್ದರೂ ದೌರ್ಜನ್ಯ ನಿಂತಿಲ್ಲ. ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ದೊರಕಿಸಿಕೊಡಲು ಮಹಿಳಾ ಸಂಸದರೇ ಪ್ರಯತ್ನಿಸಲಿಲ್ಲ. ನಮ್ಮನ್ನು ಒಡೆದಾಳುವ ದುಷ್ಟಶಕ್ತಿಗಳೇ ಇದಕ್ಕೆ ಕಾರಣ ಎಂದರು. ಕೊಯಮುತ್ತೂರಿನ ಕಾರ್ಪೊರೇಟರ್ ಮಲ್ಲಿಕಾ ಪುರುಷೋತ್ತಮ್, ‘ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಬೇಕು’ ಎಂದರು. ಸಂಘಟನೆ ರಾಜ್ಯಾಧ್ಯಕ್ಷೆ ಜ್ಯೋತಿ ಎ. ಅಧ್ಯಕ್ಷತೆ ವಹಿಸಿದ್ದರು. ಎಐಟಿಯುಸಿ ಮುಖಂಡ ಹನುಮಂತಪ್ಪ, ಎಐವೈಎಫ್‌ನ ಎಚ್.ಎಂ. ಸಂತೋಷ್, ಹರೀಶ್ ಬಾಲಾ, ಗುರುವಯ್ಯ ಮಾತನಾಡಿದರು. ಜಿಲ್ಲಾ ಮಂಡಳಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾ ಅಧ್ಯಕ್ಷೆ ದಿವ್ಯಾ ಎಸ್. ಬಿರಾದಾರ ಅಧ್ಯಕ್ಷೆ. ಉಮಾ ಉಪಾಧ್ಯಕ್ಷೆ. ಮಾಲಾ ಕಾರ್ಯದರ್ಶಿ, ಜಯಂತಿ ಸಹ ಕಾರ್ಯದರ್ಶಿ, ರಾಜಲಕ್ಷ್ಮೀ ಖಜಾಂಚಿಯಾದರು.



ಸಾಧನ ಸಂಗಮ ನೃತ್ಯ ಕೇಂದ್ರವು ಭಾನುವಾರ ಆಯೋಜಿಸಿದ್ದ ನೃತ್ಯ ಸಮಾಗಮ–2023 ಕಾರ್ಯಕ್ರಮದಲ್ಲಿ ಭರತನಾಟ್ಯ ಕಲಾವಿದೆ ಸಹನಾ ಭಟ್ ಹಾಗೂ ಹುಬ್ಬಳ್ಳಿಯ ನಾಟ್ಯಾಂಜಲಿ ಕಲಾ ಕೇಂದ್ರದ ಅಧ್ಯಕ್ಷ ಪ್ರದೀಪ್ ಭಟ್ ಅವರಿಗೆ ‘ಕಲಾತ್ಮಿಕ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಧನ ಸಂಗಮದ ಸಂಸ್ಥಾಪಕಿ ಜ್ಯೋತಿ ಪಟ್ಟಾಭಿರಾಮ್, ಸಾಧನಾಶ್ರೀ ಇದ್ದರು

ಪರಿಶಿಷ್ಟರ ಕಾಲೊನಿಯಲ್ಲಿ ಕಲುಷಿತ ನೀರು ಸೇವಿಸಿ ಐದು ಜನ ಸಾವು

ಕವಾಡಿಗರಹಟ್ಟಿ ಪ್ರಕರಣ ಸಿಬಿಐಗೆ ವಹಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ಕವಾಡಿಗರ ಹಟ್ಟಿಯ ಪರಿಶಿಷ್ಟರ ಕಾಲೊನಿಯಲ್ಲಿ ಕಲುಷಿತ ನೀರು ಸೇವಿಸಿ ಐದು ಜನ ಮೃತಪಟ್ಟಿರುವ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

‘ಕವಾಡಿಗರಹಟ್ಟಿಯ ಪರಿಶಿಷ್ಟರು ಮತ್ತು ಮೇಲ್ಜಾತಿಯ ಸವರ್ಣೀಯರ ನಡುವಿನ ಹಳೆಯ ವೈಷಮ್ಯದಿಂದಲೇ ಕುಡಿಯುವ ನೀರಿನಲ್ಲಿ ವಿಷ ಬೆರೆಸಲಾಗಿದೆ. ಈ ಪ್ರಕರಣದಲ್ಲಿ ಇದುವರೆಗೂ 155ಕ್ಕೂ ಹೆಚ್ಚು ಜನ ಅಸ್ವಸ್ಥಗೊಂಡಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಮೃತಪಟ್ಟ ಕುಟುಂಬಗಳಿಗೆ ತಲಾ ₹ 50 ಲಕ್ಷ ಪರಿಹಾರ ಮತ್ತು ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು’ ಎಂದು ಸಮಿತಿಯ ರಾಜ್ಯಾಧ್ಯಕ್ಷ ಎನ್. ಮೂರ್ತಿ ಒತ್ತಾಯಿಸಿದರು.

‘ಕವಾಡಿಗರಹಟ್ಟಿಯಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಜತೆಗೆ ಮೂಲಸೌಕರ್ಯಗಳನ್ನು ಒದಗಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಅಧಿಕಾರಿಗಳನ್ನು ವಜಾಗೊಳಿಸಬೇಕು. ರಾಜ್ಯದಾದ್ಯಂತ ದಲಿತರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳನ್ನು ಇತ್ಯರ್ಥಪಡಿಸಲು ಜಿಲ್ಲಾ ಕೇಂದ್ರಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.



ಕವಾಡಿಗರಹಟ್ಟಿಯ ಘಟನೆಯನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಅನುದಾನ ಇದ್ದರೂ ಪಾವತಿಸದ ಬಿಬಿಎಂಪಿ: ಗುತ್ತಿಗೆದಾರರ ಆಕ್ರೋಶ

26 ತಿಂಗಳ ಬಿಲ್ ಪಾವತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್‌ಗಳ ಹಣ ಪಾವತಿಸುವಂತೆ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಸದಸ್ಯರು ಆಗ್ರಹಿಸಿದರು.

ಬೆಂಗಳೂರು: 'ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್‌ಗಳ ಹಣ ಪಾವತಿಸುವಂತೆ ಸರ್ಕಾರ ಆದೇಶ ನೀಡಿದ್ದರೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿಳಂಬ ನೀತಿ ಅನುಸರಿಸುತ್ತಿದ್ದಾರೆ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯನಿರತ ಗುತ್ತಿಗೆದಾರರ ಸಂಘ ದೂರಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್, '2023-24ನೇ ಸಾಲಿನಲ್ಲಿ ಬಿಬಿಎಂಪಿ ಬಳಿ ₹ 2 ಸಾವಿರ ಕೋಟಿ ತೆರಿಗೆ ಮೊತ್ತ ಮತ್ತು ಸರ್ಕಾರ ನೀಡಿರುವ ₹ 675 ಕೋಟಿ ಅನುದಾನ ವಿದ್ದರೂ 26 ತಿಂಗಳಿಂದ ಗುತ್ತಿಗೆ ದಾರರು ನಿರ್ವಹಿಸಿದ ಕಾಮಗಾರಿಗಳಿಗೆ ಹಣ ಪಾವತಿಸುತ್ತಿಲ್ಲ ಎಂದು ದೂರಿದರು.

'ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಗಳಿಗೆ ಸಕಾಲದಲ್ಲಿ ಬಿಲ್ ಪಾವತಿಯಾಗದೇ ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ. ಕೆಲವರು ದಯಾಮರಣ ಕೋರಿ ರಾಷ್ಟ್ರಪತಿ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ' ಎಂದು ಹೇಳಿದರು.

'ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಗುತ್ತಿಗೆದಾರರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ಗುತ್ತಿಗೆದಾರರಿಗೆ ಕಿರುಕುಳ ನೀಡುತ್ತಿದ್ದು, ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಬಿಲ್ ಪಾವತಿಸಲು ಒತ್ತಾಯಿಸಿದರೆ ತನಿಖೆ ಕೈಗೊಳ್ಳುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದಾರೆ. ಆದ್ದರಿಂದ, ಸೋಮವಾರದಿಂದಲೇ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಬಿಬಿಎಂಪಿಯಲ್ಲಿ ಹಣದ ಲಭ್ಯತೆ ಇದ್ದರೂ ಬಿಡುಗಡೆ ಮಾಡುತ್ತಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದೇವೆ. ಅವರು ಸಕಾರಾತ್ಮವಾಗಿ ಸ್ಪಂದಿಸಿದ್ದಾರೆ. ಅವರು ಸಹ ಎಲ್ಲ ಬಾಕಿ ಬಿಲ್‌ಗಳ ಹಣ ಪಾವತಿಸುವಂತೆ ಆದೇಶಿಸಿದ್ದಾರೆ' ಎಂದು ಹೇಳಿದರು.

'ಕೊಪ್ಪಳ ಮತ್ತು ಮಂಗಳೂರಿನ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತುಷಾರ್ ಗಿರಿನಾಥ್ ಅವರೇ ಬೆಂಗಳೂರಿನಲ್ಲೂ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳಬೇಕಾ? ನಿಮಗೆ ಮನುಷ್ಯತ್ವ ಇಲ್ವಾ? ಕೆಲಸ ಮಾಡಿರುವ ಹಣ ನೀಡುವುದಕ್ಕೆ ಏಕೆ ಮೀನಮೇಷ ಎಣಿಸುತ್ತಿದ್ದೀರಿ ಎಂದು ಪ್ರಶ್ನಿಸಿದರು. ಕೂಡಲೇ ಮುಖ್ಯಮಂತ್ರಿ ಅವರು ಮಧ್ಯಪ್ರವೇಶಿಸಿ ಬಾಕಿ ಬಿಲ್ ಹಣವನ್ನು ಪಾವತಿಸುವಂತೆ ಆದೇಶ ನೀಡಬೇಕು. ಒಂದು ವಾರದೊಳಗೆ ಬಾಕಿ ಬಿಲ್ ಪಾವತಿಸದಿದ್ದರೆ ಬಿಬಿಎಂಪಿ ಕೇಂದ್ರ ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್‌ಗಳ ಹಣ ಪಾವತಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

650 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಯಲಹಂಕ: ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ದೊಡ್ಡಜಾಲದಲ್ಲಿ ಆಯೋಜಿಸಿದ್ದ 'ನಮ್ಮೂರ ಹೆಮ್ಮೆ' ಕಾರ್ಯಕ್ರಮದಲ್ಲಿ ಜಾಲಾ ಹೋಬಳಿ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ 650 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಗುರುತಿಸಿದರೆ ಇತರೆ ಮಕ್ಕಳಿಗೂ ಪ್ರೇರಣೆ ಯಾಗುತ್ತದೆ. ಛಲ ಬೆಳೆಸಿಕೊಂಡರೆ ಭವಿಷ್ಯದಲ್ಲಿ ಎದುರಾಗುವ ಯಾವುದೇ ಪರೀಕ್ಷೆಗಳು ಹಾಗೂ ಜೀವನದ ಸವಾಲುಗಳನ್ನು ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜಾಲಾ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್ ಮಾತನಾಡಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಸಿಂಗಹಳ್ಳಿ ವೆಂಕಟೇಶ್, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಬಿ.ಕೆ. ನಾರಾಯಣಸ್ವಾಮಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಂ.ನಾಗೇಶ್, ವಿ.ನಂಜೇಗೌಡ, ಮಾಜಿ ಅಧ್ಯಕ್ಷರಾದ ಎಚ್.ಪಿ.ನಾರಾಯಣಸ್ವಾಮಿ, ಲಕ್ಷ್ಮೀಪತಿ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ನಾಗರಾಜ್, ಬೈರೇಗೌಡ, ಮಧುಗೌಡ, ಗಿರಿಜಾ ಚಂದ್ರಪ್ಪ ಉಪಸ್ಥಿತರಿದ್ದರು.

ಚಿತ್ರಾವಳಿ




ಸುಂಕದಕಟ್ಟೆಯ ಶ್ರೀನಿವಾಸನಗರದ ಅಂಜಲಿ ಕಾನ್ವೆಂಟ್ ಮತ್ತು ನೈಟಿಂಗೇಲ್ ಪ್ರೌಢಶಾಲೆಯ ಬಾಲಕರು ಶ್ರೀಗಂಧ ಕಾವಲು ಕ್ಲಸ್ಟರ್ ಮಟ್ಟದಲ್ಲಿ ಆಯೋಜಿಸಿದ್ದ ವಾಲಿಬಾಲ್, ಥ್ರೋಬಾಲ್‌ನಲ್ಲಿ ಪ್ರಥಮ, ಕಬಡ್ಡಿಯಲ್ಲಿ ದ್ವಿತೀಯ ಹಾಗೂ ಬಾಲಕಿಯರು ವಾಲಿಬಾಲ್ ಟೂರ್ನಿಯಲ್ಲಿ ಪ್ರಥಮ ಬಹುಮಾನ ಗಳಿಸಿ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾದರು. ಸಾಧಕ ವಿದ್ಯಾರ್ಥಿಗಳು, ತರಬೇತುದಾರರು ಮತ್ತು ತಂಡದ ಮ್ಯಾನೇಜರ್‌ಗಳನ್ನು ಶಾಲಾ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಆಡಳಿತ ಮಂಡಳಿ ಅಧ್ಯಕ್ಷ ಎಸ್.ಜಿ.ಗೌಡ, ಕಾರ್ಯದರ್ಶಿ ಎಂ.ಎಸ್.ಸರಳಾ ಹಾಗೂ ಪ್ರಾಂಶುಪಾಲ ಬಿ.ಕೃಷ್ಣೇಗೌಡ ಇದ್ದರು



ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರು ಸ್ವಚ್ಛ ನಗರದ ಬಗ್ಗೆ ಹೊಸಹಳ್ಳಿ ಬಡಾವಣೆಯಲ್ಲಿ ಬೀದಿ ನಾಟಕ ಪ್ರದರ್ಶಿಸಿದರು

–ಪ್ರಜಾವಾಣಿ ಚಿತ್ರ

ಮಾರೇನಹಳ್ಳಿ ಗ್ರಾ.ಪಂ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚೊಕ್ಕನಹಳ್ಳಿ ವಿ. ನಂಜೇಗೌಡ



ನಂಜಮ್ಮ ಬಲ್ಲಯ್ಯ

ಯಲಹಂಕ: ಮಾರೇನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಚೊಕ್ಕನಹಳ್ಳಿ ವಿ. ನಂಜೇಗೌಡ ಹಾಗೂ ಉಪಾಧ್ಯಕ್ಷರಾಗಿ ನಂಜಮ್ಮ ಬಲ್ಲಯ್ಯ ಅವಿರೋಧವಾಗಿ ಆಯ್ಕೆಯಾದರು.

ಮುಂದಿನ ಎರಡೂವರೆ ವರ್ಷದ ಅವಧಿಗಾಗಿ ಅಧ್ಯಕ್ಷ (ಸಾಮಾನ್ಯ) ಮತ್ತು ಉಪಾಧ್ಯಕ್ಷರ (ಎಸ್.ಸಿ ಮಹಿಳೆ) ಸ್ಥಾನಕ್ಕಾಗಿ ಸೋಮವಾರ ಚುನಾವಣಾ ಪ್ರಕ್ರಿಯೆ ನಡೆಯಿತು.

ಇಂದ್ರಧನುಷ್ ಅಭಿಯಾನ ಶುರು

ಪ್ರಜಾವಾಣಿ ವಾರ್ತೆ



ಆಸ್ಟಿನ್ ಟೌನ್ ಹೆರಿಗೆ ಆಸ್ಪತ್ರೆಯಲ್ಲಿ ಸೋಮವಾರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಗುವಿಗೆ ಲಸಿಕೆ ಹಾಕುವ ಮೂಲಕ ಮಿಷನ್ ಇಂದ್ರಧನುಷ್– 5.0 ಅಭಿಯಾನಕ್ಕೆ ಚಾಲನೆ ನೀಡಿದರು.

ಬೆಂಗಳೂರು: 'ಎಲ್ಲರೂ ಆರೋಗ್ಯದಿಂದ ಇರಬೇಕು. ಮುಂದಿನ ಪೀಳಿಗೆ ಕೂಡ ಆರೋಗ್ಯಕರ ದೇಹ ಹೊಂದಿರಬೇಕು ಎಂಬ ಚಿಂತನೆಯಿಂದ ಮಿಷನ್ ಇಂದ್ರಧನುಷ್ 5.0 ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಶಾಂತಿನಗರದ ಆಸ್ಟಿನ್ ಟೌನ್ ಹೆರಿಗೆ ಆಸ್ಪತ್ರೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪರಿಣಾಮಕಾರಿ ಮಿಷನ್ ಇಂದ್ರಧನುಷ್– 5.0 ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಈ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ಆ.9ರಂದು ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ನಡೆಸಲಾಗುವುದು. ಅದಕ್ಕಿಂತ ಮೊದಲು ಜನರಿಂದ ಅಹವಾಲುಗಳನ್ನು ಆಲಿಸಲು, ಸಮಸ್ಯೆಗಳನ್ನು ಕೇಳಲು ಮಂಗಳವಾರ ಬೆಳಿಗ್ಗೆ 9ಕ್ಕೆ ಸಭೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಎನ್.ಎ. ಹ್ಯಾರಿಸ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತ (ಆರೋಗ್ಯ) ಡಾ. ಕೆ.ವಿ. ತ್ರಿಲೋಕ್ ಚಂದ್ರ, ಜಂಟಿ ಆಯುಕ್ತರಾದ (ಪೂರ್ವ) ಪಲ್ಲವಿ, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ಬಾಲಸುಂದರ್, ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ. ನಿರ್ಮಲಾ ಬುಗ್ಗಿ ಇದ್ದರು.

ಏಳನೇ ಹವ್ಯಕ ಬ್ಯಾಡ್ಮಿಂಟನ್ ಟೂರ್ನಿ

ಗುರುರಾಜ್, ಸಂಪೂರ್ಣಾ ಭಟ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬಹುಮಾನ ವಿತರಣಾ ಸಮಾರಂಭದಲ್ಲಿ (ಎಡದಿಂದ ಬಲಕ್ಕೆ) ಬಾಲು, ವಿಶ್ವನಾಥ ಹೆಗಡೆ, ಜಗದೀಶ್ ಹೊಸಬಾಳೆ, ಸೂರಜ್ ಹೆಗಡೆ (ಡಿವೈಎಸ್ಪಿ) ಗುರುರಾಜ ಹೆಗಡೆ (ಪುರುಷರ ಸಿಂಗಲ್ಸ್ ಚಾಂಪಿಯನ್) ಅಖಿಲ್ ಹೆಗಡೆ (ಪುರುಷರ ಸಿಂಗಲ್ಸ್ ರನ್ನರ್ ಅಪ್) ಕಮಲಾಕರ ಕೆ.ಎಸ್, ರಾಷ್ಟ್ರಮಟ್ಟದ ಆಟಗಾರ ಜೈರಾಮ್ ಪೈ ಇದ್ದರು.

ಬೆಂಗಳೂರು: ಗುರುರಾಜ್ ಮತ್ತು ಸಂಪೂರ್ಣಾ ಭಟ್ ಅವರು ಅಂಜನಾಪುರದ ಸಿಲಿಕಾನ್ ಸಿಟಿ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಭಾನುವಾರ ಮುಕ್ತಾಯಗೊಂಡ 2023ನೇ ಸಾಲಿನ 7ನೇ ಹವ್ಯಕ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಮುಕ್ತ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಫಲಿತಾಂಶ: ಪುರುಷರ ವಿಭಾಗ: ಸಿಂಗಲ್ಸ್: ಗುರುರಾಜ್– 1, ಅಖಿಲ್ ಹೆಗಡೆ– 2; 16 ವರ್ಷದೊಳಗಿನವರ ಸಿಂಗಲ್ಸ್: ಶ್ರೀಶ ಯು. ಹೊಸಮನೆ–1, ಕ್ಷಿತಿಜ ಭಟ್–2; ಸಿಂಗಲ್ಸ್ (35+): ಅಶ್ವಿನ್ ಕುಮಾರ್ ಭಟ್–1, ಸುಶರ್ಮ ಕೆ.ಎಸ್–2; ಸಿಂಗಲ್ಸ್ (50+): ಗಂಗಾಧರ ಸಿ. ಹೆಗಡೆ–1, ಮೋಹನ್ ಶ್ರೀನಿವಾಸ ಸಾಯಾ–2; ಸಿಂಗಲ್ಸ್ (60+): ಡಾ.ಸುಬ್ಬರಾವ್–1, ರಾಘವೇಂದ್ರ ಎಂ.ಎಸ್–2

ಮುಕ್ತ ಡಬಲ್ಸ್: ಮುರಳಿ ಹೆಗಡೆ ಮತ್ತು ಅಖಿಲ್ ಹೆಗಡೆ–1, ನಿರಂಜನ್ ಹೆಗಡೆ ಮತ್ತು ಪ್ರವೀಣ್ ಹೆಗಡೆ–2; ಡಬಲ್ಸ್ (35+): ಅಶ್ವಿನ್ ಕುಮಾರ್ ಭಟ್ ಮತ್ತು ಭೂಷಣ್ ಅಮಚಿ–1, ಸಂದೇಶ್ ಕುಮಾರ್ ಎಚ್.ಕೆ ಮತ್ತು ಮನೋಜ್ ಶಿಲಗೆರಮನೆ–2; ಡಬಲ್ಸ್ (50+): ಕೃಷ್ಣಮೂರ್ತಿ ಎಸ್.ಪಿ. ಮತ್ತು ವಿನೀತ್ ಭಟ್–1, ಡಾ.ದಿನೇಶ್ ಹೆಗಡೆ ಮತ್ತು ಡಾ. ರಮೇಶ್–2 ಹೆಗಡೆ; ಡಬಲ್ಸ್ (60+): ರಾಘವೇಂದ್ರ ಎಂ.ಎಸ್. ಮತ್ತು ಹಿರಣ್ಯ ಭಟ್–1, ಸುಬ್ಬಪ್ಪಯ್ಯ ವೈದ್ಯ ಮತ್ತು ಸುಬ್ಬರಾವ್–2; ಮಿಶ್ರ ವಯಸ್ಸಿನ ಡಬಲ್ಸ್: ಪ್ರದೀಪ್ ಮತ್ತು ಕಿರಣ್ ಜಯಮೂರ್ತಿ ಭಟ್–1, ಗುರುರಾಜ್ ಎನ್. ಹೆಗಡೆ ಮತ್ತು ಡಾ.ದಿನೇಶ್ ಹೆಗಡೆ–2

ಮಹಿಳೆಯರ ವಿಭಾಗ: ಮುಕ್ತ ಸಿಂಗಲ್ಸ್: ಸಂಪೂರ್ಣ ಭಟ್–1, ಸುಪ್ರಿಯಾ ಜಾನಾ–2;ಬಾಲಕಿಯರ ಸಿಂಗಲ್ಸ್ (16 ವರ್ಷದೊಳಗೆ): ಪ್ರಾಂಜಲಾ ನಿಸರ್ಗ–1, ವೈಭವ ಕೆ.ಆರ್–2

ಮುಕ್ತ ಡಬಲ್ಸ್: ಸಂಪೂರ್ಣಾ ಭಟ್ ಮತ್ತು ಸಾಧನಾ ಭಟ್–1, ಶಾಂತಾ ಹೆಗಡೆ ಮತ್ತು ಸುಗಂಧಿ–2; ಡಬಲ್ಸ್ (30+): ರಶ್ಮಿ ಭಟ್ ಮತ್ತು ಸೌಮ್ಯ– 1, ಅಕ್ಷತಾ ಎಂ.ಕೆ. ಮತ್ತು ಮಧುಮತಿ–2

ಸಿಂಗಲ್ಸ್ (35+): ಸ್ಮಿತಾ ನಟರಾಜ್–1, ಅಕ್ಷತಾ ಎಂ.ಕೆ–2.

ಮಿಶ್ರ ಮುಕ್ತ ಡಬಲ್ಸ್: ಸಾತ್ವಿಕ್ ಭಟ್ ಮತ್ತು ವರ್ಷಾ ಭಟ್–1, ಸಂಪೂರ್ಣಾ ಭಟ್ ಮತ್ತು ಅಖಿಲ್ ಹೆಗಡೆ–2; 16 ವರ್ಷದೊಳಗಿನ ಮಿಶ್ರ ಡಬಲ್ಸ್: ಕ್ಷಿತಿಜ್ ಭಟ್ ಮತ್ತು ಪ್ರಾಂಜಲಾ ನಿಸರ್ಗ–1, ತೃಶಾ ಎಂ. ಹೆಗಡೆ ಮತ್ತು ದಿಗಂತ್ ಎಸ್. ಹೆಗಡೆ–2; ಮಿಶ್ರ ಡಬಲ್ಸ್ (40+): ವಿನೀತ್ ಭಟ್ ಮತ್ತು ವರ್ಷ ಭಟ್–1, ಅರ್ಪಣಾ ಹೆಗಡೆ ಮತ್ತು ಅಖಿಲ್ ಹೆಗಡೆ–2

ಬಹುಮಾನ ವಿತರಣೆ: ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾನವ ಹಕ್ಕುಗಳ ಆಯೋಗದ ಆಯುಕ್ತ ಸುಧೀರ್ ಹೆಗಡೆ ಮಾತನಾಡಿದರು. ರೀಪೋಸ್ ಮ್ಯಾಟ್ರೆಸ್‌ನ ಸಿಒಒ ರಾಮನಾಥ್ ಭಟ್, ಹಿರಿಯ ಆಟಗಾರ ವಿಶ್ವನಾಥ ಹೆಗಡೆ ಇದ್ದರು. ಜಗದೀಶ್ ಹೊಸಬಾಳೆ ಸ್ವಾಗತಿಸಿದರು. ಕಮಲಾಕರ ಕೆ.ಎಸ್. ವಂದಿಸಿದರು.

ಜಲಜೀವನ್ ಮಿಷನ್ ಯೋಜನೆ ಜಾರಿಗೆ ಕೇಂದ್ರ ಸರ್ಕಾರದ ಅನುದಾನ ಬಳಕೆಗೆ ನಿರಾಸಕ್ತಿ

₹1,225 ಕೋಟಿ ಬಳಸದ ರಾಜ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಜಾರಿಗೊಳಿಸುತ್ತಿರುವ ಜಲ ಜೀವನ್ ಮಿಷನ್‌ಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಪೈಕಿ ₹1,225 ಕೋಟಿವನ್ನು ಕರ್ನಾಟಕ ಸರ್ಕಾರ ಬಳಕೆಯೇ ಮಾಡಿಲ್ಲ.

ರಾಜ್ಯಸಭೆಯಲ್ಲಿ ಸದಸ್ಯ ಕೆ.ಆರ್. ಎನ್.ರಾಜಶೇಖರ್ ಸೋಮವಾರ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿರುವ ಕೇಂದ್ರ ಜಲಶಕ್ತಿ ಇಲಾಖೆಯ ರಾಜ್ಯ ಸಚಿವ ಪ್ರಲ್ಹಾದ ಸಿಂಗ್ ಪಟೇಲ್, 'ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳು ₹16,484 ಕೋಟಿ ಕೇಂದ್ರದ ಅನುದಾನವನ್ನು ಬಳಸಿಲ್ಲ' ಎಂದರು.

'ನೀರಾವರಿ ಯೋಜನೆಗಳನ್ನು ಯೋಜಿಸುವ, ಅನುಷ್ಠಾನ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡುವ ಹೊಣೆ ರಾಜ್ಯಗಳದ್ದು. ರಾಜ್ಯದ ಈ ಯೋಜನೆಗಳಿಗೆ ಕೇಂದ್ರ ಸರ್ಕಾರವು ತಾಂತ್ರಿಕ ಹಾಗೂ ಆರ್ಥಿಕ ನೆರವು ನೀಡುತ್ತದೆ. ರಾಜ್ಯ ಸರ್ಕಾರಗಳಿಗೆ ಹಣಕಾಸು ಸಚಿವಾಲಯದ ಮೂಲಕ ಬಂಡವಾಳ ಹೂಡಿಕೆಗಾಗಿ ವಿಶೇಷ ನೆರವು ನೀಡಲಾಗುತ್ತಿದೆ. ಇದು 50 ವರ್ಷಗಳ ಬಡ್ಡಿರಹಿತ ಸಾಲ. 2023–24ನೇ ಸಾಲಿನಲ್ಲಿ ರಾಜ್ಯಗಳಿಗೆ ₹1.30 ಲಕ್ಷ ಕೋಟಿ ಮೀಸಲಿಡಲಾಗಿದೆ. ಈ ಪೈಕಿ ಭಾಗ 1ರಲ್ಲಿ ₹1 ಲಕ್ಷ ಕೋಟಿ ಮೀಸಲಿಡಲಾಗಿದೆ. ಭಾಗ 1 ಅಡಿ ಹಂಚಿಕೆಯಾದ ನಿಧಿಯ ಶೇ 20 ಮೊತ್ತವನ್ನು ಜಲಜೀವನ್ ಮಿಷನ್ ಹಾಗೂ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ರಾಜ್ಯ ಸರ್ಕಾರಗಳು ಬಳಸಿ-ಕೊಳ್ಳಬಹುದು' ಎಂದು ಹೇಳಿದರು.

5,048 ಹೆಕ್ಟೇರ್ ಅರಣ್ಯ ಬಳಕೆ: ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅಡಿಯಲ್ಲಿ ದೇಶದಲ್ಲಿ 2008ರಿಂದ ಇಲ್ಲಿಯವರೆಗೆ ಅರಣ್ಯೇತರ ಉದ್ದೇಶಕ್ಕೆ 3.05 ಲಕ್ಷ ಹೆಕ್ಟೇರ್ ಅರಣ್ಯ ಬಳಸಲು ಅನುಮೋದನೆ ನೀಡಲಾಗಿದೆ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಬಿಜೆಪಿ ಸದಸ್ಯ ವರುಣ್ ಗಾಂಧಿ ಸೋಮವಾರ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿದ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್, '17,301 ಯೋಜನೆಗಳಿಗೆ ಈ ಭೂಮಿ ಬಳಸಲು ಒಪ್ಪಿಗೆ ನೀಡಲಾಗಿದೆ. ಕರ್ನಾಟಕದಲ್ಲಿ 15 ವರ್ಷಗಳಲ್ಲಿ 5,048 ಹೆಕ್ಟೇರ್ ಅರಣ್ಯವನ್ನು ವಿವಿಧ ಯೋಜನೆಗಳಿಗೆ ಬಳಸಲಾಗಿದೆ' ಎಂದು ತಿಳಿಸಿದರು.

ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ 10,543 ಹೆಕ್ಟೇರ್‌ನಲ್ಲಿ ಅರಣ್ಯ ಬೆಳೆಸಲಾಗಿದೆ ಎಂದು ಹೇಳಿದರು.

ಜಲಜೀವನ ಮಿಷನ್

1.01 ಕೋಟಿ ರಾಜ್ಯದಲ್ಲಿರುವ ಗ್ರಾಮೀಣ ಮನೆಗಳು	**24.25** ಲಕ್ಷ 2019ರ ಆಗಸ್ಟ್ 15ರವರೆಗೆ ನಲ್ಲಿ ಸಂಪರ್ಕ ಪಡೆದ ಮನೆಗಳು
45.21 ಲಕ್ಷ ಜೆಜೆಎಂ ಮೂಲಕ ನಲ್ಲಿ ಸಂಪರ್ಕ ಪಡೆದ ಮನೆಗಳು	**69.73** ಲಕ್ಷ ರಾಜ್ಯದಲ್ಲಿ ಈವರೆಗೆ ನಲ್ಲಿ ಸಂಪರ್ಕ ಪಡೆದ ಮನೆಗಳು

4 ಕಡೆ ವಾಟರ್ ಏರೋಡ್ರೋಮ್

ಪ್ರವಾಸೋದ್ಯಮ ಹಾಗೂ ಸಂಪರ್ಕ ಉತ್ತೇಜಿಸುವ ಉದ್ದೇಶದಿಂದ ಕರ್ನಾಟಕದ ನಾಲ್ಕು ಕಡೆಗಳಲ್ಲಿ ವಾಟರ್ ಏರೋಡ್ರೋಮ್‌ಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ಪ್ರಸ್ತಾವ ಸಲ್ಲಿಸಿದೆ.

ರಾಜ್ಯಸಭೆಯಲ್ಲಿ ಬಿಜೆಪಿಯ ಸದಸ್ಯ ನಾರಾಯಣ ಕೊರಗಪ್ಪ ಸೋಮವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ವಿ.ಕೆ.ಸಿಂಗ್ ಉತ್ತರ ನೀಡಿ, 'ಉಡಾನ್ ಯೋಜನೆಯಡಿ ಬೈಂದೂರು, ಕಾಳಿ ನದಿ, ಮಲ್ಪೆ ಹಾಗೂ ಮಂಗಳೂರಿನಲ್ಲಿ ಇದನ್ನು ಆರಂಭಿಸುವ ಉದ್ದೇಶ ಇದೆ' ಎಂದರು.

ಉದ್ಯಮಿಗಳಿಗೆ ₹467 ಕೋಟಿ ಸಾಲ

ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಹಿಳಾ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ₹467 ಕೋಟಿ ಸಾಲ ನೀಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಸೋಮವಾರ ಕೇಳಿದ ಪ್ರಶ್ನೆಗೆ ಹಣಕಾಸು ಖಾತೆಯ ರಾಜ್ಯ ಸಚಿವ ಡಾ.ಭಾಗವತ್ ಕರಾಡ್ ಉತ್ತರ ನೀಡಿ, 4,232 ಉದ್ಯಮಿಗಳಿಗೆ ಸಾಲ ನೀಡಲಾಗಿದೆ ಎಂದರು.

ಬೆಂಗಳೂರಿನಲ್ಲಿ ಈ ಯೋಜನೆಯಿಂದ ಉಂಟಾದ ಪರಿಣಾಮದ ಬಗ್ಗೆ ಯಾವುದೇ ಅಧ್ಯಯನ ನಡೆಸಿಲ್ಲ ಎಂದು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ತಿಳಿಸಿದೆ. ಈ ಯೋಜನೆ ಕುರಿತು ರಾಷ್ಟ್ರೀಯ ಮಟ್ಟದಲ್ಲಿ ಸ್ವತಂತ್ರ ಮೌಲ್ಯಮಾಪನ ನಡೆಸಲಾಗಿದೆ ಎಂದೂ ಅವರು ತಿಳಿಸಿದರು.

ಸ್ಮಾರ್ಟ್ ಸಿಟಿ: ಗಡುವು ವಿಸ್ತರಣೆ

ಕರ್ನಾಟಕದಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ಗಡುವನ್ನು 2024ರ ಜೂನ್ ವರೆಗೆ ವಿಸ್ತರಿಸಲಾಗಿದೆ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ರಾಜ್ಯಸಭೆಗೆ ತಿಳಿಸಿದೆ.

ಬಿಜೆಪಿಯ ಸದಸ್ಯ ನಾರಾಯಣ ಕೊರಗಪ್ಪ ಸೋಮವಾರ ಕೇಳಿದ ಪ್ರಶ್ನೆಗೆ ವಸತಿ ಖಾತೆಯ ರಾಜ್ಯ ಸಚಿವ ಕೌಶಲ್ ಕಿಶೋರ್ ಉತ್ತರಿಸಿ, 'ಬೆಂಗಳೂರು, ತುಮಕೂರು, ಹುಬ್ಬಳ್ಳಿ–ಧಾರವಾಡ, ಶಿವಮೊಗ್ಗ ಹಾಗೂ ಬೆಳಗಾವಿ ಮಹಾನಗರ ಪಾಲಿಕೆಗಳ ವ್ಯಾಪ್ತಿಗಳಲ್ಲಿ ಕೈಗೆತ್ತಿಕೊಂಡಿದ್ದ ಕಾಮಗಾರಿಗಳು ಈ ವರ್ಷವೇ ಮುಗಿಯಬೇಕಿತ್ತು. ಕಾಮಗಾರಿ ಪೂರ್ಣಗೊಳ್ಳದ ಕಾರಣ ಗಡುವು ವಿಸ್ತರಿಸಲಾಗಿದೆ. ಜೂನ್ ಒಳಗೆ ಎಲ್ಲ ಕಾಮಗಾರಿಗಳು ಮುಗಿಯಲಿವೆ. ಕಾಮಗಾರಿಗಳ ಗಡುವನ್ನು 2024ರ ಜೂನ್ ನಂತರವೂ ವಿಸ್ತರಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಮಿಷನ್‌ಗೆ 2015ರಲ್ಲಿ ಚಾಲನೆ ನೀಡಿತು.2016ರಿಂದ 2018ರ ಅವಧಿಯಲ್ಲಿ ನಾಲ್ಕು ಸುತ್ತಿನ ಸ್ಪರ್ಧೆಯ ಮೂಲಕ 100 ಸ್ಮಾರ್ಟ್ ಸಿಟಿಗಳನ್ನು ಆಯ್ಕೆ ಮಾಡಲಾಯಿತು. ದೇಶದಲ್ಲಿ ಜೂನ್ ವರೆಗೆ 7,978 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, 5,909 ಕಾಮಗಾರಿಗಳು ಪೂರ್ಣಗೊಂಡಿವೆ' ಎಂದು ಮಾಹಿತಿ ನೀಡಿದರು.



ಮೌನ ಮೆರವಣಿಗೆ... ಮಣಿಪುರ ಮತ್ತು ಹರಿಯಾಣದಲ್ಲಿ ನಡೆಯುತ್ತಿರುವ ಹಿಂಸಾಚಾರ, ದೌರ್ಜನ್ಯ ಖಂಡಿಸಿ 'ಮಣಿಪುರ ಹಾಗೂ ಹರಿಯಾಣಕ್ಕಾಗಿ ಮನುಷ್ಯಸ್ವಭಾವ ಸಮುದಾಯ ನಿಯೋಗ' ದ ನೇತೃತ್ವದಲ್ಲಿ ಸೋಮವಾರ ಹುಬ್ಬಳ್ಳಿಯಲ್ಲಿ ಮೌನ ಮೆರವಣಿಗೆ ನಡೆಸಲಾಯಿತು –ಪ್ರಜಾವಾಣಿ ಚಿತ್ರ

ಉಡುಪಿ ಪ್ರಕರಣ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಉಡುಪಿ: ಉಡುಪಿಯ ಖಾಸಗಿ ಕಾಲೇಜಿನ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ ಮಾಡಿದ್ದಾರೆ ಎಂದು ದಾಖಲಾಗಿರುವ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ.

ಇದೊಂದು ಸೂಕ್ಷ್ಮ ಪ್ರಕರಣ. ಹಾಗಾಗಿ, ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಉಡುಪಿ ನಗರದ ನೇತ್ರ ಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ವಿದ್ಯಾರ್ಥಿನಿಯ ವಿಡಿಯೊ ಚಿತ್ರೀಕರಣ ಮಾಡಿದ ಘಟನೆ ನಡೆದಿದೆ ಎನ್ನುವ ಸುದ್ದಿ ಸಾಕಷ್ಟು ಪ್ರಚಾರ ಪಡೆದಿತ್ತು. ಈ ಸಂಬಂಧ ವಿದ್ಯಾರ್ಥಿನಿಯರಾದ ಶಬನಾಜ್, ಅಲ್ಫೀಯಾ, ಅಲಿಮಾ ವಿರುದ್ಧ ಹಾಗೂ ಕಾಲೇಜಿನ ಆಡಳಿತ ಮಂಡಳಿತ ವಿರುದ್ಧ ಮಲ್ಪೆ ಠಾಣೆಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಬೇಕು ಎಂದು ಬಿಜೆಪಿ ಪ್ರತಿಭಟನೆ ಮಾಡಿತ್ತು.

ಆರೋಪ: 'ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸುವ ಮೂಲಕ ರಾಜ್ಯ ಸರ್ಕಾರ ಪ್ರಕರಣ ಮುಚ್ಚಿಹಾಕುವ ಹುನ್ನಾರ ಮಾಡುತ್ತಿದೆ' ಎಂದು ಶಾಸಕ ಯಶ್‌ಪಾಲ್ ಸುವರ್ಣ ಆರೋಪಿಸಿದ್ದಾರೆ.

'ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿ ತರಾತುರಿಯಲ್ಲಿ ಸಿಐಡಿಗೆ ವರ್ಗಾಯಿಸಿ-ರುವುದು ಸರಿಯಲ್ಲ. ಪ್ರಕರಣದ ಬಗ್ಗೆ ರಾಜ್ಯದಾದ್ಯಂತ ತೀವ್ರ ಜನಾಕ್ರೋಶ ವ್ಯಕ್ತವಾಗಿದ್ದರಿಂದ ತನಿಖಾಧಿಕಾರಿಯನ್ನು ಬದಲಾಯಿಸಲಾಯಿತ್ತು. ಪ್ರಕರಣದಲ್ಲಿ ಸಂತ್ರಸ್ತೆ ಹಾಗೂ ಆರೋಪಿತ ವಿದ್ಯಾರ್ಥಿನಿಯರು ನ್ಯಾಯಾಲಯದ ಮುಂದೆ ಹೇಳಿಕೆ ದಾಖಲಿಸಿದ್ದರು. ಆರೋಪಿತ ವಿದ್ಯಾರ್ಥಿನಿಯೊಬ್ಬರ ತಂದೆ ನಿಷೇಧಿತ ಪಿಎಫ್‌ಐ ಸಂಘಟನೆಯ ಸಕ್ರಿಯ ಸದಸ್ಯ ಎಂಬ ಮಾಹಿತಿ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು. ಪೊಲೀಸರ ತನಿಖೆ ಪೂರ್ಣಗೊಳ್ಳುವ ಮುನ್ನವೇ ಸರ್ಕಾರ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿರುವುದು ಗೊಂದಲ ಸೃಷ್ಟಿಸಿದಂತಾಗಿದೆ' ಎಂದು ಅವರು ಟೀಕಿಸಿದ್ದಾರೆ.

ನ್ಯಾಯಮೂರ್ತಿ ಜೊತೆ ಡಿಕೆಶಿ ವೇದಿಕೆ ಹಂಚಿಕೆ: ಆಕ್ಷೇಪ

ಪ್ರಜಾವಾಣಿ ವಾರ್ತೆ



ಎಸ್‌.ಸುರೇಶ್ ಕುಮಾರ್

ಬೆಂಗಳೂರು: ಹಲವು ಗುರುತರ ಕ್ರಿಮಿನಲ್ ಪ್ರಕರಣಗಳ ಆರೋಪಿಯಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ಜೊತೆ ವೇದಿಕೆ ಹಂಚಿಕೊಳ್ಳುತ್ತಿರುವುದಕ್ಕೆ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತಂತೆ ಕರ್ನಾಟಕ ಹೈಕೋರ್ಟ್‌ನ ರಿಜಿಸ್ಟಾರ್ ಜನರಲ್ ಅವರಿಗೆ ಪತ್ರ ಬರೆದಿರುವ ಅವರು, 'ಶಿವಕುಮಾರ್ ವಿರುದ್ಧದ ಹಲವು ಕ್ರಿಮಿನಲ್ ಪ್ರಕರಣಗಳು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇವೆ. ಇಂತಹ ಸಂದರ್ಭದಲ್ಲಿ ಅವರು ನ್ಯಾಯಮೂರ್ತಿ-ಗಳ ಜೊತೆ ವೇದಿಕೆ ಹಂಚಿಕೊಳ್ಳುವುದು ಸಮರ್ಥನೀಯವಲ್ಲ. ಆರೋಪಿಯು ಪ್ರಭಾವ ಬೀರುತ್ತಾರೆ ಎಂಬ ಭಾವನೆ ಯಾರಲ್ಲೂ ಬರಬಾರದು ಅಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ ವತಿಯಿಂದ ಮೈಸೂರಿನಲ್ಲಿ ಇದೇ 12ರಂದು ವಕೀಲರ ರಾಜ್ಯಮಟ್ಟದ ಹತ್ತನೇ ಸಮಾವೇಶ ನಡೆಯುತ್ತಿದ್ದು ಈ ಸಮಾವೇಶದಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ಜೊತೆ ಡಿ.ಕೆ. ಶಿವಕುಮಾರ್ ಕೂಡಾ ವೇದಿಕೆ ಹಂಚಿಕೊಳ್ಳುತ್ತಿದ್ದಾರೆ.

'ಬಿಎಸ್‌ವೈ ಮುಖ್ಯಮಂತ್ರಿ ಆಗಿದ್ದಾಗ ಪತ್ರ ಯಾಕಿಲ್ಲ?'




ಶಿವಕುಮಾರ್

'ನನ್ನ ಮೇಲೆ ಪ್ರಕರಣ ಇದೆಯೋ ಇಲ್ಲವೋ ಅದು ಬೇರೆ ಪ್ರಶ್ನೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಅವರ ಮೇಲೆ ಪ್ರಕರಣ ಇರಲಿಲ್ಲವೇ? ಆಗ ಅವರು ನ್ಯಾಯಾಂಗಕ್ಕೆ ಸಂಬಂಧಿಸಿದ್ದ ಕಾರ್ಯಕ್ರಮಗಳಲ್ಲಿ ಹೇಗೆ ಭಾಗವಹಿಸು-ತ್ತಿದ್ದರು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ಸುರೇಶ್ ಕುಮಾರ್ ಪತ್ರದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಯಾರಿಗೂ ಮುಜುಗರ ತರುವ ಉದ್ದೇಶ ನನಗಿಲ್ಲ. ನನಗೆ ಅಂತಹ ಕಾರ್ಯ-ಕ್ರಮಕ್ಕೆ ಹೋಗುವ ಆಸಕ್ತಿಯೂ ಇಲ್ಲ' ಎಂದರು.

'ನನ್ನ ಮೇಲೆ ರಾಜಕೀಯ ಪ್ರೇರಿತ ಪ್ರಕರಣಗಳಿವೆ. ನನ್ನನ್ನು ದೋಷಿ ಎಂದು ಕೋರ್ಟ್ ತೀರ್ಮಾನ ಮಾಡಿಲ್ಲ. ನನ್ನ ಜತೆಗೆ ಯಡಿಯೂರಪ್ಪ ಅವರೂ ಅನೇಕ ಪ್ರಕರಣಗಳನ್ನು ಎದುರಿಸು-ತ್ತಿದ್ದರು. ಅವರು ಮುಖ್ಯಮಂತ್ರಿ ಆಗಿದ್ದಾಗ ಸುರೇಶ್ ಕುಮಾರ್‌ಗೆ ಈ ವಿಚಾರ ತಿಳಿದಿರಲಿಲ್ಲವೇ? ಆಗ ಯಾಕೆ ಪತ್ರ ಬರೆಯಲಿಲ್ಲ? ಅವರಿಗೊಂದು ನ್ಯಾಯ? ನನಗೊಂದು ನ್ಯಾಯವೇ? ಇದೆಲ್ಲವನ್ನು ನಾನು ರಾಜಕೀಯವಾಗಿಯೇ ಎದುರಿಸುತ್ತೇನೆ' ಎಂದು ಹೇಳಿದರು.

ವೇದಿಕೆ ಹಂಚಿಕೊಳ್ಳದ ಆಂಜನೇಯ



ಆಂಜನೇಯ

ದಾವಣಗೆರೆ: 'ಕೋವಿಡ್ ನಿಯಮ ಉಲ್ಲಂಘನೆ ಆರೋಪದಲ್ಲಿ ದಾಖಲಾಗಿರುವ ಪ್ರಕರಣದ ವಿಚಾರಣೆ ನ್ಯಾಯಾ-ಲಯದಲ್ಲಿ ನಡೆಯುತ್ತಿರುವ ಕಾರಣವನ್ನು ಮುಂದಿರಿಸಿದ ಮಾಜಿ ಸಚಿವ ಎಚ್. ಆಂಜನೇಯ, ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ನ್ಯಾಯಾಧೀಶರ ಜೊತೆ ವೇದಿಕೆ ಹಂಚಿಕೊಳ್ಳದೇ ನ್ಯಾಯಾಂಗ ವ್ಯವಸ್ಥೆಯನ್ನು ಗೌರವಿಸಿದರು.

ಈಚೆಗೆ ನಿಧನರಾದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾಗಿದ್ದ ಸುನಂದಾ ದುರುಗೇಶ್ ಸ್ಮರಣಾರ್ಥ ಆಯೋಜಿಸಿದ್ದ ಕಾರ್ಯ-ಕ್ರಮದಲ್ಲಿ ಎಚ್.ಆಂಜನೇಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಹಿಮಾಚಲ ಪ್ರದೇಶ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಲ್. ನಾರಾಯಣ ಸ್ವಾಮಿ, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ರಾಜೇಶ್ವರಿ ಹೆಗಡೆ ಅತಿಥಿಯಾಗಿ ಪಾಲ್ಗೊಂಡಿದ್ದರು.

ಸಭಿಕರ ಸಾಲಿನಲ್ಲಿ ಕುಳಿತಿದ್ದ ಆಂಜನೇಯ ಅವರು ಗಣ್ಯರನ್ನು ವೇದಿಕೆಗೆ ಆಹ್ವಾನಿಸಿದಾಗ ನಿರಾಕರಿ-ಸಿದರಲ್ಲದೆ, ಉದ್ಘಾಟನೆ ವೇಳೆ ವೇದಿಕೆಗೆ ಬಂದು ಮಾತನಾಡಿದರು. 'ನನ್ನ ವಿರುದ್ಧ ದಾಖಲಾಗಿರುವ ಕೋವಿಡ್ ನಿಯಮ ಉಲ್ಲಂಘನೆಯ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಈ ಸಂದರ್ಭ ನ್ಯಾಯಾಧೀಶರ ಜೊತೆ ವೇದಿಕೆ ಹಂಚಿಕೊಂಡರೆ ತಪ್ಪಾಗುತ್ತದೆ. ಹಾಗಾಗಿ ನಾನು ವೇದಿಕೆ ಮೇಲೆ ಕೂರುವುದಿಲ್ಲ' ಎಂದರು. ನಂತರ ಭಾಷಣ ಮಾಡಿ ಕಾರ್ಯಕ್ರಮದಿಂದ ನಿರ್ಗಮಿಸಿದರು.

ಪ್ರಕರಣವೇನು?: ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ 2022ರ ಜನವರಿ 9ರಿಂದ 10 ದಿನಗಳ ಕಾಲ ರಾಮನಗರದಿಂದ ಪಾದಯಾತ್ರೆ ಹಮ್ಮಿಕೊಂಡಿತ್ತು. ಆ ವೇಳೆ ಕೋವಿಡ್ ನಿಯಮ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರೊಂದಿಗೆ ಎಚ್.ಆಂಜನೇಯ ವಿರುದ್ಧವೂ ಪ್ರಕರಣ ದಾಖಲಾಗಿದೆ.

ಮೇಟಿ ಕೃತಿಗೆ ವಿಮರ್ಶಾ ಪ್ರಶಸ್ತಿ



ಧಾರವಾಡ: ನಗರದ ಗಿರಡ್ಡಿ ಗೋವಿಂದರಾಜ ಫೌಂಡೇಶನ್ ವತಿಯಿಂದ ನೀಡುವ ರಾಜ್ಯ ಮಟ್ಟದ 'ಗಿರಡ್ಡಿ ಗೋವಿಂದರಾಜ ವಿಮರ್ಶಾ ಪ್ರಶಸ್ತಿ'ಗೆ ಲೇಖಕ ಮೇಟಿ ಮಲ್ಲಿಕಾರ್ಜುನ ಅವರ 'ತರವಲ್ಲ ತಗಿ ನಿನ್ನ ತಂಬೂರಿ ಸ್ವರ' ಕೃತಿ ಆಯ್ಕೆಯಾಗಿದೆ.

ಕೃತಿಯನ್ನು ನವಕರ್ನಾಟಕ ಪ್ರಕಾಶನ ಪ್ರಕಟಿಸಿದೆ. ಪ್ರಶಸ್ತಿಯು ₹ 25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

ನಿರ್ಮಿತಿ ಕೇಂದ್ರದ ಮಾಜಿ ನಿರ್ದೇಶಕ ಬಂಧನ

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ: ಸರ್ಕಾರ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ್ದ ₹ 7.04 ಕೋಟಿ ಅನುದಾನವನ್ನು ಲಪಟಾಯಿಸಿದ ಆರೋಪದ ಮೇರೆಗೆ ನಿರ್ಮಿತಿ ಕೇಂದ್ರದ ಮಾಜಿ ಯೋಜನಾ ನಿರ್ದೇಶಕ ಕೆ.ಜಿ. ಮೂಡಲಗಿರಿಯಪ್ಪ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಆಡಳಿತ ಮಂಡಳಿಯ ನಿರ್ದೇಶನ ಉಲ್ಲಂಘಿಸಿದ್ದು ಮೇಲ್ನೋಟಕ್ಕೆ ಕಂಡು-ಬಂದಿದ್ದರಿಂದ ಮೂಡಲಗಿರಿಯಪ್ಪ ವಿರುದ್ಧ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಸೋಮವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಿರ್ಮಿತಿ ಕೇಂದ್ರದ ಅಧ್ಯಕ್ಷರು ಹಾಗೂ ಕಾರ್ಯಾಧ್ಯಕ್ಷರ ಲಿಖಿತ ಅನುಮೋದನೆ ಪಡೆದು ವಹಿವಾಟು ನಡೆಸುವ ನಿಯಮವನ್ನು ನಿರ್ದೇಶಕರು ಉಲ್ಲಂಘಿಸಿದ್ದರು. ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಚೆಕ್ ಮೂಲಕ ಅಪಾರ ಪ್ರಮಾಣದ ಹಣವನ್ನು ಇತರರಿಗೆ ವರ್ಗಾವಣೆ ಮಾಡಿದ್ದು ಪರಿಶೀಲನೆಯ ವೇಳೆ ಕಂಡುಬಂದಿತ್ತು. ಈ ಸಂಬಂಧ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಯು.ಆರ್. ಸತ್ಯನಾರಾಯ-ಣರಾವ್ ದೂರು ನೀಡಿದ್ದರು.

ಜಿಲ್ಲಾ ಖನಿಜ ನಿಧಿಯ (ಡಿಎಂಎಫ್) ₹ 1 ಕೋಟಿ ದುರ್ಬಳಕೆ ಮಾಡಿಕೊಂಡ ಆರೋಪದಲ್ಲಿ ಆರೋಪಿಯನ್ನು ಜೂನ್‌ನಲ್ಲಿ ಸೇವೆಯಿಂದ ವಜಾ ಮಾಡಲಾಗಿತ್ತು.

'ಎಚ್‌ಡಿಕೆಗೆ ಮೋದಿ ಹತ್ತಿರವೇ?'

ಗದಗ: 'ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅಷ್ಟು ಸಮೀಪವಾಗಿ-ದ್ದಾರೆಯೇ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಪ್ರಶ್ನಿಸಿದರು.

ಕರ್ನಾಟಕ ಸರ್ಕಾರದ ಭ್ರಷ್ಟಾಚಾರ ಕುರಿತು ಪ್ರಧಾನಿ ಮೋದಿ ಅವರಿಗೆ ದೂರು ಸಲ್ಲಿಸುವುದಾಗಿ ಹೇಳಿರುವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿ ತಮ್ಮ ವಿವೇಚನೆಗೆ ತಿಳಿದಿರುವುದನ್ನು ಮಾಡಲಿ. ಆದರೆ, ಅದಕ್ಕೂ ಮುನ್ನ ಅವರು ವಿಧಾನ ಸಭೆಯಲ್ಲಿ ಈ ಬಗ್ಗೆ ಮಾತನಾಡಬಹು-ದಿತ್ತು. ಪ್ರಧಾನಿ ಅವರ ಮುಂದೆ ಏನು ಹೇಳಲು ಹೊರಟಿ ದ್ದಾರೋ ಅದನ್ನು ಕರ್ನಾಟಕದ ಜನರ ಮುಂದೆಯೂ ಹೇಳಬಹುದಿತ್ತಲ್ಲವೇ?' ಎಂದರು.

ಬೆಂಗಳೂರಿನಲ್ಲಿ ಕರಾವಳಿ ಕಂಬಳ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿಯ ಕಂಬಳ ಕ್ರೀಡೆಯನ್ನು ಬೆಂಗಳೂರಿಗೆ ಪರಿಚಯಿಸುವ ಪ್ರಯತ್ನಕ್ಕೆ ರಾಜಧಾನಿಯ ತುಳುಕೂಟ ಸಿದ್ಧವಾಗಿದ್ದು, ಈ ವರ್ಷದ ನವೆಂಬರ್ 15ರ ನಂತರ ಅರಮನೆ ಮೈದಾನದಲ್ಲಿ ಸ್ಪರ್ಧೆ ನಡೆಯಲಿದೆ.

'ಬೆಂಗಳೂರು ಅರಮನೆ ಮೈದಾನದಲ್ಲಿ ಕಂಬಳ ಆಯೋಜಿಸಲು ಮಹಾರಾಣಿಯವರಿಂದ ಒಪ್ಪಿಗೆ ಸಿಕ್ಕಿದೆ. ಅಲ್ಲಿ ಕಂಬಳ ಕರೆಯನ್ನು ನಿರ್ಮಿಸಿ ಪಕ್ಕದ ಕೆರೆಯಿಂದ ನೀರು ಹಾಯಿಸಬೇಕಾಗಿದೆ. ಬೆಂಗಳೂರಿನ ಗಡಸು ನೀರು ಕಂಬಳಕ್ಕೆ ಸೂಕ್ತವೇ ಎಂಬುದನ್ನು ಪರಿಶೀಲಿಸಬೇಕಾಗಿದ್ದು ಇದಕ್ಕಾಗಿ ನೀರಿನ ಮಾದರಿಯನ್ನು ಪೀಣ್ಯ ಮತ್ತು ಪುಣೆಯಲ್ಲಿರುವ ಪ್ರ-ಯೋಗಾಲಯಗಳಿಗೆ ಕಳುಹಿಸಲಾಗಿದೆ. ಕೆರೆಯ ನೀರು ಯೋಗ್ಯವಲ್ಲ ಎಂದಾದರೆ ಟ್ಯಾಂಕರ್‌ನಲ್ಲಿ ತಂದು 'ಕರೆ'ಯನ್ನು ತುಂಬಿಸಲಾಗುವುದು' ಎಂದು ಬೆಂಗಳೂರು ತುಳು ಕೂಟದ ಅಧ್ಯಕ್ಷ ಸುಂದರರಾಜ್ ರೈ 'ಪ್ರಜಾವಾಣಿ'ಗೆ ತಿಳಿಸಿದರು.

ಉಪ್ಪಿನಂಗಡಿಯ ವಿಜಯ ವಿಕ್ರಮ ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷರೂ ಆಗಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಕಂಬಳದ ನೇತೃತ್ವ ವಹಿಸಿದ್ದು, 'ರಾಜ ಮಹಾರಾಜ ಜಯಚಾಮರಾಜೇಂ-ದ್ರ ಒಡೆಯರ್ ಜೋಡುಕರೆ ಕಂಬಳ' ಎಂಬ ಹೆಸರಿನಲ್ಲಿ ಮೂರು ದಿನ ಸ್ಪರ್ಧೆಗೆ ಯೋಜನೆ ರೂಪಿಸಲಾಗಿದೆ. ಕಳೆದ ಋತುವಿನಲ್ಲಿ ಕರಾವಳಿಯಲ್ಲಿ ನಡೆದ ಕಂಬಳಗಳಲ್ಲಿ ಉತ್ತಮ ಸಾಮರ್ಥ್ಯ ತೋರಿದ 50 ಜೋಡಿ ಕೋಣಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ.

'ತುಳು ಭಾಷೆ ಮತ್ತು ಸಂಸ್ಕೃತಿಯನ್ನು ದೇಶಕ್ಕೆ ಪಸರಿಸುವ ನಿಟ್ಟಿನಲ್ಲಿ ರಾಜ್ಯ ರಾಜಧಾನಿಗೆ ಕಂಬಳವನ್ನು ಪರಿಚಯಿಸಲು ನಿರ್ಧರಿಸಲಾಗಿದೆ. ಕರಾವಳಿಯ ಕಂಬಳ ಸಮಿತಿಯವರ ಜೊತೆ ಮಾತುಕತೆ ನಡೆಸಿ ರೂಪುರೇಷೆ ನಿರ್ಧರಿಸಲಾಗುವುದು' ಎಂದು ಶಾಸಕ ಅಶೋಕ್ ಕುಮಾರ್ ರೈ ತಿಳಿಸಿದರು.

ಕಂಬಳದ ಕೋಣಗಳನ್ನು ಲಾರಿ ಬದಲು, ರೈಲಿನಲ್ಲಿ ಬೆಂಗಳೂರಿಗೆ ತೆಗೆದುಕೊಂಡು ಹೋಗುವ ಬಗ್ಗೆಯೂ ಚಿಂತನೆ ನಡೆದಿದೆ.

ಫೆ.11ರಿಂದ ಸಾಹಿತ್ಯ ಸಮ್ಮೇಳನ?

ಪ್ರಜಾವಾಣಿ ವಾರ್ತೆ

ಮಂಡ್ಯ: ಜಿಲ್ಲೆಯಲ್ಲಿ ನಿಗದಿಯಾಗಿರುವ 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು 2024, ಫೆ.11ರಿಂದ ಮೂರು ದಿನ ಆಯೋಜಿಸುವ ಬಗ್ಗೆ ಸೋಮವಾರ ಇಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚೆ ನಡೆಯಿತು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವ ವಹಿಸಿದ್ದರು. ಲೇಖಕರು, ಅಧಿಕಾರಿಗಳು, ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

'1994ರ 63ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಫೆ.11, 12, 13ರಂದು ಮಂಡ್ಯದಲ್ಲೇ ನಡೆದಿತ್ತು. ಸರಿಯಾಗಿ 30 ವರ್ಷಗಳ ನಂತರ 2024, ಫೆ.11ರಿಂದಲೇ 87ನೇ ಸಮ್ಮೇಳನವನ್ನೂ ಆಯೋಜಿಸಬೇಕು. 63ನೇ ಸಮ್ಮೇಳನ-ದಂತೆಯೇ ಈಗಲೂ ಶುಕ್ರವಾರ, ಶನಿವಾರ, ಭಾನುವಾರ ಬಂದಿರುವುದು ವಿಶೇಷ. ಹೀಗಾಗಿ ಈ ದಿನಾಂಕಗಳನ್ನು ಅಂತಿಮಗೊಳಿಸಬಹುದು' ಎಂಬ ಸಲಹೆಗೆ ಹಲವರು ಒಪ್ಪಿಗೆ ಸೂಚಿಸಿದರು. 'ಸಮ್ಮೇಳನಕ್ಕೆ ಹೊಸ ಜಾಗ ಹುಡುಕುವುದು ಬೇಡ. ಹೊಸ ಜಾಗವನ್ನು ಸಜ್ಜುಗೊಳಿಸಲು ಹಣ ವೆಚ್ಚ ಮಾಡುವ ಅನಿವಾರ್ಯತೆ ಏಕೆ? ಸಿದ್ಧವಿರುವ ಮಂಡ್ಯ ವಿಶ್ವವಿದ್ಯಾಲಯದ ಆವರಣ ಅಥವಾ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿ ದೇವಾಲಯದ ಮೈದಾನದಲ್ಲಿ ಸಮ್ಮೇಳನ ನಡೆಸಬೇಕು. ಸಮ್ಮೇಳನದ ಅಧ್ಯಕ್ಷರಾಗಿ ಲೇಖಕಿಯೊಬ್ಬರನ್ನು ಆಯ್ಕೆ ಮಾಡಬೇಕು' ಎಂದೂ ಆಗ್ರಹಿಸಿದರು.

ಕೋಳಿ ಕಜ್ಜಾಯಕ್ಕೆ ನಿರ್ಬಂಧ: ವಿವಾದ

ಸಾಗರ: ಇಲ್ಲಿನ ಕಾಲೇಜೊಂದರಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಆಹಾ-ರಮೇಳದಲ್ಲಿ ಮಾಂಸಾಹಾರ ಸಿದ್ಧಪಡಿ-ಸಿಕೊಂಡು ಬಂದಿದ್ದ ವಿದ್ಯಾರ್ಥಿನಿಯರಿಗೆ ಮೇಳದಲ್ಲಿ ಭಾಗವಹಿಸಲು ಅವಕಾಶ ನೀಡದಿರುವ ಘಟನೆ ನಡೆದಿದೆ.

ಇಲ್ಲಿನ ಇಂದಿರಾಗಾಂಧಿ ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ಕಲಾ ವಿಭಾಗದಲ್ಲಿ ಆಹಾರ ಮೇಳ ಆಯೋ-ಜಿಸಲಾಗಿತ್ತು. ಇಬ್ಬರು ವಿದ್ಯಾರ್ಥಿನಿ-ಯರು ಮಲೆನಾಡಿನ ಸಾಂಪ್ರದಾಯಿಕ ಮಾಂಸಾಹಾರವಾದ ಕೋಳಿ ಕಜ್ಜಾಯ, ರೊಟ್ಟಿ ಸೇರಿದಂತೆ ಕೆಲವು ತಿನಿಸುಗಳನ್ನು ತಂದಿದ್ದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೆಲವು ಉಪನ್ಯಾಸಕರು, 'ಮೇಳದಲ್ಲಿ ಮಾಂಸಾಹಾರಕ್ಕೆ ಅವಕಾಶವಿಲ್ಲ' ಎಂದು ನಿರ್ಬಂಧ ಹೇರಿದ್ದರಿಂದ ವಾಗ್ವಾದ ನಡೆದಿದೆ. 'ಮೇಳದ ನಿಯಮಗಳ ಬಗ್ಗೆ ಮೊದಲೇ ಸೂಚಿಸಲಾಗಿತ್ತು. ಆದರೂ ಮಾಂಸಾಹಾರ ತಂದಿರುವುದು ನಿಯಮದ ಉಲ್ಲಂಘನೆ' ಎಂದು ಉಪನ್ಯಾಸಕರು ಹೇಳಿದ್ದಾರೆ. ಆಗ ವಿದ್ಯಾರ್ಥಿನಿಯರು 'ಆಹಾರ ಮೇಳದಲ್ಲಿ ಮಾಂಸಹಾರಕ್ಕೆ ನಿರ್ಬಂಧ ಹೇರುವುದು ಎಷ್ಟು ಸರಿ' ಎಂದು ಪ್ರಶ್ನಿಸಿದಾಗ 'ನಾವು ಹೇಳಿದ್ದನ್ನು ಕೇಳಬೇಕು' ಎಂದು ಉಪನ್ಯಾಸಕರು ತಾಕೀತು ಮಾಡಿದ್ದಾರೆ.

ನಂತರ ಆಹಾರ ಮೇಳದಲ್ಲಿ ಮಾಂಸಹಾರಕ್ಕೆ ಅವಕಾಶ ನೀಡಲಾಯಿತು. ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರ ನಡುವೆ ನಡೆದ ವಾಗ್ವಾದದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಭಾಗಿತ್ವ • ಇಂದಿನಿಂದ ಸಪ್ತಾಹ

17,603 ಶ್ರದ್ಧಾ ಕೇಂದ್ರಗಳ ಸ್ವಚ್ಛತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಜನರ ಸಹಭಾಗಿತ್ವದಲ್ಲಿ ರಾಜ್ಯದ 17,603 ಶ್ರದ್ಧಾ ಕೇಂದ್ರಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ಹೆಗ್ಗಡೆ ಅವರ ಚಿಂತನೆಯಂತೆ ವರ್ಷದಲ್ಲಿ ಎರಡು ಬಾರಿ ಅಂದರೆ ಸ್ವಾತಂತ್ರ್ಯೋತ್ಸವ ಹಾಗೂ ಮಕರ ಸಂಕ್ರಾಂತಿ ಸಂದರ್ಭದಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ. ಸ್ವಯಂ ಸೇವಕರು ಶ್ರದ್ಧಾಕೇಂದ್ರಗಳಾದ ದೇವಸ್ಥಾನ, ಬಸದಿ, ಮಸೀದಿ, ಚರ್ಚ್‌ಗಳ ಸ್ವಚ್ಛತೆಯನ್ನು ಕೈಗೊಳ್ಳುತ್ತಾರೆ.

ಈ ಬಾರಿ ಆಗಸ್ಟ್ 8ರಿಂದ 14 ರವರೆಗೆ ಸ್ವಚ್ಛತಾ ಸಪ್ತಾಹ ನಡೆಯಲಿದ್ದು, 5,08,156 ಸ್ವಯಂ ಸೇವಕರು ಇದರಲ್ಲಿ ಭಾಗವಹಿಸಲಿದ್ದಾರೆ.



ಏಳು ವರ್ಷಗಳಿಂದ ನಿರಂತರವಾಗಿ ಈ ಕೆಲಸ ನಡೆಯುತ್ತಿದೆ. ಈ ವರೆಗೆ ಒಟ್ಟು 1,12,310 ಶ್ರದ್ಧಾ-ಕೇಂದ್ರಗಳ ಸ್ವಚ್ಛತಾ ಕಾರ್ಯ ನಡೆದಿದ್ದು, ಇದರಲ್ಲಿ 40,34,173 ಮಂದಿ ಭಾಗವಹಿಸಿದ್ದಾರೆ.

ದೇವಸ್ಥಾನದ ಸುತ್ತಲಿನ ಗಿಡಗಂಟಿಗಳ ತೆರವು, ಆವರಣ ಮತ್ತು ಒಳಾಂಗಣ ಸ್ವಚ್ಛತೆ, ದೇವಸ್ಥಾನದ ಕಲ್ಯಾಣಿ, ಸಭಾಭವನ, ಅಶ್ವಥ ಕಟ್ಟೆ/ಅರಳಿಕಟ್ಟೆ ಸ್ವಚ್ಛಗೊಳಿಸುವುದು, ಧಾರ್ಮಿಕ ಶ್ರದ್ಧಾಕೇಂದ್ರಗಳ ಸ್ನಾನಕಟ್ಟೆ, ನದಿ ತೀರಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಕೈಗೊಂಡು ಪ್ಲಾಸ್ಟಿಕ್, ಬಟ್ಟೆಬರೆ ಕಸಗಳನ್ನು ನದಿಗೆ ಎಸೆಯದಂತೆ ಅರಿವು ಮೂಡಿಸುವುದು ಮತ್ತಿತರ ಕಾರ್ಯಗಳು ನಡೆಯಲಿವೆ. ಶ್ರದ್ಧಾ ಕೇಂದ್ರದ ಪರಿಕರಗಳನ್ನು ಸ್ವಚ್ಛಗೊಳಿಸಲಾಗುವುದು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಎಲ್.ಎಚ್. ಮಂಜುನಾಥ್ ತಿಳಿಸಿದ್ದಾರೆ.

ಕ್ಷೇಮ ಕುಶಲ



ಅತಿಯಾದ ಆಲೋಚನೆಗಳು ಬೇಡ

ರಮ್ಯಾ ಶ್ರೀಹರಿ

ಮುಖ್ಯವಾಗಿ ಎರಡು ಬಗೆಯ ಆಲೋಚನೆಗಳು ಒಂದಕ್ಕೊಂದು ತಳುಕು ಹಾಕಿಕೊಂಡು ನಮ್ಮ ನೆಮ್ಮದಿಯನ್ನು ಕೆಡಿಸುತ್ತವೆ. ಮೊದಲನೆಯದು: 'ನಾಳೆ ಏನಾಗುವುದೋ, ಹೇಗೋ, ಏನೋ; ಹೀಗಾಗಿಬಿಟ್ಟರೆ, ಹಾಗಾಗಿಬಿಟ್ಟರೆ?' ಎಂದು ಬರೀ ಕೆಟ್ಟದ್ದನ್ನೇ ಕಲ್ಪನೆ ಮಾಡಿಕೊಳ್ಳುತ್ತಾ, ಕಲ್ಪನೆಯಲ್ಲೇ ನರಳುತ್ತಾ ಇರುವುದು. ಎರಡನೆಯದು: 'ನನ್ನಲ್ಲೇನೋ ದೋಷವಿದೆ; ನಾನು ಏನೋ ಒಂದು ರೀತಿಯಲ್ಲಿ 'ಸರಿ'ಯಾಗಿಲ್ಲ; ಎಲ್ಲದರಲ್ಲೂ ಸೋಲು, ಹತಾಶೆ ನನಗೆ ಕಟ್ಟಿಟ್ಟ ಬುತ್ತಿ' – ಹೀಗೆ ಇನ್ನೂ ಏನೇನೋ ಸ್ವ-ನಂಬುಗೆಯ ಬಗೆಗಿನ ಆಲೋಚನೆಗಳು. ಇವುಗಳ ಮೇಲೆ ನಮಗೆ ನಿಯಂತ್ರಣವೇ ಇರುವುದಿಲ್ಲ; ಒಂದು ಆಲೋಚನೆ ಇನ್ನೊಂದರ ಹಿಂದೆ ಸ್ವಯಂಚಾಲಿತವಾಗಿ ಬರುತ್ತಲೇ ಇರುವುದರಿಂದ ಇಂತಹ ಆಲೋಚನೆಗಳನ್ನು 'automatic negative thoughts' ಎನ್ನುತ್ತಾರೆ. ಇದೇ ಅತಿಯಾದ ಆಲೋಚನೆ ಅಥವಾ 'over thinking'.

ಹೀಗೆ ಅತಿಯಾದ ಆಲೋಚನೆಯಿಂದ ಬಳಲುವವರು ಮೂಲತಃ ಬಹಳ ಸೂಕ್ಷ್ಮಮನಸ್ಸಿನವರು; ಸಂವೇದನಾಶೀಲರೂ ಹೌದು ಎನ್ನುವುದನ್ನು ಮರೆಯಬಾರದು. ತಮ್ಮ ಸುತ್ತಲಿನ ಪ್ರಪಂಚವನ್ನು, ಜೀವನವನ್ನು, ತಮ್ಮ ಜೊತೆಗಿರುವವರ ನಡವಳಿಕೆಯನ್ನು, ತಮ್ಮಲ್ಲೇ ಆಗುತ್ತಿರುವ ಭಾವನಾತ್ಮಕ ಏರಿಳಿತಗಳನ್ನು ಬಲು ಸೂಕ್ಷ್ಮವಾಗಿ ಗ್ರಹಿಸುವ ಶಕ್ತಿ ಇರುವ ಇಂತಹವರು ಆತಂಕಕ್ಕೆ, ಅತಿಯಾದ ಭಯಕ್ಕೆ ಒಳಗಾಗುವ ಸಾಧ್ಯತೆಯಿದೆ. ಈ ರೀತಿಯಾದ ಸೂಕ್ಷ್ಮಪ್ರವೃತ್ತಿಯವರು ಬದುಕಿನ ಅನಿಶ್ಚಿತತೆಯಿಂದ, ಸಂಬಂಧಗಳ ಟೊಳ್ಳುತನದಿಂದ ಬಾಧಿತರೂ ಹೌದು. ಹಾಗಾಗಿ ಸದಾ ತಮ್ಮ ಹಿಡಿತ ತಪ್ಪಿ ಹೋಗುತ್ತಿರುವ ತಮ್ಮ ಬದುಕನ್ನು ಹೇಗಾದರೂ ಅಂಕೆಯಲ್ಲಿಟ್ಟುಕೊಳ್ಳುವ ಪ್ರಯತ್ನವಾಗಿ 'ಆಲೋಚನೆಗಳನ್ನು' ಬಳಸಿಕೊಳ್ಳುವ ಪ್ರಯತ್ನ ಇವರದು.

ಸ್ವಲ್ಪ ಮಟ್ಟಿಗಿನ ಆತಂಕ, ಆಲೋಚನೆ ಒಳ್ಳೆಯದೇ. ಇಲ್ಲದಿದ್ದರೆ ಅನಿರೀಕ್ಷಿತವಾಗಿ ಬದುಕಿನಲ್ಲಿ ಬರುವ ಎಷ್ಟೆಷ್ಟೋ ಕಷ್ಟ ನಷ್ಟಗಳನ್ನು ಯಾವ ಮಾನಸಿಕ ತಯಾರಿಯೂ ಇಲ್ಲದೆ, ಯಾವ ಮುನ್ಸೂಚನೆಯೂ ಇರದೇ ಎದುರಿಸುವುದು ಹೇಗೆ? ಆಲೋಚನೆ ಮತ್ತು ಅದು ತರುವ ಆತಂಕಗಳು, ಅವುಗಳ ನಿವಾರಣೆಗಾಗಿ ಮತ್ತು ಅನಿರೀಕ್ಷಿತಗಳನ್ನು ಎದುರಿಸಲು ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳದಿರುವ ಯಾವ ಮಾನವಸಮಾಜವೂ ಬಹುಕಾಲ ಬಾಳುವುದಿಲ್ಲ. ಹಾಗಾಗಿ ಆಲೋಚನೆಗಳಿಗೆ, ಆತಂಕಕ್ಕೆ survival value ('ರಕ್ಷಣಗುಣ') ಇದೆ; ಅದು ನೆಮ್ಮದಿಗೆ ಮಾರಕ ಹೌದು; ಆದರೆ ಸುರಕ್ಷೆಗೆ ಪೂರಕವೂ ಹೌದು! ಮಾನವಕುಲ ಸ್ವಲ್ಪ ಮಟ್ಟಿಗಿನ ಆತಂಕಕ್ಕೆ ಮತ್ತು ನೆಮ್ಮದಿಯನ್ನು ತಾತ್ಕಾಲಿಕವಾಗಿ ಕಳೆದುಕೊಳ್ಳುವುದಕ್ಕೆ ಒಗ್ಗಿಕೊಂಡೇ ವಿಕಸನವಾಗಿರುವುದು!

ಉದಾಹರಣೆಗೆ, ನಾಳೆ ನಮಗೆ ಆರ್ಥಿಕ ಸಂಕಷ್ಟಗಳು ಬರಬಹುದೆಂಬ ಆಲೋಚನೆ ಇಂದು ನಮಗೆ ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳಲು ಪ್ರೇರಕವಾಗುತ್ತದೆ. ಆದರೆ ಎಲ್ಲ ಬಗೆಯ ಆಲೋಚನೆಗಳೂ ಹೀಗೇ ನಮಗೆ ಸಹಾಯಕವಾದುದಲ್ಲ. ಕೆಲವೊಂದು ವಾಸ್ತವದ ಜೊತೆಗೆ ಯಾವ ನಂಟನ್ನೂ ಹೊಂದಿರದ ಯಾವುದೋ ಹಳೆಯ ಒಂದೋ ಎರಡೋ ಕಹಿನೆನಪನ್ನು ಆಧರಿಸಿದ ಋಣಾತ್ಮಕ ಆಲೋಚನೆಗಳಾಗಿರುತ್ತವೆ. ಉದಾಹರಣೆಗೆ, ಯಾವುದೋ ವಿಮಾನ ಅಪಘಾತದ ಸುದ್ದಿ ಓದಿ ವಿಮಾನದಲ್ಲಿ ಪ್ರಯಾಣಿಸುವಾಗ ಅಂಥದ್ದೇ ಅಪಘಾತವಾಗಿಬಿಟ್ಟರೆ ಎಂಬ ಅತಿಯಾದ ಆಲೋಚನೆಗಳಿಂದ ಬಾಧಿತರಾಗಿ ಹೊಸ ಹೊಸ ಜಾಗಗಳನ್ನು ನೋಡುವ ಅವಕಾಶದಿಂದ ವಂಚಿತರಾಗುವುದು, ಯಾರೋ ಎಂದೋ ಆಡಿದ ಟೀಕೆಯ ಮಾತುಗಳನ್ನು ಮನಸ್ಸಿನಲ್ಲಿ ಬೃಹದಾಕಾರಕಾಗಿ ಕಲ್ಪಿಸಿಕೊಂಡು 'ನಾನು ಯಾವುದಕ್ಕೂ ಪ್ರಯೋಜನವಿಲ್ಲ' ಎನ್ನುವ ತೀರ್ಮಾನಕ್ಕೆ ಬಂದುಬಿಡುವುದು. ಹೀಗೆ ಅತಿಯಾದ ಆಲೋಚನೆಗಳು ನಮ್ಮ ಜೀವನದ ಸಹಜ ಲಯಕ್ಕೆ ಅಡಚಣೆಗಳಾಗುವುದೂ ಉಂಟು.

> ಅತಿಯಾದ ಆಲೋಚನೆಯಿಂದ ಬಳಲುವವರು ಮೂಲತಃ ಬಹಳ ಸೂಕ್ಷ್ಮಮನಸ್ಸಿನವರು; ಸಂವೇದನಾಶೀಲರೂ ಹೌದು ಎನ್ನುವುದನ್ನು ಮರೆಯಬಾರದು

ಮೊದಲು ಹೇಳಿದ ಎರಡು ಬಗೆಯ ಆಲೋಚನೆಗಳು ಒಂದಕ್ಕೊಂದು ತಳುಕು ಹಾಕಿಕೊಳ್ಳುವುದು ಹೇಗೆಂದರೆ: 'ನನ್ನಲ್ಲೇನೋ ದೋಷವಿದೆ' ಎಂದುಕೊಂಡಾಗ 'ನನಗೇನೋ ಕೆಟ್ಟದ್ದು ಕಾದಿದೆ' ಎಂದೆನಿಸುವುದು ಸಹಜ. ಹಾಗಿಲ್ಲದೇ 'ನಾನು ನಿರ್ಮಲ, ಸಹಜ, ಸುಂದರ, ಪ್ರೀತಿಗೆ ಅರ್ಹ' ಎಂದುಕೊಂಡಾಗ 'ಎಲ್ಲ ಕಷ್ಟಗಳೂ ನನ್ನನ್ನು ಇನ್ನಷ್ಟು ಸುಂದರಗೊಳಿಸಲು, ಬೆಳೆಸಲು, ಸ್ವಚ್ಛಗೊಳಿಸಲು ಉಂಟಾಗುವಂಥದ್ದು' ಎನಿಸಿ ಎಲ್ಲವನ್ನೂ ಸಮಚಿತ್ತದಿಂದ ನಿರ್ವಹಿಸಲು ಪ್ರೇರೇಪಿಸುತ್ತದೆ. ಹೀಗೆ ಆಲೋಚನೆಗಳು ಒಂದಕ್ಕೊಂದು ಸೇರಿಕೊಂಡು ಒಂದು ವಿಷದ ಸುಳಿಯನ್ನೇ ಸೃಷ್ಟಿಸುತ್ತವೆ.





ಈ ಬಗೆಯ ಆಲೋಚನೆಗಳ ಸುಳಿಯಿಂದ ತಪ್ಪಿಸಿಕೊಳ್ಳಲು ಸಹಾಯಕವಾಗಬಹುದಾದ ಕೆಲವು ಸಲಹೆಗಳು

1. ಯಾವುದೇ ಘಟನೆಯನ್ನು ನಾವು ಕೇವಲ 'ಆಲೋಚನೆಗಳಿಂದ' ನಿಯಂತ್ರಿಸಲಾರೆವು. ನಾವೆಷ್ಟೇ ಆಲೋಚಿಸಿದರೂ ಬದುಕು ಸಂಪೂರ್ಣ ನಮ್ಮ ಹಿಡಿತದಲ್ಲಿಲ್ಲ. ಈ ಸತ್ಯವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಬದುಕಿನ ಅನಿಶ್ಚಿತತೆಯೊಡನೆ ಶಾಂತಿಸಂಧಾನ ಮಾಡಿಕೊಳ್ಳುವುದು ನಿರಾಳವಾಗಿರುವುದಕ್ಕೆ ಸಹಾಯಕ.

2. ಜೀವನದಲ್ಲಿ ಕಷ್ಟಗಳು ಬಂದಾಗ ಅದನ್ನೆದುರಿಸುವ ಶಕ್ತಿಯೂ ಜೊತೆಗೇ ಬರುತ್ತದೆ ಎನ್ನುವುದು ಒಂದು ನಂಬಿಕೆ. ಜೀವನದಲ್ಲಿನ ಕೆಲವು ಕಷ್ಟಗಳನ್ನು ಎದುರಿಸಿದ ನೆನಪೂ ಈ ನಂಬಿಕೆಯನ್ನು ಪುಷ್ಟೀಕರಿಸುತ್ತದೆ. 'ಕಷ್ಟ ಬಂದಾಗ ಅದನ್ನು ಎದುರಿಸೋಣ; ಅಲ್ಲಿಯವರೆಗೆ ಜೀವನವನ್ನು ಆಸ್ವಾದಿಸಿ ಶಾಂತವಾಗಿದ್ದುಕೊಂಡು ಕಷ್ಟಗಳನ್ನೆದುರಿಸಲು ಬೇಕಾದ ಸ್ಥೈರ್ಯ ಸಂಪಾದಿಸೋಣ' ಎನ್ನುವ ನಿಲುವು ಕ್ಷೇಮ. ವಾಸ್ತವದಲ್ಲಿ ಕಷ್ಟಗಳೆದುರಾದಾಗ ಅದನ್ನು ನಿರ್ವಹಿಸಲು ಬೇಕಾದ ಅನೇಕ ಸಂಪನ್ಮೂಲಗಳು ಒದಗಿ ಬರುತ್ತವೆ. ಆದರೆ ಬರೀ 'ಆಲೋಚನೆ'ಯಲ್ಲೇ ಕಷ್ಟಪಡುತ್ತಿರುವಾಗ ಅಂತಹ ಸಂಪನ್ಮೂಲಗಳನ್ನು, ನೆರವಿನ ಹಸ್ತಗಳನ್ನು ನಾವು ಗಣನೆಗೆ ತೆಗೆದುಕೊಳ್ಳದೇ ಎಲ್ಲವನ್ನೂ ಅತಿರೇಕವಾಗೇ ಚಿತ್ರಿಸಿಕೊಳ್ಳುತ್ತಿರುತ್ತೇವೆ.

3. ಅನೇಕ ರೀತಿಯ ಕೆಟ್ಟ ಆಲೋಚನೆಗಳು ಉಂಟಾಗುವಾಗ ಒಮ್ಮೊಮ್ಮೆ 'ಅವು ನಿಜವೇನೋ' ಎನ್ನುವ ಭ್ರಮೆಯೂ ಉಂಟಾಗುತ್ತದೆ. ಇದು ಆಲೋಚನೆಗಳು ತರುವ ಆತಂಕದ ಫಲ. ಆತಂಕ ನಾವು ವಾಸ್ತವವನ್ನು ಗ್ರಹಿಸುವ ರೀತಿಯಲ್ಲಿ ಮಾರ್ಪಾಡುಗಳನ್ನು ಮಾಡುತ್ತದೆ. ಒಮ್ಮೊಮ್ಮೆ ಆಲೋಚನೆಯಲ್ಲಿ ಚಿತ್ರಿಸಿಕೊಂಡಿದ್ದು ನಿಜದಲ್ಲಿ ಖಂಡಿತ ನಡೆಯುತ್ತದೆ, ಹಾಗಾಗಿ ಆಲೋಚನೆಯನ್ನು ನಿಯಂತ್ರಿಸಬೇಕು ಎನಿಸುತ್ತದೆ. ಇದು ಒಂದು ಬಗೆಯ ಭಯಮಿಶ್ರಿತ ಭ್ರಮೆಯಷ್ಟೇ! ಉದಾಹರಣೆಗೆ, 'ನಾನು ನನ್ನ ನಿಯಂತ್ರಣವನ್ನು ಕಳೆದುಕೊಂಡು ಸಹೋದ್ಯೋಗಿಗಳೊಂದಿಗೆ/ಮನೆಯವರೊಂದಿಗೆ ಅನುಚಿತವಾಗಿ ವರ್ತಿಸಿಬಿಟ್ಟರೆ?' ಎಂಬ ಭಯ ನಿಜವಾಗಲೂ ಅಂತಹ ಘಟನೆ ಇನ್ನೇನು ನಡೆಯುವುದರಲ್ಲಿದೆ ಎಂಬ ಆತಂಕ ಹುಟ್ಟಿಸುತ್ತದೆ. ಆದರೆ ನಿಜದಲ್ಲಿ ಹಾಗೇನೂ ನಡೆಯುವುದಿಲ್ಲ. ಇಂತಹ ಪದೇಪದೇ ಎಲ್ಲಿಂದಲೋ ಬಂದು ಕಾಡಿಸುವ ಆಲೋಚನೆಗಳನ್ನು ''unwanted intrusive thoughts' ಎನ್ನುತ್ತಾರೆ. ಇವುಗಳು ಉಂಟಾದಾಗ ವಾಸ್ತವಕ್ಕೂ ಆಲೋಚನೆಗೂ ನಡುವಿನ ಗೆರೆಯೇ ಅಳಿಸಿಹೋದಂತಹ ಭ್ರಮೆಯುಂಟಾಗುತ್ತದೆ. ಇದಕ್ಕೆ ಕಾರಣ ಮನಸ್ಸಿನ ಮೇಲೆ, ಆಲೋಚನೆಗಳ ಮೇಲೆ, ಭಾವನೆಗಳ ಮೇಲೆ ನಿಯಂತ್ರಣವಿಲ್ಲದೆ ಇರುವುದಲ್ಲ; ಬದಲಾಗಿ ಮನಸ್ಸಿನ ಮೇಲೆ, ಆಲೋಚನೆಗಳ ಮೇಲೆ, ಭಾವನೆಗಳ ಮೇಲೆ ಅತಿಯಾದ ನಿಯಂತ್ರಣವಿರುವುದು!

4. ಹೌದು, ಆಲೋಚನೆಗಳನ್ನು ನಾವು ನಿಯಂತ್ರಿಸಲಾರೆವು. ಹಾಗೆ ನಿಯಂತ್ರಿಸಲಾರೆವು ಎನ್ನುವುದು ಆತಂಕಕ್ಕೆ ಕಾರಣವಾಗಬೇಕಿಲ್ಲ. ಅತಿ ಆಲೋಚನೆಗಳು ವಾಸ್ತವದ ಪ್ರತಿಬಿಂಬವಾಗಿರುವುದಿಲ್ಲ. ಅವು ನಮ್ಮ ಅಭದ್ರತೆಯ ಭಾವದ ಪ್ರತಿಬಿಂಬಗಳಷ್ಟೇ. ಆಲೋಚನೆಗಳು ತಮ್ಮಷ್ಟಕ್ಕೆ ಹೇಗೆ ಬರುತ್ತವೆಯೋ ಹಾಗೆ ತಮ್ಮಷ್ಟಕ್ಕೆ ಹೊರಟು ಹೋಗುತ್ತವೆ ಕೂಡ. ಆದರೆ ಮುಖ್ಯವಾಗಿ ನಾವು ಅಂತಹ ಆಲೋಚನೆಗಳಿಗೆ ಯಾವುದೇ ಪ್ರಾಮುಖ್ಯವನ್ನು ಕೊಡಬಾರದು ಅಷ್ಟೇ.

5. ಅತಿಯಾದ ಆಲೋಚನೆಗಳ ಬಾಧೆ ಹೆಚ್ಚಾದಾಗ ದೀರ್ಘವಾಗಿ ಉಸಿರಾಡುವ ಅಭ್ಯಾಸ ಮಾಡಿಕೊಳ್ಳುವುದು ಸಹಾಯಕ. ಹಾಗೆಯೇ ಅಂತಹ ಆಲೋಚನೆಗಳು ಬಂದಾಗ ಆ ಆಲೋಚನೆಗಳನ್ನು ಪುರಸ್ಕರಿಸುವ, ತಿರಸ್ಕರಿಸುವ, ಯಾವ ಪ್ರಯತ್ನವನ್ನೂ ಮಾಡದೇ ಸುಮ್ಮನೇ ಸ್ವೀಕರಿಸಿ ಅವು ಕೇವಲ 'ಬಂದು ಹೋಗುವ ನಿರಪಾಯಕಾರಿ ಆಲೋಚನೆಗಳಷ್ಟೇ' ಎಂದುಕೊಂಡು ಸ್ವಲ್ಪ ಅವುಗಳನ್ನು ಸಹಿಸುವ ತಾಳ್ಮೆಯುಂಟಾದರೆ ಕೆಲವು ನಿಮಿಷಗಳಲ್ಲೇ ಅವು ಮಾಯವಾಗುವುವು!

❖

ಶೋಧಕದೃಷ್ಟಿ ಇರಲಿ

ಡಾ. ಮುರಳೀಧರ ಕಿರಣಕೆರೆ

ಎಲ್ಲಾ ರೀತಿಯಿಂದಲೂ ಆರೋಗ್ಯದಿಂದಿದ್ದ ಆ ಮಹಿಳೆಗೆ ದಿಢೀರೆಂದು ಉಸಿರಾಟದ ಸಮಸ್ಯೆ ಶುರುವಾಗಿತ್ತು; ತುಂಬಾ ಗಂಭೀರವಾದುದ್ದೇನೂ ಅಲ್ಲ. ಶ್ವಾಸವನ್ನು ತೆಗೆಯುವಾಗ, ಬಿಡುವಾಗ ಅದುಮಿ ಹಿಡಿದ ಅನುಭವ. ಎದೆಯೊಳಗೆ ಒತ್ತಡದ ಭಾವನೆ, ಕಿರಿಕಿರಿ. ರಾತ್ರಿ ಮಲಗುವವರೆಗೂ ವಿಭಿನ್ನ ತೀವ್ರತೆಯಲ್ಲಿ ಕಾಡುತ್ತಿದ್ದ ಸಮಸ್ಯೆ ಬೆಳಿಗ್ಗೆ ಏಳುವಾಗ ಮಾತ್ರ ಒಂದಿನಿತೂ ಇರುತ್ತಿರಲಿಲ್ಲ. ಹಗಲಿನಲ್ಲಿ ಮಾತ್ರ ಎದುರಾಗುತ್ತಿದ್ದ ತೊಂದರೆ ಇರುಳಿನಲ್ಲಿ ಮಾಯವಾಗುವುದು ಆಶ್ಚರ್ಯ ತಂದಿತ್ತು! ಇನ್ನೊಂದು ಅಚ್ಚರಿಯ ವಿಚಾರವೆಂದರೆ ಬಂಧು-ಮಿತ್ರರ ಮನೆ, ಕಾರ್ಯಕ್ರಮಗಳಿಗೆಂದು ಹೊರಹೋದಾಗ ಈ ಸಮಸ್ಯೆ ಸಂಪೂರ್ಣ ಗೈರಾಗುತ್ತಿತ್ತು. ಹಾಗಾದರೆ ಮನೆಯೊಳಗೆ ಕಾಡಿಸುವ ಅಂಶ ಏನಿದ್ದೀತು?

ಅಲರ್ಜಿಯ ಅನುಮಾನದಲ್ಲಿ ಅಗರಬತ್ತಿಯನ್ನು ಬದಲಿಸಿ ನೋಡಾಯ್ತು. ಮನೆಯಲ್ಲಿ ಯಾವುದೇ ಸಾಕುಪ್ರಾಣಿಗಳು ಇಲ್ಲದ್ದರಿಂದ ಪ್ರಾಣಿಜನ್ಯವಾದದ್ದೂ ಅಲ್ಲ. ಆಹಾರಪದಾರ್ಥಗಳನ್ನೂ ಬದಲಿಸಿ ಪರೀಕ್ಷಿಸಲಾಯ್ತು. ತಮ್ಮ ಶೋಧಕದೃಷ್ಟಿಯನ್ನು ಮನೆಯೊಳಗೆಲ್ಲಾ ಹಾಯಿಸಿದರೂ ಪರಿಹಾರ ಸಿಗಲಿಲ್ಲ. ಇಸಿಜಿ, ಇಕೋ ಮಾಡಿಸುವಂತೆ ವೈದ್ಯಕೀಯ ಸಲಹೆ ಸಿಕ್ಕಿತು. ಇದು ಹೃದಯಕ್ಕೆ ಸಂಬಂಧಿಸಿದ್ದು ಖಂಡಿತ ಅಲ್ಲವೆಂದು ಖಚಿತವಿದ್ದರಿಂದ ಯಾವುದೇ ವೈದ್ಯಕೀಯ ಪರೀಕ್ಷೆಗಳಿಗೆ ಒಡ್ಡಿಕೊಳ್ಳಲು ಬಯಸಲಿಲ್ಲ. ಸ್ವ-ತಪಾಸಣೆ ಮುಂದುವರೆಸಿದಾಗ ರೊಟ್ಟಿ, ದೋಸೆ, ಚಪಾತಿ ಮಾಡಿದ ದಿನಗಳಂದು ಸಮಸ್ಯೆ ಹೆಚ್ಚಿರುವುದು ಗಮನಕ್ಕೆ ಬಂದಿತ್ತು. ಅಡುಗೆಮನೆಯಲ್ಲಿ ಕಳೆಯುವ ಅವಧಿ ಕಡಿಮೆಯಿದ್ದಾಗ ತೊಂದರೆಯೂ ಕನಿಷ್ಠ!

ಸುಮಾರು ಒಂದು ತಿಂಗಳ ಬಳಲಿಕೆಯ ನಂತರ ಕೊನೆಗೂ ಆ ಮಹಿಳೆ ತಮ್ಮ ಸಮಸ್ಯೆಗೆ ಕಾರಣ ಕಂಡುಕೊಂಡಿದ್ದರು. ಅಡುಗೆಗೆ ಬಳಸುತ್ತಿದ್ದ ಎಲ್‌ಪಿಜಿ ಗ್ಯಾಸ್ ಅಲರ್ಜಿ ತರುತ್ತಿತ್ತು! ಗ್ಯಾಸ್ ಉರಿದಾಗ ಬಿಡುಗಡೆಯಾಗುತ್ತಿದ್ದ ಇಂಗಾಲದ ಅನಿಲ ದೇಹಕ್ಕೆ ಒಗ್ಗುತ್ತಿರಲಿಲ್ಲ. ಅವರ ಮನೆಯಲ್ಲಿ ಬೆಳಗಿನ ತಿಂಡಿ ತಯಾರಿ ಬೇಗ. ಸೊಳ್ಳೆಗಳು ಬರುವುದೆಂಬ ಕಾರಣಕ್ಕೆ ಪೂರ್ಣವಾಗಿ ಬೆಳಕು ಹರಿಯುವವರೆಗೆ ಕಿಟಕಿ, ಬಾಗಿಲುಗಳನ್ನು ತೆರೆಯುತ್ತಿರಲಿಲ್ಲ. ಗಾಳಿಯ ಸರಾಗ ಚಲನೆಯಿಲ್ಲದೆ ಬಿಡುಗಡೆಯಾಗುತ್ತಿದ್ದ ರಾಸಾಯನಿಕ ವಾಯುವಿನಿಂದ ಅಲರ್ಜಿಯಾಗುತ್ತಿತ್ತು! ಆಕೆ ಈಗ ಗ್ಯಾಸ್ ಹಚ್ಚುವಾಗಲೆಲ್ಲಾ ಕಿಟಕಿ ತೆರೆದಿಡುತ್ತಾರೆ. ಸೊಳ್ಳೆಗಳನ್ನು ನಿರ್ಬಂಧಿಸಲು ಮೆಶ್ ವ್ಯವಸ್ಥೆ ಮಾಡಿಸಿಕೊಂಡಿದ್ದಾರೆ. ತೊಡಕೂ ಬಗೆಹರಿದಿದೆ.

ಹೌದು, ಈ ತರಹದ ಸಮಸ್ಯೆಗಳು ತುಂಬಾ ಅಪರೂಪ. ಅಡುಗೆ ಅನಿಲ ಉರಿಸುವಾಗ ಬಿಡುಗಡೆಯಾಗುವ ಕಾರ್ಬನ್ ಮೊನಾಕ್ಸೈಡ್ ಪ್ರಮಾಣ ಅತ್ಯಲ್ಪ. ಕೆಲವರಿಗೆ ಈ ನಗಣ್ಯ ಪ್ರಮಾಣವೂ ಅಲರ್ಜಿ ತರಬಲ್ಲದು! ಅದೇ ಸರಿಯಾಗಿ ಗಾಳಿಯಾಡದೆಡೆ ಬಿಸಿನೀರಿಗಾಗಿ ಗ್ಯಾಸ್ ಗೀಸರ್ ಬಳಸುವಾಗ ಈ ಅನಿಲ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ನಿರ್ಬಂಧಿತ ವಾತಾವರಣದಲ್ಲಿ ಇದೇ ವಾಯು ತೀವ್ರ ವಿಷಕಾರಿಯಾಗಿ ಸಾವಿನ ದವಡೆಗೂ ನೂಕಬಲ್ಲದು!

ಪ್ರತಿಯೊಬ್ಬರ ದೇಹಪ್ರಕೃತಿಯೂ ವಿಭಿನ್ನ. ಕೆಲವರ ದೇಹಕ್ಕೆ ಸರಾಗವಾಗಿ ಒಗ್ಗುವ ಅಂಶಗಳು ಮತ್ತೆ ಕೆಲವರಿಗೆ ತೀವ್ರ ಅಲರ್ಜಿ ಉಂಟುಮಾಡಬಲ್ಲವು. ಹಾಗಾಗಿ ಶಾರೀರಿಕವಾಗಿ ಯಾವುದೇ ಸಮಸ್ಯೆ ತಲೆದೋರಿದಾಗ ಇದು ಯಾಕೆ ಬಂತೆಂದು ತಿಳಿಯುವ ಪ್ರಯತ್ನ ಮಾಡಬೇಕು. ಸ್ವತಃ ಶೋಧನೆ ಪರಿಹಾರ ಕಂಡುಕೊಳ್ಳಲು, ಮತ್ತೊಮ್ಮೆ ಆ ಬಗೆಯ ಕಂಟಕಗಳು ಬಾರದಂತೆ ತಡೆಯಲು ಸಹಕಾರಿ. ಅನಾರೋಗ್ಯದ ಲಕ್ಷಣಗಳು ಕಾಣಿಸಿಕೊಂಡಾಗ ತಕ್ಷಣ ಔಷಧ, ವೈದ್ಯಕೀಯ ತಪಾಸಣೆಗಳ ಮೊರೆ ಹೋಗುವವರೇ ಅಧಿಕ. ಇದರಿಂದಾಗುವ ಖರ್ಚುವೆಚ್ಚ, ವ್ಯರ್ಥವಾಗುವ ಸಮಯ, ಔಷಧಗಳ ಅಡ್ಡ ಪರಿಣಾಮ, ಎಲ್ಲ ಮಾಡಿಯೂ ಸಮಸ್ಯೆಗೆ ಪರಿಹಾರ ದೊರಕದಾಗ ಪ್ರಯತ್ನಗಳೆಲ್ಲಾ ನಿಷ್ಫಲ!

ಮೂಗು ಸೋರುವುದು, ಉರಿ, ಸೀನು, ಕೆಮ್ಮು, ದಮ್ಮು, ಉಸಿರಾಟಕ್ಕೆ ತೊಂದರೆ, ಬಿಕ್ಕಳಿಕೆ, ಕಣ್ಣುಗಳಲ್ಲಿ ತುರಿಕೆ, ಕೆಂಪಾಗುವಿಕೆ, ರೆಪ್ಪೆಗಳು ಊದಿಕೊಳ್ಳುವುದು, ಚರ್ಮದ ಮೇಲೆ ಗುಳ್ಳೆಗಳು, ನಾಲಿಗೆ, ತುಟಿ, ಗಂಟಲು ಊದಿಕೊಳ್ಳುವುದು, ಹೊಟ್ಟೆನೋವು, ವಾಂತಿ, ಭೇದಿ – ಹೀಗೆ ಅಲರ್ಜಿಯ ಲಕ್ಷಣಗಳು ಹಲವು. ಇಂತಹ ಲಕ್ಷಣಗಳು ದಿಢೀರೆಂದು ಕಾಣಿಸಿಕೊಂಡರೆ ದೇಹಕ್ಕೆ ಒಗ್ಗದ ಯಾವುದೂ ವಸ್ತುವಿನ ಸಂಪರ್ಕವಾಗಿದೆಯೆಂದು ಅರ್ಥ. ಇದು ಆಹಾರದ ಅಲರ್ಜಿಯಾಗಿರಬಹುದು, ಗಾಳಿ-ನೀರಿನದ್ದಿರಬಹುದು, ದೂಳು, ಪರಾಗ, ಕ್ರಿಮಿಕೀಟ, ರಾಸಾಯನಿಕಗಳ ಸಂಪರ್ಕದಿಂದಲೂ ಉಂಟಾಗಿರಬಹುದು.

ಹೌದು, ಕೆಲವರ ದೇಹದ ರೋಗ ನಿರೋಧಕ ವ್ಯವಸ್ಥೆ ತುಂಬಾ ಸೂಕ್ಷ್ಮ. ಕೆಲವು ಪದಾರ್ಥಗಳು ವಾಸ್ತವದಲ್ಲಿ ಹಾನಿಕರವಲ್ಲದಿದ್ದರೂ ಶರೀರದ ರಕ್ಷಣಾದಳ ಮಾತ್ರ ಇವು ಅಪಾಯಕಾರಿಯೆಂದು ಪರಿಗಣಿಸಿ ಪ್ರತಿರೋಧಕಗಳನ್ನು ಬಿಡುಗಡೆಗೊಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಉತ್ಪತ್ತಿಯಾಗುವ ಹಿಸ್ಟಮಿನ್ ತರದ ರಾಸಾಯನಿಕಗಳು ಅಲರ್ಜಿ ಲಕ್ಷಣಗಳನ್ನು ಸೃಷ್ಟಿಸಿ ಸಂಭವನೀಯ ಅಪಾಯದ ವಿರುದ್ಧ ಎಚ್ಚರಿಸುವ ಕಾರ್ಯ ಮಾಡುತ್ತವೆ.

ಕಡಲೆಬೇಳೆ, ಹಾಲು, ಕೆಲವು ಜಾತಿಯ ಹಣ್ಣು, ತರಕಾರಿಗಳು, ಆಹಾರಪದಾರ್ಥ, ಸೋಪು, ರಾಸಾಯನಿಕಗಳು, ಧೂಮಗಳಿಗೆ ಕೆಲವರ ದೇಹ ತೀವ್ರವಾಗಿ ಪ್ರತಿಕ್ರಿಯಿಸುವುದು ಅಲರ್ಜಿಯ ಕಾರಣಕ್ಕೆ. ಇದು ಯಾವ ವಯಸ್ಸಿನಲ್ಲೂ ಕಾಣಿಸಬಹುದು. ನಮ್ಮ ದೇಹಕ್ಕೆ ಒಗ್ಗದಿರುವುದನ್ನು ನಾವೇ ಕಂಡುಕೊಂಡಾಗ ಪರಿಹಾರ ಸುಲಭ. ಹಾಗಾಗಿ ಆರೋಗ್ಯದ ಸಮಸ್ಯೆಗಳು ಬಂದಾಗ ಪ್ರಾಥಮಿಕ ಹಂತದಲ್ಲಿ ಸ್ವತಃ ಪತ್ತೆದಾರರಾಗುವುದು ಅಪೇಕ್ಷಣೀಯ. ತೊಂದರೆ ತೀವ್ರವಾಗಿದ್ದಾಗ, ತುರ್ತುಪರಿಸ್ಥಿತಿಯಿದ್ದಾಗ ತಡಮಾಡದೆ ವೈದ್ಯಕೀಯ ನೆರವು ಪಡೆದುಕೊಳ್ಳುವುದು ಮುಂದಾಗುವ ಅಪಾಯ ತಪ್ಪಿಸಬಲ್ಲದು.

❖

ಆಟದ ನಿಯಮಗಳಂತೆಯೇ ಜೀವನದ ನಿಯಮಗಳೂ

ಡಾ. ಕಿರಣ್ ವಿ. ಎಸ್.

> ನಿಯಮಗಳು ಆಟಗಳ ವಿಷಯದಲ್ಲಿ ಮಾತ್ರವೇ ಪ್ರಸ್ತುತ ಎಂದಲ್ಲ. ಜೀವನದ ಪ್ರತಿಯೊಂದು ಹಂತದಲ್ಲೂ ನಿಯಮಗಳು ಇರುತ್ತವೆ. ಬದುಕಿನ ನಿಯಮಗಳಲ್ಲಿ ಕೆಲವು ಲಿಖಿತ; ಹಲವು ಅಲಿಖಿತ; ಬಹುತೇಕವು ನಿರಂತರವಾಗಿ ಬದಲಾಗುತ್ತಿರುವ ನಿಯಮಗಳು.

ಆಟೋಟದ ಪಂದ್ಯಗಳಲ್ಲಿ ಹೆಚ್ಚು ಗೆಲ್ಲುವವರು ಯಾರು? ಕೇವಲ ಅತ್ಯಂತ ಹೆಚ್ಚಿನ ಕೌಶಲವುಳ್ಳವರೋ, ಅಧಿಕ ಬಲಶಾಲಿಗಳೋ, ದೊಡ್ಡ ಸಂಖ್ಯೆಯ ಬೆಂಬಲಿಗರಿರುವವರೋ ಮಾತ್ರವೇ ಅಲ್ಲ. ಬದಲಿಗೆ, ತಕ್ಕ ಮಟ್ಟಿನ ಕೌಶಲ, ಬಲ ಮತ್ತು ಬೆಂಬಲಗಳ ಜೊತೆಗೆ ಆಟದ ನಿಯಮಗಳ ಪರಿಪೂರ್ಣ ಜ್ಞಾನ ಉಳ್ಳವರು. ಇದಕ್ಕೆ ಹತ್ತಾರು ಉದಾಹರಣೆಗಳನ್ನು ನೀಡಬಹುದು. ಕ್ರಿಕೆಟ್ ಆಟದಲ್ಲಿ ಮಳೆಯಿಂದ ಪಂದ್ಯ ಕಡಿತವಾಗುವ ಅನುಮಾನವಿದ್ದಾಗ, ನಿಯಮಗಳ ಲೆಕ್ಕಾಚಾರ ಇರುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು. ಓಟದ ಪಂದ್ಯಗಳ ವೇಳೆ ಅಂತಿಮ ಗೆರೆ ಮುಟ್ಟುವ ಸಂದರ್ಭದಲ್ಲಿ ತಲೆಯನ್ನು ಮುಂದಕ್ಕೆ ಚಾಚಿ ನಿಯಮಗಳ ರೀತ್ಯಾ ಗೆದ್ದವರು ಅದೆಷ್ಟೋ ಮಂದಿ ಇದ್ದಾರೆ. ನಮ್ಮ ಸಾಮರ್ಥ್ಯಕ್ಕೆ ಸಮಾನರಾದ ನಾಲ್ಕಾರು ಮಂದಿ ನಮ್ಮ ಜೊತೆಗೆ ಸ್ಪರ್ಧಿಸುತ್ತಿದ್ದಾರೆ ಎಂದಾಗ ನಿಯಮಗಳ ಸಮ್ಯಕ್ ಅರಿವನ್ನು ಮೂಡಿಸಿಕೊಳ್ಳುವುದು ಗೆಲುವಿಗೆ ಹಾದಿಯಾಗಬಹುದು. ಇಂತಹ ಎಡೆಗಳಲ್ಲಿ ಕೇವಲ ನಿಯಮಗಳ ಪರಿಚಯ ಮಾತ್ರವೇ ಗೆಲುವು ಕಾಣಿಸುವುದಿಲ್ಲ. ಬದಲಿಗೆ, ಉಳಿದೆಲ್ಲ ಧನಾತ್ಮಕ ಅಂಶಗಳ ಜೊತೆಗೆ ನಿಯಮಗಳನ್ನೂ ಚೆನ್ನಾಗಿ ಅರಿತಿರುವ ಸಂಗತಿ ಕೆಲಸಕ್ಕೆ ಬರುತ್ತದೆ.



ನಿಯಮಗಳು ಆಟಗಳ ವಿಷಯದಲ್ಲಿ ಮಾತ್ರವೇ ಪ್ರಸ್ತುತ ಎಂದಲ್ಲ. ಜೀವನದ ಪ್ರತಿಯೊಂದು ಹಂತದಲ್ಲೂ ನಿಯಮಗಳು ಇರುತ್ತವೆ. ಬದುಕಿನ ನಿಯಮಗಳಲ್ಲಿ ಕೆಲವು ಲಿಖಿತ; ಹಲವು ಅಲಿಖಿತ; ಬಹುತೇಕವು ನಿರಂತರವಾಗಿ ಬದಲಾಗುತ್ತಿರುವ ನಿಯಮಗಳು. ಜೀವನದಲ್ಲಿ ಯಶಸ್ಸು ಕಂಡ ಅಧಿಕ ಮಂದಿ ತಮ್ಮ ವ್ಯವಹಾರದ ನಿಯಮಗಳನ್ನು ಅರಿತಿರುತ್ತಾರೆ. ತೀರಾ ಬಲಶಾಲಿಗಳು ಈ ನಿಯಮಗಳನ್ನು ಬದಲಿಸಬಲ್ಲರು ಕೂಡ. ಇದನ್ನೆಲ್ಲ ಮೀರಿ 'ಪೆಟ್ಟಿಗೆಯಿಂದ ಹೊರಗಿನ ಚಿಂತನೆ' ಮಾಡುವವರಿಗೂ ನಿಯಮಗಳ ಪರಿಚಯ ಚೆನ್ನಾಗಿ ಇರಬೇಕಾದದ್ದು ಮುಖ್ಯವಾಗುತ್ತದೆ. ಅರಿಯದ ನಿಯಮಗಳನ್ನು ಮೀರುವುದಾದರೂ ಹೇಗೆ?!

ಜೀವನದಲ್ಲಿ ಗೆಲುವು ಸಾಧಿಸುವ ವಿಷಯದಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಅವರ ಮಾತು ಪ್ರಸಿದ್ಧ: 'ಮೊದಲು ಆಟದ ನಿಯಮಗಳನ್ನು ಕಲಿಯಬೇಕು. ಅನಂತರ ಉಳಿದ ಎಲ್ಲರಿಗಿಂತಲೂ ಚೆನ್ನಾಗಿ ಆಡಬೇಕು'. ಶಾಲೆಯ ವಿಷಯಕ್ಕೆ ಬಂದಾಗ, ಆಯಾ ತರಗತಿಯ ಎಲ್ಲ ವಿದ್ಯಾರ್ಥಿಗಳೂ ಒಂದೇ ರೀತಿಯ ಸಮವಸ್ತ್ರವನ್ನು ತೊಟ್ಟು, ಒಂದೇ ಶಾಲೆಗೆ ಬಂದು, ಒಬ್ಬರೇ ಶಿಕ್ಷಕರ ಬಳಿ ಕಲಿಯುತ್ತಾರೆ. ಅವರೆಲ್ಲಿ ಬಹುತೇಕರು ಸರಿಸುಮಾರು ಒಂದೇ ರೀತಿಯ ಕೌಟುಂಬಿಕ ಹಿನ್ನೆಲೆಯವರು. ಮನೆಯಲ್ಲಿ ಅವರ ಪೋಷಕರೆಲ್ಲರೂ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ತಕ್ಕಮಟ್ಟಿಗೆ ನಿಗಾ ವಹಿಸುತ್ತಾರೆ. ಅಂದರೆ, ಒಂದೇ ಮೈದಾನದಲ್ಲಿ ಓಡುವ ಸ್ಪರ್ಧಿಗಳ ರೀತಿಯಲ್ಲಿ ಭೂಮಿಕೆ ಇರುತ್ತದೆ ಎಂದಾಯಿತು. ಹೀಗಿರುವಾಗ ಕೆಲವರು ಹೆಚ್ಚು ಸಫಲರಾಗುತ್ತಾರೆ; ಹಲವರು ಎಷ್ಟೇ ಪ್ರಯತ್ನಿಸಿದರೂ ಮೊದಲ ಸ್ಥಾನಕ್ಕೆ ಬರಲಾರದೆ ಉಳಿಯುತ್ತಾರೆ. ಇಂತಹ ಸಂದರ್ಭಗಳನ್ನು ಅಧ್ಯಯನ ಮಾಡಿದ ಸಂಶೋಧಕರಿಗೆ ಗೆಲ್ಲುವ ವಿದ್ಯಾರ್ಥಿಗಳ ಬಗ್ಗೆ ಕೆಲವೊಂದು ಮಹತ್ವದ ಮಾಹಿತಿ ದೊರೆತವು. ಸಫಲ ವಿದ್ಯಾರ್ಥಿಗಳು ಪರೀಕ್ಷೆಯ ನಿಯಮಗಳನ್ನು ಉಳಿದವರಿಗಿಂತಲೂ ಚೆನ್ನಾಗಿ ಅರಿತಿರುತ್ತಾರೆ. ತಮಗೆ ವಿಷಯ ತಿಳಿದಿದೆ ಎಂದ ಮಾತ್ರಕ್ಕೆ ಮೂರು ಅಂಕಗಳ ಪ್ರಶ್ನೆಗೆ ಮೂರು ಪುಟಗಳ ಉತ್ತರ ಬರೆಯಬಾರದು ಎಂಬ ಪರಿಜ್ಞಾನ ಅವರಿಗೆ ಇರುತ್ತದೆ. ಮೌಲ್ಯಮಾಪಕರ ಮನಃಸ್ಥಿತಿಯನ್ನು ಅವರು ಬಲ್ಲರು. 'ನಿಮಗೆ ಇಷ್ಟ ಬಂದ ಅನುಕ್ರಮದಲ್ಲಿ ಪ್ರಶ್ನೆಗಳಿಗೆ ಉತ್ತರಿಸಬಹುದು' ಎನ್ನುವ ಆಯ್ಕೆ ಇದ್ದರೂ ಅವರು ಪ್ರಶ್ನೆಪತ್ರಿಕೆಯ ನಿರ್ದಿಷ್ಟ ಕ್ರಮವನ್ನೇ ಅನುಸರಿಸುತ್ತಾರೆ. ಉತ್ತರದ ಯಾವ ಅಂಶಗಳನ್ನು ಪರೀಕ್ಷಕರು ಅಂಕಗಳಿಗೆ ಪರಿಗಣಿಸುತ್ತಾರೆಂಬ ಸ್ಪಷ್ಟತೆ ಅವರಿಗೆ ಇರುತ್ತದೆ. ಅಂತಹ ಅಂಶಗಳನ್ನು ತಪ್ಪದೇ ಸ್ಫುಟವಾಗಿ ಬರೆದು, ಮೌಲ್ಯಮಾಪಕರ ಗಮನ ಸೆಳೆಯುತ್ತಾರೆ. ಅಂದರೆ, ಒಟ್ಟಾರೆ ಅವರಿಗೆ ಪರೀಕ್ಷೆಯ, ಮೌಲ್ಯಮಾಪನದ ನಿಯಮಗಳ ಪರಿಚಯ ಚೆನ್ನಾಗಿ ಇರುತ್ತದೆ. ಆ ಅರಿವನ್ನು ಬಳಸಿಕೊಂಡು ಸ್ಪರ್ಧೆಯಲ್ಲಿ ಮೇಲೇರುತ್ತಾರೆ. ಈ ನಿಯಮಗಳ ಪರಿಚಯ ಇಲ್ಲದ ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ವಹಿಸಿದರೂ ಅಂಕಗಳ ವಿಷಯದಲ್ಲಿ ಹಿಂದುಳಿಯುವ ಸಾಧ್ಯತೆಗಳಿರುತ್ತವೆ.



ಇಂತಹ ಅರಿವು ಜೀವನದ ಪ್ರತಿಯೊಂದು ಹಂತದಲ್ಲೂ ನೆರವಿಗೆ ಬರುತ್ತದೆ. ಜೀವನಶಿಕ್ಷಣದ ತರಬೇತುದಾರರು 'ಸ್ಥಾನಪಲ್ಲಟ' ಎನ್ನುವ ಮಾದರಿಯನ್ನು ಬಳಸುತ್ತಾರೆ. ಉದಾಹರಣೆಗೆ, ನೀವು ಯಾವುದೋ ಒಂದು ನೌಕರಿಗೆ ಅರ್ಜಿ ಹಾಕಿದ್ದೀರಿ ಎಂದು ಭಾವಿಸಿ. ಅದಕ್ಕೆ ಸಿದ್ಧತೆಯಾಗಿ ನಿಮ್ಮ ಸಾಮಾನ್ಯ ಜ್ಞಾನವನ್ನು ಬೆಳೆಸಿಕೊಳ್ಳುವ ಪುಸ್ತಕ ಓದುತ್ತೀರಿ. ಸಂದರ್ಶಕರು ಏನು ಪ್ರಶ್ನೆಗಳನ್ನು ಕೇಳಬಹುದು ಎಂದು ತಲೆ ಕೆಡಿಸಿಕೊಳ್ಳುತ್ತೀರಿ. ಎಂತಹ ಬಟ್ಟೆ ತೊಟ್ಟು ಸಂದರ್ಶನಕ್ಕೆ ಹೋಗಬೇಕು ಎಂದು ಆಲೋಚಿಸುತ್ತೀರಿ. ಇವೆಲ್ಲದಕ್ಕಿಂತಲೂ ಪರಿಣಾಮಕಾರಿ ವಿಧಾನವೆಂದರೆ, ನಿಮ್ಮನ್ನು ನೀವೇ ಸಂದರ್ಶಕರೆಂದು ಭಾವಿಸುವುದು. ಈಗ ನೀವು ಓರ್ವ ಅಭ್ಯರ್ಥಿಯನ್ನು ಕೆಲಸಕ್ಕೆ ನಿಯಮಿಸಬೇಕಿದೆ. ಅಂತವರಿಂದ ನಿಮ್ಮ ನಿರೀಕ್ಷೆ ಏನು? ಇದಕ್ಕೆ ಉತ್ತರಿಸಬೇಕೆಂದರೆ ಆ ಕೆಲಸಕ್ಕೆ ಬೇಕಾದ ಅರ್ಹತೆಗೆ ಯಾವ ನಿಯಮಗಳು ಪಾಲನೆಯಾಗಬೇಕು ಎನ್ನುವುದನ್ನು ತಿಳಿದಿರಬೇಕು. ನೀವೀಗ ಸಂಸ್ಥೆಯ ಆಡಳಿತ ನಿರ್ವಾಹಕರಾಗಿ ಸೇರಬೇಕಿದೆ. ಒಂದು ವೇಳೆ ಅಂತಹ ನಿರ್ವಾಹಕರನ್ನು ನೀವೇ ಆಯ್ಕೆ ಮಾಡಬೇಕೆಂದರೆ ಮೊದಲು ಸಂಸ್ಥೆಯ ಆಡಳಿತ ವಿಧಾನಗಳ ಪರಿಚಯ ಇರಬೇಕು. ಯಾವ ಮಟ್ಟದಲ್ಲಿ ಲೋಪ-ದೋಷಗಳಿವೆ; ಯಾವ ಸ್ತರದಲ್ಲಿ ಉನ್ನತಿಯ ಅಗತ್ಯವಿದೆ; ಯಾವ ಹಂತದಲ್ಲಿ ಸಂಸ್ಥೆ ಮತ್ತಷ್ಟು ಬೆಳವಣಿಗೆಯನ್ನು ಬಯಸುತ್ತದೆ ಎನ್ನುವ ಸ್ಪಷ್ಟತೆ ಸಂದರ್ಶಕರಿಗೆ ಇರಬೇಕಾಗುತ್ತದೆ. ಈ ನಿಯಮಗಳನ್ನು ಸಮರ್ಪಕವಾಗಿ ತುಂಬುವ ಅಭ್ಯರ್ಥಿಗೆ ಕೆಲಸ ದೊರೆಯುವ ಸಾಧ್ಯತೆಗಳು ಬಲವಾಗುತ್ತವೆ. ಈಗ ನೀವೇ ಅಂತಹ ಅಭ್ಯರ್ಥಿ ಆಗಬೇಕೆಂದರೆ ಏನು ಮಾಡಬೇಕು? ಈ ರೀತಿ ಆಲೋಚಿಸಿದಾಗ ನಿಮ್ಮ ಸಿದ್ಧತೆಯ ಹಂದರವೇ ಬದಲಾಗಿ ಹೋಗುತ್ತದೆ. ಸಂದರ್ಶನದ ನಿಯಮಗಳ ಅರಿವು ನಿಮ್ಮ ಯಶಸ್ಸಿನ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ.

ಜೀವನದಲ್ಲಿ ಯಶಸ್ವಿಯಾದ ಬಹುತೇಕರು ತಮ್ಮ ಕಾರ್ಯಕ್ಷೇತ್ರದ ನಿಯಮಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುತ್ತಲೇ ಇರುತ್ತಾರೆ. ವಿಪರೀತ ವೇಗದಲ್ಲಿ ಮುನ್ನಡೆಯುತ್ತಿರುವ ಜಾಗತಿಕ ಪ್ರಗತಿ ನಿಯಮಗಳನ್ನು ನಿರಂತರವಾಗಿ ಬದಲಿಸುತ್ತಲೇ ಇರುತ್ತದೆ. ಇದನ್ನು ಅರಿತು, ಕ್ಲುಪ್ತವೇಳೆಗೆ ಸರಿಯಾದ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಸಾಗುವುದು ವೈಯಕ್ತಿಕವಾಗಿ ಮತ್ತು ಸಾಂಘಿಕವಾಗಿ ಬಹಳ ಮುಖ್ಯ. ನಿಯಮಗಳನ್ನು ಚೆನ್ನಾಗಿ ಅರಿತವರು ಮಾತ್ರವೇ ನಿಯಮಗಳನ್ನು ಬದಲಿಸಬಲ್ಲರು ಎಂಬ ಮಾತು ನಮ್ಮ ಕಾಲಘಟ್ಟದ ನಿಯಮಗಳಲ್ಲಿ ಒಂದು.

❖

ಜೆಡಿಎಸ್ ಬಲಪಡಿಸಲು 20 ನಾಯಕರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಬಲಪಡಿಸಿ, ಲೋಕಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಶಾಸಕ ಜಿ.ಟಿ. ದೇವೇಗೌಡ ಅಧ್ಯಕ್ಷತೆಯಲ್ಲಿ 20 ಪ್ರಮುಖ ನಾಯಕರ ಸಮಿತಿ ರಚಿಸಲಾಗಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ಪಕ್ಷದ ಮುಖಂಡರ ಸಭೆ ಸೋಮವಾರ ನಡೆಯಿತು.

ನಂತರ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಹೊಸ ಸಮಿತಿಗೆ ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರು ಸಂಚಾಲಕರಾಗಿದ್ದಾರೆ. ಆ.15ರ ನಂತರ ಸಮಿತಿಯ ಸದಸ್ಯರು ರಾಜ್ಯ ಪ್ರವಾಸ ಮಾಡಲಿದ್ದಾರೆ. ಎಲ್ಲ ಕ್ಷೇತ್ರಗಳಿಗೂ ಭೇಟಿ ನೀಡಿ ಪಕ್ಷಕ್ಕೆ ಚೈತನ್ಯ ತುಂಬಲಿದ್ದಾರೆ ಎಂದರು.

ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕಾದ ಸೋಲಿನಿಂದ ಎದೆಗುಂದದೆ ಸಂಘಟನೆಗೆ ಹೆಚ್ಚು ಗಮನ ನೀಡಬೇಕು. ತಳಮಟ್ಟದಿಂದ ಕಾರ್ಯಕರ್ತರನ್ನು ಸಂಘಟಿಸಬೇಕು ಎಂದು ದೇವೇಗೌಡರು ಸೂಚನೆ ನೀಡಿದ್ದಾರೆ. ಅವರ ಆಶಯದಂತೆ ಪಕ್ಷ ಸಂಘಟನೆ ಬಲಪಡಿಸಲು ನಿರ್ಧರಿಸಲಾಗಿದೆ ಎಂದರು.

'ನಮ್ಮ ಹೋರಾಟ ವಿಷಯಾಧಾರಿತವಾಗಿರಲಿದೆ. ಸಂಘಟಿತವಾಗಿ ಜನಪರ ಹೋರಾಟ ಮಾಡುತ್ತೇವೆ. ವಿವಿಧ ವಿಭಾಗಗಳಿಗೆ ಶೀಘ್ರ ಮುಖ್ಯಸ್ಥರನ್ನು ನೇಮಕ ಮಾಡಲಾಗುವುದು' ಎಂದರು.

ಜೆಡಿಎಸ್ ಮುಖಂಡರಾದ ಬಂಡೆಪ್ಪ ಕಾಶೆಂಪೂರ, ಎಚ್.ಕೆ.ಕುಮಾರಸ್ವಾಮಿ, ಆಲ್ಕೋಡ್ ಹನುಮಂತಪ್ಪ, ಸುರೇಶಗೌಡ, ಅನ್ನದಾನಿ, ನಿಸರ್ಗ ನಾರಾಯಣಸ್ವಾಮಿ, ಕೆ.ಎನ್. ತಿಪ್ಪೇಸ್ವಾಮಿ, ನೇಮಿರಾಜ್ ನಾಯ್ಕ, ಕೆ.ಎಂ. ಲಿಂಗೇಶ್ ಕುಮಾರ್, ಅಪ್ಪಾಜಿ ಗೌಡ, ವೀರಭದ್ರಯ್ಯ , ಮಾಗಡಿ ಮಂಜುನಾಥ್, ಸೂರಜ್ ನಾಯಕ್ ಸೋನಿ, ತಿಮ್ಮರಾಯಪ್ಪ, ದೊಡ್ಡನಗೌಡ ಪಾಟೀಲ್, ಅಶ್ವಿನ್ ಕುಮಾರ್, ಚೌಡರೆಡ್ಡಿ, ಶ್ರೀಕಂಠೇಗೌಡ ಉಪಸ್ಥಿತರಿದ್ದರು.

ಜಿ.ಪಂ, ತಾ.ಪಂಗಳಲ್ಲಿ ಹೆಚ್ಚುತ್ತಿರುವ ನೇಮಕಗಳ ಕಡಿವಾಣಕ್ಕೆ ತೀರ್ಮಾನ

ಅನುಕಂಪದ ನೇಮಕಾತಿ ಪ್ರಕ್ರಿಯೆಗೆ ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕಚೇರಿಗಳಲ್ಲಿ ಅನುಕಂಪದ ಆಧಾರಿತ ನೇಮಕಾತಿ ಪ್ರಸ್ತಾವನೆಗಳ ಬಗ್ಗೆ ಸರ್ಕಾರದ ಮುಂದಿನ ನಿರ್ದೇಶನದವರೆಗೆ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಈ ಸಂಬಂಧ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅವರು ಪತ್ರ ಬರೆದಿದ್ದಾರೆ.

ಅನುಕಂಪದ ನೇಮಕಾತಿ ಕುರಿತು ಬಾಕಿ ಇರುವ ಪ್ರಸ್ತಾವನೆಗಳ ಪೈಕಿ ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಅನುಕಂಪದ ನೇಮಕಾತಿ ಪ್ರಸ್ತಾವನೆಗಳನ್ನು ಜಿಲ್ಲಾ ಪಂಚಾಯಿತಿಗಳಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಹುದ್ದೆಗಳ ಎದುರು ನೇಮಕ ಮಾಡಲು ಈ ಹಿಂದೆ ಸೂಚಿಸಲಾಗಿತ್ತು.

ಇತ್ತೀಚಿನ ಬೆಳವಣಿಗೆಯ ಪ್ರಕಾರ, ಪ್ರಾದೇಶಿಕ ಆಯುಕ್ತರ ಕಚೇರಿಗಳಿಂದ ಸ್ವೀಕೃತವಾಗಿರುವ ಅನುಕಂಪದ ನೇಮಕಾತಿ ಪ್ರಸ್ತಾವನೆಗಳನ್ನು ಆಧರಿಸಿ, ಜಿಲ್ಲಾ ಪಂಚಾಯಿತಿಗಳು ಅನುಕಂಪದ ಆಧಾರದ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿ ಆದೇಶ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದೇ ರೀತಿ ಮುಂದುವರೆದರೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕಚೇರಿಗಳಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಎಲ್ಲ ಹುದ್ದೆಗಳನ್ನೂ ಅನುಕಂಪದ ಆಧಾರದ ಮೇಲೆ ಭರ್ತಿ ಮಾಡುವ ಸಾಧ್ಯತೆ ಇರುತ್ತದೆ. ಇದರ ಪರಿಣಾಮ ಕಚೇರಿಗಳ ಕಾರ್ಯ ನಿರ್ವಹಣೆ ಗುಣಮಟ್ಟವೂ ಕುಸಿಯುತ್ತದೆ. ಅಲ್ಲದೆ, ಜಿ.ಪಂ, ತಾ.ಪಂ.ಗಳಲ್ಲಿ ಕಾರ್ಯ ನಿರ್ವಹಿಸುವಾಗ ಮರಣ ಹೊಂದುವ ಸಿಬ್ಬಂದಿಯ ಕುಟುಂಬದ ಸದಸ್ಯರಿಗೆ ನೇಮಕಾತಿ ನೀಡಲು ಹುದ್ದೆಗಳು ಲಭ್ಯವಾಗದ ಪರಿಸ್ಥಿತಿ ಉದ್ಭವಿಸಲಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮೇಲ್ಕಂಡ ಎಲ್ಲ ಅಂಶಗಳನ್ನೂ ಗಮನಿಸಿ ಪ್ರಾದೇಶಿಕ ಆಯುಕ್ತರ ಕಚೇರಿಯಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಆಧರಿಸಿ ಮಾಡುವ ಅನುಕಂಪದ ನೇಮಕಾತಿಯನ್ನು ಒಂದು ನಿರ್ದಿಷ್ಟ ಪ್ರಮಾಣಕ್ಕೆ ಸೀಮಿತಗೊಳಿಸುವುದು ಅಗತ್ಯವೆಂದು ನಿರ್ಣಯಿಸಲಾಗಿದೆ. ಈ ಸಂಬಂಧ ಸರ್ಕಾರದಿಂದ ಮುಂದಿನ ನಿರ್ದೇಶನ ಬರುವವರೆಗೆ ಯಾವುದೇ ಕ್ರಮವಹಿಸಬಾರದು ಎಂದೂ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ನಟ ವಿಜಯ ರಾಘವೇಂದ್ರ ಪತ್ನಿ ಸ್ಪಂದನಾ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಟ ವಿಜಯ ರಾಘವೇಂದ್ರ ಅವರ ಪತ್ನಿ ಸ್ಪಂದನಾ (37) ಅವರು ಥಾಯ್ಲೆಂಡ್‌ನಲ್ಲಿ ನಿಧನರಾಗಿದ್ದಾರೆ. ರಕ್ತದ ಒತ್ತಡ ಕಡಿಮೆಯಾಗಿ ಹೃದಯ ಸ್ತಂಭನದಿಂದ ಅವರು ಮೃತಪಟ್ಟಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಂ ಪುತ್ರಿ, ನಿರ್ಮಾಪಕ ಎಸ್.ಎ.ಚಿನ್ನೇಗೌಡ ಅವರ ಸೊಸೆ ಸ್ಪಂದನಾ ವಾರದ ಹಿಂದೆ ತಮ್ಮ ಸೋದರ ಸಂಬಂಧಿಗಳ ಜೊತೆ ಪ್ರವಾಸಕ್ಕೆಂದು ಥಾಯ್ಲೆಂಡ್‌ಗೆ ತೆರಳಿದ್ದರು. ಭಾನುವಾರ ಮರಳಬೇಕಿತ್ತು. ಆದರೆ, ವಿಜಯ ರಾಘವೇಂದ್ರ ಚಿತ್ರೀಕರಣ ಮುಗಿಸಿಕೊಂಡ ನಂತರ ಭಾನುವಾರ ಥಾಯ್ಲೆಂಡ್‌ನಲ್ಲಿ ಅವರನ್ನು ಸೇರಿಕೊಂಡಿದ್ದರು. ರಾತ್ರಿ ಮಲಗಿದ್ದ ಸ್ಪಂದನಾ ನಿದ್ರಾವಸ್ಥೆಯಲ್ಲಿಯೇ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೋಮವಾರ ರಾತ್ರಿ ವಿಮಾನದಲ್ಲಿ ಸ್ಪಂದನಾ ಅವರ ಮೃತದೇಹವನ್ನು ಥಾಯ್ಲೆಂಡ್‌ನಿಂದ ತರಲಾಗುವುದು. ಬುಧವಾರ ಅಂತಿಮ ಸಂಸ್ಕಾರ ನೆರವೇರಲಿದೆ ಎಂದೂ ಕುಟುಂಬದವರು ಮಾಹಿತಿ ನೀಡಿದ್ದಾರೆ.

'ಪ್ರವಾಸಕ್ಕೆ ಹೋಗಿದ್ದವರ ಜೊತೆ ಸಮಯ ಕಳೆದು ಮಲಗಿದ್ದ ಅತ್ತಿಗೆ ಅದೇ ಸ್ಥಿತಿಯಲ್ಲಿ ನಿಧನರಾಗಿದ್ದಾರೆ. ಕಡಿಮೆ ರಕ್ತದೊತ್ತಡದಿಂದ ಹೀಗೆ ಆಗಿರಬಹುದು ಎಂದು ಭಾವಿಸಿದ್ದೇವೆ. ಅಲ್ಲಿಂದ ವಿಜಯ ರಾಘವೇಂದ್ರ ಬಂದ ಬಳಿಕ ಹೆಚ್ಚಿನ ವಿವರ ಸಿಗಲಿದೆ' ಎಂದು ನಟ ಶ್ರೀಮುರಳಿ ಪ್ರತಿಕ್ರಿಯಿಸಿದರು.

2007ರಲ್ಲಿ ವಿಜಯ ರಾಘವೇಂದ್ರ ಹಾಗೂ ಸ್ಪಂದನಾ ಮದುವೆ ಆಗಿತ್ತು. ಇವರಿಗೆ ಶೌರ್ಯ ಎಂಬ ಮಗನಿದ್ದಾನೆ.

'ಅಪೂರ್ವ' ಸಿನಿಮಾದಲ್ಲಿ ಸ್ಪಂದನಾ ನಟಿಸಿದ್ದರು.

ಕುಲಪತಿಗಳ ನೇಮಕ ಲೋಪ: ಖಾಸಗಿ ವಿ.ವಿಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳಿಗೆ ಅನುಗುಣವಾಗಿ ಕುಲಪತಿಗಳ ನೇಮಕ ಮಾಡಲಾಗಿದೆಯೇ ಎಂದು ವಿವರ ಕೇಳಿ ರಾಜ್ಯದ 25 ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಉನ್ನತ ಶಿಕ್ಷಣ ಇಲಾಖೆ ನೋಟಿಸ್ ಜಾರಿ ಮಾಡಿದೆ.

'ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ನೇಮಕಾತಿಯಲ್ಲಿ ಯುಜಿಸಿ ನಿಯಮಾವಳಿಗಳನ್ನು ಪಾಲಿಸುತ್ತಿಲ್ಲ. ಶೈಕ್ಷಣಿಕ ಅರ್ಹತೆ, ಸೇವಾ ಅನುಭವಗಳನ್ನು ಕಡೆಗಣಿಸಿ, ಆಡಳಿತ ಮಂಡಳಿಗಳ ಕುಟುಂಬದವರಿಗೆ ಹುದ್ದೆಗಳನ್ನು ನೀಡಲಾಗಿದೆ ಎಂಬ ದೂರುಗಳು ಬಂದಿದ್ದವು. ನಿಯಮಗಳಿಗೆ ವಿರುದ್ಧವಾಗಿ ಕುಲಪತಿಗಳನ್ನು ನೇಮಿಸಿದರೆ ತಕ್ಷಣ ಅವರನ್ನು ಬದಲಿಸಬೇಕು. ನಿಯಮಾನುಸಾರ ಅರ್ಹರಿಗೆ ಹುದ್ದೆ ನೀಡಬೇಕು. ಈ ಕುರಿತು ವರದಿ ಸಲ್ಲಿಸಬೇಕು' ಎಂದು ನೋಟಿಸ್‌ನಲ್ಲಿ ಸೂಚಿಸಲಾಗಿದೆ.

9ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಲ್ಲಿ ಜವಳಿ ಸಚಿವ ಶಿವಾನಂದ ಎಸ್‌. ಪಾಟೀಲ

ವಿದ್ಯುತ್ ರಿಯಾಯಿತಿ ಹೆಚ್ಚಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗ್ಗಗಳಿಗೆ 10 ಎಚ್‌ಪಿ ವರೆಗೆ ವಿದ್ಯುತ್ ರಿಯಾಯಿತಿ ನೀಡುತ್ತಿರುವುದನ್ನು 20 ಎಚ್‌ಪಿ ವರೆಗೆ ಹೆಚ್ಚಿಸಲು ಮುಖ್ಯಮಂತ್ರಿ ಜತೆಗೆ ಚರ್ಚಿಸಲಾಗಿದೆ ಎಂದು ಜವಳಿ ಸಚಿವ ಶಿವಾನಂದ ಎಸ್. ಪಾಟೀಲ ಹೇಳಿದರು.

9ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಲ್ಲಿ ಕೈಮಗ್ಗ ನೇಕಾರರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ನೇಕಾರರು ನೇಕಾರಿಕೆ ಬಿಟ್ಟು ಪರಾವಲಂಬಿಗಳಾಗಿ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇರುವ ನೇಕಾರಿಕೆಯನ್ನು ಉಳಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಎಲ್ಲ ನೇಕಾರರನ್ನು ಒಂದೇ ವೇದಿಕೆಯಡಿ ತರಬೇಕು ಎಂಬ ಕನಸು ಇದೆ. ಪಾರಂಪರಿಕ ನೇಕಾರಿಕೆಯ ಜೊತೆಗೆ ವೈಜ್ಞಾನಿಕ ನೇಕಾರಿಕೆಯನ್ನೂ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

'ನೇಕಾರರಿಗೆ ಗೌರವಧನ ₹ 5,000ಕ್ಕೆ ಏರಿದೆ. ಇನ್ನಷ್ಟು ಹೆಚ್ಚಳ ಮಾಡಲು ಪ್ರಯತ್ನಿಸಲಾಗುವುದು. ಬ್ಯಾಂಕ್ ಸಾಲಕ್ಕೆ ಸಂಬಂಧಿಸಿದಂತೆ ರೈತರಿಗೆ ಇರುವ ರಿಯಾಯಿತಿಯನ್ನು ನೇಕಾರರಿಗೂ ವಿಸ್ತರಿಸಬೇಕು ಎಂದು ಮುಖ್ಯಮಂತ್ರಿಯವರ ಮುಂದೆ ಪ್ರಸ್ತಾಪ ಇಟ್ಟಿದ್ದೇನೆ' ಎಂದರು.



ಬೆಂಗಳೂರಿನಲ್ಲಿ ಸೋಮವಾರ ಬಾಲಾಜಿ ಜಿ.ಎನ್, ಬಿ.ಟಿ. ತಿಪ್ಪೇಸ್ವಾಮಿ, ಸಂಜೀವ ಶೆಟ್ಟಿಗಾರ್, ಪದ್ಮಾ ವಿಠಲ ಗಂಜಿ, ಮಂಜುನಾಥ ಟಿ.ಎಂ. ಹಾಗೂ ಎಂ. ಜಯಕೀರ್ತಿ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಟಿ.ಎಚ್.ಎಂ. ಕುಮಾರ್, ರಿಚರ್ಡ್ ವಿನ್ಸೆಂಟ್ ಡಿಸೋಜ, ರವೀಂದ್ರ ಕಲಬುರ್ಗಿ, ಸಚಿವ ಶಿವಾನಂದ ಪಾಟೀಲ , ಬಿ.ಜಿ.ಗಣೇಶ್, ಶಶಿಧರ ಶೆಟ್ಟಿ ಇತರರು ಇದ್ದಾರೆ

ರೇಷ್ಮೆ ಸೀರೆ ನೇಕಾರಿಕೆಯಲ್ಲಿ ಪಾವಗಡ ಹೊಸಕೋಟೆಯ ಎಂ. ಜಯಕೀರ್ತಿ ಪ್ರಥಮ, ಚಿಂತಾಮಣಿ ತಿಮ್ಮಸಂದ್ರದ ಮಂಜುನಾಥ ಟಿ.ಎಂ. ದ್ವಿತೀಯ ಸ್ಥಾನ, ಹತ್ತಿ ನೇಕಾರಿಕೆಯಲ್ಲಿ ಇಳಕಲ್ ಪದ್ಮಾ ವಿಠಲ ಗಂಜಿ ಪ್ರಥಮ, ಕಿನ್ನಿಗೋಳಿ ಸಂಜೀವ ಶೆಟ್ಟಿಗಾರ್ ದ್ವಿತೀಯ, ಉಣ್ಣೆ ನೇಕಾರಿಕೆಯಲ್ಲಿ ಮೊಳಕಾಲ್ಮುರು ಕೊಂಡ್ಲಹಳ್ಳಿ ಬಿ.ಟಿ. ತಿಪ್ಪೇಸ್ವಾಮಿ ಪ್ರಥಮ ಸ್ಥಾನ ಪಡೆದರು.

ಬಾಳೆ, ದಾಸವಾಳಗಳ ನೂಲು, ಲಾವಂಚ ಬೇರಿನ ನೂಲುಗಳನ್ನು ಬಳಸಿ ಹಾಸು, ಹೊದಿಕೆಗಳನ್ನು ತಯಾರಿಸಿದ ಕನಕಪುರ ಸಾತನೂರಿನ ಬಾಲಾಜಿ ಜಿ.ಎನ್. ಅವರನ್ನು ಪ್ರೋತ್ಸಾಹಿಸಲಾಯಿತು.

ಚಿತ್ರದುರ್ಗ ಬಸವೇಶ್ವರ ಮಠದ ಹನುಮಂತರಾಯ ಸ್ವಾಮೀಜಿ, ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಮಂಡಳ ಅಧ್ಯಕ್ಷ ಬಿ.ಜೆ. ಗಣೇಶ್, ವ್ಯವಸ್ಥಾಪಕ ನಿರ್ದೇಶಕ ಆರ್. ಲಿಂಗರಾಜು, ಸರ್ಕಾರದ ಕಾರ್ಯದರ್ಶಿ ರಿಚರ್ಡ್ ವಿನ್ಸೆಂಟ್ ಡಿಸೋಜ, ಜವಳಿ ಅಭಿವೃದ್ಧಿ ಆಯುಕ್ತ ಟಿ.ಎಚ್.ಎಂ. ಕುಮಾರ್, ನೇಕಾರ ಸೇವಾ ಕೇಂದ್ರದ ಉಪನಿರ್ದೇಶಕ ನಾಚಿಮುತ್ತು, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಶಶಿಧರ ಶೆಟ್ಟಿ ಇದ್ದರು.

ವಿನಯ್ ಕುಲಕರ್ಣಿ ವೀರಶೈವ ಮಹಾಸಭಾ ಉಪಾಧ್ಯಕ್ಷ



ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಶಾಸಕ ವಿನಯ್ ಕುಲಕರ್ಣಿ ನೇಮಕವಾಗಿದ್ದಾರೆ.

ಉಪಾಧ್ಯಕ್ಷರಾಗಿದ್ದ ಧಾರವಾಡದ ಶಿವಾನಂದ ಆರ್. ಅಂಬರಗಟ್ಟಿ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ವಿನಯ್ ಅವರನ್ನು ನೇಮಿಸಲಾಗಿದೆ ಎಂದು ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಅಧಿಕಾರ ಸ್ವೀಕಾರ: ವೀರಶೈವ ಮಹಾಸಭಾದ ಕಚೇರಿಯಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ವಿನಯ್ ಕುಲಕರ್ಣಿ ಅಧಿಕಾರ ಸ್ವೀಕರಿಸಿದರು.

ಸಮಾರಂಭದಲ್ಲಿ ಮಾತನಾಡಿದ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, ಸಮಾಜ ಪ್ರಸ್ತುತ ಕವಲು ದಾರಿಯಲ್ಲಿದೆ. ಏಕತೆ ಇದ್ದರೆ ಶಕ್ತಿ ಬರುತ್ತದೆ. ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಉಪ ಪಂಗಡಗಳೂ ಒಗ್ಗೂಡಲು ಇದು ಸಕಾಲ ಎಂದರು.

ಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಮುಖಂಡರಾದ ರೇಣುಕಾಪ್ರಸನ್ನ, ಸಚ್ಚಿದಾನಂದ ಮೂರ್ತಿ, ಶರಣು ಮೋದಿ, ಪ್ರಭಾಕರ್ ಗೌಡ ಉಪಸ್ಥಿತರಿದ್ದರು.

ಜೋಗ ಸಹಿತ ವಿವಿಧೆಡೆ ಸಾರಿಗೆ ಪ್ಯಾಕೇಜ್ ಟೂರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಗ ಜಲಪಾತ, ಭರಚುಕ್ಕಿ–ಗಗನಚುಕ್ಕಿಗಳಿಗೆ ಕೆಎಸ್‌ಆರ್‌ಟಿಸಿಯು ವಾರಾಂತ್ಯದ ಪ್ಯಾಕೇಜ್ ಟೂರ್ ಯೋಜನೆ ರೂಪಿಸಿದೆ.

ಜೋಗಕ್ಕೆ: ಶುಕ್ರವಾರ ರಾತ್ರಿ 9.30ಕ್ಕೆ ಬೆಂಗಳೂರಿನಿಂದ ಹೊರಟು ಶನಿವಾರ ಬೆಳಿಗ್ಗೆ 5ಕ್ಕೆ ಸಾಗರಕ್ಕೆ ತಲುಪಲಿದೆ. ಅಲ್ಲಿ ವಿಶ್ರಾಂತಿ, ಉಪಾಹಾರ ಮುಗಿಸಿ ವರದಹಳ್ಳಿಗೆ, ಅಲ್ಲಿಂದ ವರದಮೂಲ, ಇಕ್ಕೇರಿ, ಕೆಳದಿ ಸುತ್ತಾಡಿಕೊಂಡು ಮತ್ತೆ ಮಧ್ಯಾಹ್ನದ ಊಟಕ್ಕೆ ಸಾಗರಕ್ಕೆ ತಲುಪಲಿದೆ. ಅಲ್ಲಿಂದ ಜೋಗಕ್ಕೆ ತೆರಳಿ ಸಂಜೆ 7ಕ್ಕೆ ಮತ್ತೆ ಸಾಗರಕ್ಕೆ ಬಂದು ಶಾಪಿಂಗ್, ಊಟ ಮುಗಿಸಿ ರಾತ್ರಿ 10ಕ್ಕೆ ಬೆಂಗಳೂರಿಗೆ ಹೊರಡಲಿದೆ. ಮರುದಿನ ಬೆಳಿಗ್ಗೆ 5ಕ್ಕೆ ಬೆಂಗಳೂರಿಗೆ ತಲುಪಲಿದೆ. ಮೊದಲ ಪ್ರವಾಸ ಆ.11ರಂದು ಆರಂಭಗೊಳ್ಳಲಿದೆ. ವಯಸ್ಕರಿಗೆ ₹ 2,500, ಮಕ್ಕಳಿಗೆ



₹ 2,300 ಪ್ರಯಾಣದರ ನಿಗದಿ ಮಾಡಲಾಗಿದೆ.

ಗಗನಚುಕ್ಕಿ ಕಡೆಗೆ: ಬೆಂಗಳೂರಿನಿಂದ ಬೆಳಿಗ್ಗೆ 6.30ಕ್ಕೆ ಹೊರಟು ಮದ್ದೂರಿನಲ್ಲಿ ಉಪಾಹಾರಕ್ಕೆ ನಿಲ್ಲಿಸಲಾಗುತ್ತದೆ. ಅಲ್ಲಿಂದ ಸೋಮನಾಥಪುರಕ್ಕೆ ತೆರಳಿ, ತಲಕಾಡು ತಲುಪಲಿದೆ. ಅಲ್ಲಿ ಮಧ್ಯಾಹ್ನದ ಊಟದ ವಿರಾಮ ಇರಲಿದೆ. ಮುಂದೆ ಮಧ್ಯರಂಗ, ಭರಚುಕ್ಕಿ, ಗಗನಚುಕ್ಕಿ ವೀಕ್ಷಿಸಿ ಸಂಜೆ 6.15ಕ್ಕೆ ಹೊರಟು ರಾತ್ರಿ 9ಕ್ಕೆ ಬೆಂಗಳೂರು ತಲುಪಲಿದೆ.

ಊಟ– ಉಪಾಹಾರ ಹೊರತುಪಡಿಸಿ ವಯಸ್ಕರಿಗೆ ₹ 450, ಮಕ್ಕಳಿಗೆ ₹ 300 ದರ ಇರಲಿದೆ. ಮಾಹಿತಿಗೆ ಮೊಬೈಲ್ ಸಂಖ್ಯೆ 7760990287, 7760990988 ಸಂಪರ್ಕಿಸಬಹುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಬೊಮ್ಮಾಯಿಗೆ ಸಿಗದ ವರಿಷ್ಠರು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರ ಆಯ್ಕೆ ಪ್ರಕ್ರಿಯೆ ವಿಳಂಬವಾಗುತ್ತಿರುವ ನಡುವೆಯೇ, ಬಿಜೆಪಿ ವರಿಷ್ಠರನ್ನು ಭೇಟಿ ಮಾಡಲು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಸೋಮವಾರ ದಿನವಿಡೀ ಪ್ರಯತ್ನ ಪಟ್ಟರೂ ಯಶಸ್ಸು ಸಿಗಲಿಲ್ಲ.

ವಿಪಕ್ಷ ನಾಯಕರ ಹೆಸರನ್ನು ಅಂತಿಮಗೊಳಿಸಲು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬೊಮ್ಮಾಯಿ ಅವರನ್ನು ಮಾತುಕತೆಗೆ ಆಹ್ವಾನಿಸಿದ್ದಾರೆ ಎಂದು ಅವರ ಆಪ್ತ ಮೂಲಗಳು ಹೇಳಿದ್ದವು. ಭಾನುವಾರ ರಾತ್ರಿಯೇ ದೆಹಲಿಗೆ ಬಂದಿದ್ದ ಬೊಮ್ಮಾಯಿ, ಸೋಮವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಸಂಸತ್ ಭವನದಲ್ಲಿ ವರಿಷ್ಠರ ಭೇಟಿಗೆ ಕಸರತ್ತು ನಡೆಸಿದರು. ಆದರೆ, ರಾಷ್ಟ್ರೀಯ ನಾಯಕರ ಭೇಟಿ ಲಭ್ಯವಾಗಲಿಲ್ಲ. ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಬೊಮ್ಮಾಯಿ, 'ನನಗೆ ವರಿಷ್ಠರು ಬುಲಾವ್ ನೀಡಿರಲಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸಂಸತ್ ಅಧಿವೇಶನದ ಸಮಯದಲ್ಲಿ ದೆಹಲಿಗೆ ಬನ್ನಿ ಎಂದು ರಾಜ್ಯದ ಸಂಸದರು ಆಹ್ವಾನಿಸಿದ್ದರು. ನನಗೂ ಅವರನ್ನು ಭೇಟಿಯಾಗಬೇಕಿತ್ತು. ಹಾಗಾಗಿ, ಇಲ್ಲಿಗೆ ಬಂದು ಅವರೊಂದಿಗೆ ಮಾತುಕತೆ ನಡೆಸಿದೆ' ಎಂದರು.

'ರಾಜ್ಯಸಭೆಯಲ್ಲಿ ದೆಹಲಿ ಸೇವಾ ವಿಷಯಗಳ ಮೇಲಿನ ನಿಯಂತ್ರಣ ಕುರಿತ ಮಸೂದೆಯ ಚರ್ಚೆ ನಡೆಯುತ್ತಿದ್ದು, ಅಮಿತ್ ಶಾ ಅಲ್ಲಿ ಬ್ಯುಸಿಯಾಗಿದ್ದಾರೆ. ಹಾಗಾಗಿ, ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ನಡ್ಡಾ ಅವರನ್ನು ಮಂಗಳವಾರ ಭೇಟಿ ಮಾಡುವ ಉದ್ದೇಶವಿದ್ದು, ಕಾಲಾವಕಾಶ ಕೇಳಿದ್ದೇನೆ' ಎಂದು ಅವರು ಹೇಳಿದರು. ಶಾ ಅವರು ಸಮಯಾವಕಾಶ ಕೊಟ್ಟರೆ ಭೇಟಿಯಾಗುತ್ತೇನೆ ಎಂದರು.

ವಿರೋಧ ಪಕ್ಷದ ನಾಯಕರ ಆಯ್ಕೆ ವಿಳಂಬದ ಕುರಿತು ಪ್ರತಿಕ್ರಿಯಿಸಿದ ಅವರು, 'ಈಗ ಸಂಸತ್ ಅಧಿವೇಶನ ನಡೆಯುತ್ತಿದೆ. ಐದು ರಾಜ್ಯಗಳ ಚುನಾವಣೆಗೆ ಸಿದ್ಧತೆ ನಡೆಸಬೇಕಿದೆ. ನಮ್ಮ ರಾಷ್ಟ್ರೀಯ ನಾಯಕರು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ರಾಜ್ಯದ ಬಗ್ಗೆ ಗಮನ ಹರಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧದ ಲಂಚ ಆರೋಪದ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ರಾಜಭವನ ವಿವರಣೆ ಕೇಳಿರುವ ಕುರಿತು ನನಗೆ ಹೆಚ್ಚಿನ ಮಾಹಿತಿ ಇಲ್ಲ. ಸಾಮಾನ್ಯವಾಗಿ ಯಾವುದೇ ದೂರುಗಳು ಬಂದಾಗ ರಾಜಭವನದ ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸುತ್ತಾರೆ. ಇದೊಂದು ಸಹಜ ಪ್ರಕ್ರಿಯೆ. ಅದಕ್ಕೆ ಸರ್ಕಾರ ಸ್ಪಷ್ಟನೆ ನೀಡಬೇಕು. ಲಂಚದ ಬಗ್ಗೆ ಪತ್ರ ಬರೆದಿದ್ದರೆ ಅದೊಂದು ಗಂಭೀರ ವಿಚಾರ. ಆ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ದೇವೇಗೌಡರಿಗೆ ಅನಾರೋಗ್ಯ, ಕಲಾಪಕ್ಕೆ ಗೈರು

ಬೆಂಗಳೂರು: ಅನಾರೋಗ್ಯದಿಂದ ಸೋಮವಾರ ರಾಜ್ಯಸಭೆ ಕಲಾಪದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ ಎಂದು ರಾಜ್ಯಸಭೆ ಸದಸ್ಯರೂ ಆಗಿರುವ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬೆಂಗಳೂರಿನಲ್ಲಿ ಜೆಡಿಎಸ್ ಪಕ್ಷದ ಮಹತ್ವದ ಸಭೆಯನ್ನು ಆಯೋಜಿಸಲಾಗಿತ್ತು. ಸೊಂಟದ ನೋವಿನ ಕಾರಣ ಬಹಳ ಹೊತ್ತು ಕೂರಲು ತಮ್ಮಿಂದ ಆಗಲಿಲ್ಲ. ಹತ್ತು ನಿಮಿಷವಷ್ಟೇ ಆ ಸಭೆಗೆ ಹಾಜರಾಗಿ ನಂತರ ವೈದ್ಯರಲ್ಲಿ ಚಿಕಿತ್ಸೆ ಪಡೆದು ಮನೆಗೆ ವಾಪಸಾಗಿ ವಿಶ್ರಾಂತಿ ಪಡೆಯುತ್ತಿರುವುದಾಗಿ ಹೇಳಿದ್ದಾರೆ. ನೋವು ಕಡಿಮೆಯಾದರೆ ಬುಧವಾರ ಕಲಾಪದಲ್ಲಿ ಭಾಗಿಯಾಗುವುದಾಗಿ ಅವರು ತಿಳಿಸಿದ್ದು, ಈ ಮಧ್ಯೆ ಮನೆಯಲ್ಲೇ ಕುಳಿತು ಕಲಾಪ ವೀಕ್ಷಿಸಿದರು.

'ಗುಜರಾತ್‌ನಲ್ಲಿ ಎಎಪಿ–ಕಾಂಗ್ರೆಸ್ ಮೈತ್ರಿ'

ಅಹಮದಾಬಾದ್ (ಪಿಟಿಐ): 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗುಜರಾತ್‌ನಲ್ಲಿ ಆಮ್ ಆದ್ಮಿ ಪಕ್ಷ ಮತ್ತು ಕಾಂಗ್ರೆಸ್ ಒಟ್ಟಾಗಿ ಸ್ಪರ್ಧಿಸಲಿವೆ' ಎಂದು ಗುಜರಾತ್ ಎಎಪಿ ಘಟಕದ ಅಧ್ಯಕ್ಷ ಇಸುದಾನ್ ಗಧ್ವಿ ಸೋಮವಾರ ತಿಳಿಸಿದರು.

ಚುನಾವಣಾ ನೀತಿಸಂಹಿತೆ ಉಲ್ಲಂಘನೆ ಆರೋಪ

ನಡ್ಡಾ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆ ವೇಳೆ ವಿಜಯನಗರ ಜಿಲ್ಲೆ ಹರಪನಹಳ್ಳಿಯಲ್ಲಿ ಪಕ್ಷದ ಪ್ರಚಾರದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, 'ಮತದಾರರಿಗೆ ಆಮಿಷ ಒಡ್ಡುವ ರೀತಿಯಲ್ಲಿ ಭಾಷಣ ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಿಸಲಾಗಿದ್ದ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧ ಹರಪನಹಳ್ಳಿ ಠಾಣಾ ಪೊಲೀಸರು ದಾಖಲಿಸಿರುವ ಪ್ರಕರಣ ಹಾಗೂ ತನಿಖೆಯನ್ನು ರದ್ದುಪಡಿಸಬೇಕು' ಎಂದು ಕೋರಿ ನಡ್ಡಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಧಾರವಾಡ ಹೈಕೋರ್ಟ್ ಪೀಠದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ. ನಡ್ಡಾ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ.

ಪ್ರಕರಣವೇನು?: 2023ರ ಮೇ 7ರಂದು ವಿಜಯನಗರ ಜಿಲ್ಲೆಯ ಹರಪನಹಳ್ಳಿಯ ಐ.ಬಿ. ವೃತ್ತದಲ್ಲಿ ಬಿಜೆಪಿ ಪ್ರಚಾರ ಸಭೆ ಆಯೋಜಿಸಿತ್ತು. ಈ ಸಮಯದಲ್ಲಿ ಜೆ.ಪಿ. ನಡ್ಡಾ ಭಾಷಣ ಮಾಡಿದ್ದರು.

'ಚುನಾವಣೆಯಲ್ಲಿ ಬಿಜೆಪಿ ಸೋತರೆ ಮತದಾರರು ಕೇಂದ್ರ ಸರ್ಕಾರದಿಂದ ಸಿಗುವ ಯೋಜನೆಗಳಿಂದ ವಂಚಿತರಾಗುತ್ತಾರೆ. ಡಬಲ್ ಎಂಜಿನ್ ಸರ್ಕಾರ ಅಧಿಕಾರಕ್ಕೆ ಬಂದರೆ ಕೇಂದ್ರದ ಯೋಜನೆಗಳೆಲ್ಲಾ ರಾಜ್ಯದಲ್ಲಿ ಮುಂದುವರಿಯುತ್ತವೆ. ಒಂದು ವೇಳೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕಿಸಾನ್ ಸಮ್ಮಾನ್ ನಿಧಿ, ಪ್ರಧಾನ ಮಂತ್ರಿ ಆವಾಸ್ ಸೇರಿದಂತೆ ಕೇಂದ್ರದ ಹಲವು ಯೋಜನೆಗಳು ಬಂದ್ ಆಗಲಿವೆ. ನಿಮಗೆ ಅಭಿವೃದ್ಧಿ ಬೇಕಾದರೆ ಬಿಜೆಪಿಯನ್ನು ಗೆಲ್ಲಿಸಬೇಕು' ಎಂದು ಭಾಷಣದಲ್ಲಿ ವಿವರಿಸಿದ್ದರು.

ಲಂಚ: ರಾಜಭವನ ಪತ್ರ

ಒಂದನೇ ಪುಟದಿಂದ

ರಾಜಭವನದಿಂದ ಇದೇ 1ರಂದು ಮುಖ್ಯಕಾರ್ಯದರ್ಶಿಯವರಿಗೆ ಪತ್ರ ರವಾನೆಯಾಗಿದ್ದು, ಮುಖ್ಯಕಾರ್ಯದರ್ಶಿ ವಂದಿತಾ ಶರ್ಮಾ ಅವರು ಇದೇ 3ರಂದು ಪತ್ರವನ್ನು ಸ್ವೀಕರಿಸಿ, ಸಹಿ ಮಾಡಿದ್ದಾರೆ. ರಾಜಭವನಕ್ಕೆ ಕೃಷಿ ಅಧಿಕಾರಿಗಳು ಪತ್ರ ಬರೆದಿರುವ ವಿಚಾರ ಗೊತ್ತಾಗುತ್ತಿದ್ದಂತೆ ಸಚಿವ ಚಲುವರಾಯಸ್ವಾಮಿ ಅವರು ಪತ್ರ ಬರೆದ ಅಧಿಕಾರಿಗಳ ಮೇಲೆ ಒತ್ತಡ ಹೇರಿ, 'ತಾವು ಅಂತಹ ಪತ್ರ ಬರೆದಿಲ್ಲ' ಎಂದು ಮುಚ್ಚಳಿಕೆ ಪತ್ರಗಳನ್ನು ಬರೆಸಿಕೊಂಡಿದ್ದಾರೆ ಎಂಬ ಸುದ್ದಿಯೂ ಹರಡಿದೆ.

ವರ್ಗಾವಣೆ ದರ ಪಟ್ಟಿ ಆರೋಪ: ಕಳೆದ ವಿಧಾನಸಭಾ ಅಧಿವೇಶನದ ವೇಳೆ ಎಚ್.ಡಿ.ಕುಮಾರಸ್ವಾಮಿ ಅವರು, ಕೃಷಿ ಇಲಾಖೆಯಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ ಮತ್ತು ಪ್ರತಿಯೊಂದು ಹುದ್ದೆಗೂ ದರ ಪಟ್ಟಿ ನಿಗದಿ ಮಾಡಲಾಗಿದೆ ಎಂದು ಆರೋಪಿಸಿದ್ದರು. ಅದರ ಬೆನ್ನಲ್ಲೇ ದರ ಪಟ್ಟಿಯೂ ಸೋರಿಕೆ (ಎಕ್ಸೆಲ್‌ಶೀಟ್) ಆಗಿ ಮಾಧ್ಯಮಗಳಲ್ಲಿ ಪ್ರಕಟಗೊಂಡಿತ್ತು. ಇದು ಕಾಂಗ್ರೆಸ್ ಮತ್ತು ಜೆಡಿಎಸ್ ಮಧ್ಯೆ ಭಾರಿ ವಾಗ್ವಾದಕ್ಕೆ ಕಾರಣವಾಗಿತ್ತು.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಜಗದೀಶ್ ಆತ್ಮಹತ್ಯೆ ಪ್ರಯತ್ನದ ವಿಚಾರವಾಗಿ ಚಲುವರಾಯಸ್ವಾಮಿ ಮತ್ತು ಕುಮಾರಸ್ವಾಮಿ ಮಧ್ಯೆ ವಿಧಾನ ಸಭೆಯಲ್ಲಿ ಜಟಾಪಟಿ ನಡೆದಿತ್ತು. ಸಚಿವರ ಒತ್ತಾಸೆಯಿಂದಲೇ ವರ್ಗಾವಣೆ ಮಾಡಲಾಗಿದೆ ಎಂದು ಆರೋಪಿಸಿ ಜಗದೀಶ್ ಆತ್ಮಹತ್ಯೆಗೆ ಯತ್ನಿಸಿದ್ದ ಎಂದು ಕುಮಾರಸ್ವಾಮಿ ಆರೋಪಿಸಿದ್ದರು.

ಸುಧಾ ಓದಿರಿ

ಎಂಎಸ್‌ಐಎಲ್: ಹೈಟೆಕ್ ಮಳಿಗೆ

ಒಂದನೇ ಪುಟದಿಂದ...

ಮದ್ಯ ಮಾರಾಟದಲ್ಲಿ ಎಂಆರ್‌ಪಿ (ಗರಿಷ್ಠ ಚಿಲ್ಲರೆ ಬೆಲೆ) ಉಲ್ಲಂಘನೆ ಪ್ರಕರಣಗಳನ್ನು ನಿಯಂತ್ರಿಸಲು ಹಾಗೂ ಗ್ರಾಹಕರಿಗೆ ಗುಣಮಟ್ಟದ ಮದ್ಯ ಪೂರೈಸಲು ರಾಜ್ಯ ಸರ್ಕಾರ 2009ರಲ್ಲಿ 463 ಚಿಲ್ಲರೆ ಮದ್ಯದಂಗಡಿಗಳನ್ನು (ಸಿಎಲ್ 11–ಸಿ) ಎಂಎಸ್‌ಐಎಲ್‌ಗೆ ಹಂಚಿಕೆ ಮಾಡಿತ್ತು. ಅದು ಯಶಸ್ಸು ಕಂಡಿದ್ದರಿಂದಾಗಿ 2016ರಲ್ಲಿ ಹೆಚ್ಚುವರಿಯಾಗಿ 900 ಮಳಿಗೆಗಳನ್ನು ಮಂಜೂರು ಮಾಡಲಾಗಿದೆ. ಒಟ್ಟು 1,363 ಚಿಲ್ಲರೆ ಮದ್ಯದ ಮಳಿಗೆ ತೆರೆಯಲು ಪರವಾನಗಿ ಇದ್ದರೂ ಸದ್ಯ 1,023 ಮಾತ್ರ ಕಾರ್ಯನಿರ್ವಹಿಸುತ್ತಿವೆ. ಎಂಎಸ್‌ಐಎಲ್ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ನಾಲ್ಕು ಮದ್ಯದ ಮಳಿಗೆ ತೆರೆಯುವ ಗುರಿ ಹೊಂದಿದೆ. ಆದರೆ, ಅನೇಕ ಕ್ಷೇತ್ರಗಳಲ್ಲಿ ಸ್ಥಳೀಯರ ವಿರೋಧದಿಂದ ಇದು ಸಾಧ್ಯವಾಗಿಲ್ಲ.

ಸದ್ಯ ಬಡವರು ಮತ್ತು ಮಧ್ಯಮ ವರ್ಗದವರನ್ನು ಗುರಿಯಾಗಿಟ್ಟು ಎಂಎಸ್‌ಐಎಲ್ ಮದ್ಯ ಮಾರುತ್ತಿದೆ. ಈಗ ಶ್ರೀಮಂತರನ್ನು ಆಕರ್ಷಿಸಲು ಮುಂದಾಗಿದೆ. ಎಂಎಸ್‌ಐಎಲ್ ಮದ್ಯ ಮಾರಾಟದಲ್ಲಿ ₹2,400 ಕೋಟಿಯಿಂದ ₹2,700 ಕೋಟಿ ವಾರ್ಷಿಕ ವಹಿವಾಟು ನಡೆಸುತ್ತಿದೆ. ಹೈಟೆಕ್ ಮದ್ಯದಂಗಡಿ ಮೂಲಕ ಇನ್ನೂ ₹200 ಕೋಟಿ ಹೆಚ್ಚು ವಹಿವಾಟಿನ ಗುರಿ ಇಟ್ಟುಕೊಂಡಿದೆ.

ಹೆಸರು ಸೂಚಿಸಬಹುದು

'ಉದ್ದೇಶಿತ ಹೈಟೆಕ್ ಮದ್ಯದಂಗಡಿಗಳಿಗೆ ಗಮನ ಸೆಳೆಯುವಂಥ ಹೆಸರು ಇಡಬೇಕು ಎನ್ನುವ ಯೋಚನೆ ಕೂಡ ಇದೆ. ಆಕರ್ಷಕ ಹೆಸರು ಸೂಚಿಸುವ ಮೂಲಕ ಇದಕ್ಕೆ ಸಾರ್ವಜನಿಕರು ಕೂಡ ನೆರವಾಗಬಹುದು. ಆಸಕ್ತರು ಹೆಸರುಗಳನ್ನು ಇ–ಮೇಲ್ (msil.liqour@msilonline.com) ಮಾಡಬಹುದು' ಎಂದು ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ತಿಳಿಸಿದರು.

ಮುನಿಸು ತಣಿಸಲು ಸಿ.ಎಂ ಯತ್ನ

ಒಂದನೇ ಪುಟದಿಂದ...

ತುಮಕೂರು ಜಿಲ್ಲೆಯ ಸಭೆಯ ಬಳಿಕ ಮಾತನಾಡಿದ ಕುಣಿಗಲ್ ಶಾಸಕ ಡಾ.ಎಚ್.ಡಿ. ರಂಗನಾಥ್, 'ನಮ್ಮ ತಾಲ್ಲೂಕುಗಳ ಸಮಸ್ಯೆ, ಅನುದಾನ, ಚುನಾವಣಾ ಭರವಸೆ ಮತ್ತಿತರ ವಿಚಾರಗಳನ್ನು ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದೇವೆ. ಉಸ್ತುವಾರಿ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಚಿವರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಕೆಲವು ಸಲಹೆಗಳನ್ನು ನೀಡಿದ್ದಾರೆ' ಎಂದರು.

ಅನುದಾನ ಕೊರತೆ ಇಲ್ಲ: 'ಶಾಸಕರು ಅಹವಾಲುಗಳನ್ನು ಹೇಳಿ ಕೊಂಡಿದ್ದಾರೆ. ಕ್ಷೇತ್ರಗಳ ಅಭಿವೃದ್ಧಿ ವಿಚಾರಕ್ಕೆ ನಮ್ಮ ಆದ್ಯತೆ. ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಲಿದ್ದೇವೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

'ಕಳೆದ ಸರ್ಕಾರದ ಅವಧಿಯಲ್ಲಿ ಟೆಂಡರ್ ಕರೆಯದೆ ಕಾಮಗಾರಿ ಮಾಡಲಾಗಿದೆ. ಈಗ ಗುತ್ತಿಗೆದಾರರು ಕಾಮಗಾರಿಯ ಬಿಲ್ ಮೊತ್ತ ಬಿಡುಗಡೆ ಮಾಡಲು ಕೋರಿ ಮನೆಗೆ ಬರುತ್ತಿದ್ದಾರೆ. ಈ ವಿಷಯವನ್ನೂ ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದೇವೆ. ಪರಿಶೀಲಿಸುವ ಭರವಸೆ ನೀಡಿದ್ದಾರೆ' ಎಂದು ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಹೇಳಿದ್ದಾರೆ.

ಕ್ಷೇತ್ರವಾರು ಸಂಚಾರಕ್ಕೆ ಸಲಹೆ: 'ಸಚಿವರು ಜಿಲ್ಲೆಗೆ ಭೇಟಿ ನೀಡುವ ವೇಳೆ ಜಿಲ್ಲಾ ಕೇಂದ್ರದಲ್ಲೇ ಉಳಿಯಬಾರದು. ಕ್ಷೇತ್ರವಾರು ಸಂಚಾರ ನಡೆಸಿ ಸಮಸ್ಯೆ ಆಲಿಸಬೇಕು' ಎಂದು ಯಾದಗಿರಿ ಶಾಸಕರು ಸಲಹೆ ನೀಡಿದ್ದಾರೆ. 'ತಾಲ್ಲೂಕು ಕೆಡಿಪಿ ಸಭೆಯಲ್ಲಿ ಉಸ್ತುವಾರಿ ಸಚಿವರು ಪಾಲ್ಗೊಳ್ಳುವಂತೆ ಚರ್ಚೆಯಾಗಿದೆ. ಸಚಿವರು ಜಿಲ್ಲೆಗೆ ಭೇಟಿ ನೀಡಿದರೆ ಕ್ಷೇತ್ರಗಳಲ್ಲಿ ಸಂಚರಿಸುವಂತೆ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ' ಎಂದು ಯಾದಗಿರಿ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಹೇಳಿದರು.

'ಅಗತ್ಯ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಕ್ಷೇತ್ರದ ಸಮಸ್ಯೆಗಳನ್ನು ಉಸ್ತುವಾರಿ ಸಚಿವರು ಆಲಿಸಬೇಕು. ಶಾಸಕರ ಜೊತೆ ಸಮನ್ವಯ ಸಾಧಿಸಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ' ಎಂದು ಮೊಳಕಾಲ್ಮುರು ಶಾಸಕ ಎನ್.ವೈ. ಗೋಪಾಲಕೃಷ್ಣ ತಿಳಿಸಿದರು.

ಕ್ಷೇತದ ಅಭಿವೃದ್ಧಿ ಚರ್ಚೆ: 'ಜಿಲ್ಲೆಯ ಪಕ್ಷದ ಐದೂ ಜನ ಶಾಸಕರು ಒಗ್ಗಟ್ಟಾಗಿದ್ದೇವೆ. ನಮ್ಮ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ಚರ್ಚೆ ನಡೆಸಿದ್ದೇವೆ. ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿ ಕುರಿತು ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಚಿತ್ರದುರ್ಗ ಉಸ್ತುವಾರಿ ಸಚಿವ ಡಿ. ಸುಧಾಕರ್ ತಿಳಿಸಿದರು.

ವರ್ಗಾವಣೆ ಶಿಫಾರಸು, ಅನುದಾನ ಹಂಚಿಕೆ ವಿಚಾರದಲ್ಲಿ ಪತ್ರ ಬರೆದು ಕೆಲವು ಶಾಸಕರು ಅಪಸ್ವರ ಎತ್ತಿದ ಬೆನ್ನಲ್ಲೆ ನಡೆದಿದ್ದ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ (ಸಿಎಲ್‌ಪಿ) ಮಾತುಕೊಟ್ಟಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾವಾರು ಶಾಸಕರ ಸಭೆ ಕರೆದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಪ್ರೀತಿ, ಸ್ನೇಹ ಅಥವಾ ಗೌರವವು ಯಾವುದಾದರೂ ವಿಷಯದ ಬಗ್ಗೆ ಇರುವ ಸಮಾನ ಧೋರಣೆಯ ದ್ವೇಷ ಭಾವನೆಯಷ್ಟು ಚೆನ್ನಾಗಿ ಜನರನ್ನು ಒಗ್ಗೂಡಿಸುವುದಿಲ್ಲ.

–ಆ್ಯಂಟನ್ ಚೆಕೋವ್

ಚೆಸ್ ಬೆಳವಣಿಗೆಗೆ ಹೊಸ ಭರವಸೆ ತುಂಬಿದ ಗುಕೇಶ್ ಸಾಧನೆ

ಭಾರತದ ಚೆಸ್ ಕ್ರೀಡಾಕ್ಷೇತ್ರಕ್ಕೆ ಈಗ ಸುವರ್ಣ ಯುಗ. ಇಲ್ಲಿಯ ಯುವಪ್ರತಿಭೆಗಳು ವಿಶ್ವಮಟ್ಟದಲ್ಲಿ ಉನ್ನತ ಸಾಧನೆ ಮಾಡುತ್ತ ಚದುರಂಗ ಲೋಕದಲ್ಲಿ ಅಚ್ಚರಿ ಹಾಗೂ ಸಂತಸದ ಹೊನಲು ಹರಿಸುತ್ತಿವೆ. ಅವರಲ್ಲಿ ಚೆನ್ನೈನ ಹದಿನೇಳು ವರ್ಷದ ದೊಮ್ಮರಾಜು ಗುಕೇಶ್ ಮುಂಚೂಣಿಯಲ್ಲಿದ್ದಾರೆ. ತಮ್ಮ ಗುರು ವಿಶ್ವನಾಥನ್ ಆನಂದ್ ಅವರನ್ನೂ ಹಿಂದಿಕ್ಕಿ ದೇಶದ ಚೆಸ್ ಆಟಗಾರರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. 37 ವರ್ಷಗಳಿಂದ ಆನಂದ್ ಅವರು ಈ ಸ್ಥಾನದಲ್ಲಿ ರಾರಾಜಿಸಿದ್ದರು. 2016ರಲ್ಲಿ ಪಿ.ಹರಿಕೃಷ್ಣ ಅವರು ಅಲ್ಪಕಾಲ ಅಗ್ರಸ್ಥಾನ ಗಳಿಸಿದ್ದರು. ಅದು ಬಿಟ್ಟರೆ ಆನಂದ್ ಅವರದ್ದೇ ಪಾರುಪತ್ಯ. ಗುಕೇಶ್ ಸಾಧನೆಯಿಂದಾಗಿ ಭಾರತದಲ್ಲಿ ಚೆಸ್ ಜನಪ್ರಿಯತೆ ಮತ್ತಷ್ಟು ಹೆಚ್ಚುವುದರಲ್ಲಿ ಅನುಮಾನವಿಲ್ಲ. ಶ್ರದ್ಧೆ, ಏಕಾಗ್ರತೆ ಮತ್ತು ಕಠಿಣ ಪರಿಶ್ರಮದಿಂದ ಸಣ್ಣ ವಯಸ್ಸಿನಲ್ಲಿಯೂ ದೊಡ್ಡ ಸಾಧನೆ ಮಾಡಲು ಸಾಧ್ಯ ಎಂಬುದನ್ನು ಗುಕೇಶ್ ತೋರಿಸಿಕೊಟ್ಟಿದ್ದಾರೆ. ಆರನೇ ವಯಸ್ಸಿನಲ್ಲಿಯೇ ಚೆಸ್ ಆಟಕ್ಕೆ ಮನಸೋತ ಹುಡುಗ ಈಗ ವಿಶ್ವದ ಕ್ರೀಡಾಪ್ರಿಯರ ಮನಸ್ಸು ಗೆಲ್ಲುತ್ತಿದ್ದಾರೆ. ಈಚೆಗೆ ಅಜರ್‌ಬೈಜಾನ್‌ನಲ್ಲಿ ನಡೆದ ವಿಶ್ವಕಪ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸ್ಥಳೀಯ ಆಟಗಾರ ಮಿಸ್ರಾಟಿನ್ ಇಸ್ಕಂದರೊವ್ ಅವರನ್ನು ಸೋಲಿಸುವ ಮೂಲಕ ಫಿಡೆ ರೇಟಿಂಗ್‌ನಲ್ಲಿ ಮೊದಲ ಹತ್ತು ಆಟಗಾರರಲ್ಲಿ ಸ್ಥಾನ ಗಳಿಸುವುದು ಖಚಿತವಾಗಿದೆ. 1991ರಲ್ಲಿ ಆನಂದ್ ಮೊದಲ ಬಾರಿಗೆ ಫಿಡೆ ರ‍್ಯಾಂಕಿಂಗ್ ಅಗ್ರ ಹತ್ತರಲ್ಲಿ ಸ್ಥಾನ ಗಳಿಸಿ ಇತಿಹಾಸ ಬರೆದಿದ್ದರು. ಮಹಿಳೆಯರಲ್ಲಿ ಕೋನೇರು ಹಂಪಿ ವಿಶ್ವ ಶ್ರೇಯಾಂಕದಲ್ಲಿ ನಾಲ್ಕು ಮತ್ತು ದ್ರೋಣವಳ್ಳಿ ಹಾರಿಕಾ 12ನೇ ಸ್ಥಾನ ಪಡೆದ ಇತಿಹಾಸವೂ ಇದೆ.



ಶಾಲೆಗಳಲ್ಲಿ ನುರಿತ ತರಬೇತುದಾರರಿಂದ ವಿದ್ಯಾರ್ಥಿಗಳಿಗೆ ತರಬೇತಿ ಕೊಡಿಸಿದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಾವಂತರು ಹೊರಹೊಮ್ಮುವುದರಲ್ಲಿ ಸಂಶಯವಿಲ್ಲ

ಗುಕೇಶ್ ಈಗ 2755.9 ಪಾಯಿಂಟ್ಸ್ ಹೊಂದಿದ್ದಾರೆ. ಆನಂದ್ ಖಾತೆಯಲ್ಲಿ 2754 ಅಂಕಗಳು ಇವೆ. ಇದರಿಂದಾಗಿ ಗುಕೇಶ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಒಂಬತ್ತನೇ ಸ್ಥಾನಕ್ಕೆ ಏರಲಿದ್ದಾರೆ. ತಮ್ಮ 13ನೇ ವಯಸ್ಸಿನಲ್ಲಿಯೇ ಗ್ರ್ಯಾಂಡ್‌ಮಾಸ್ಟರ್ ಪಟ್ಟ ಗಳಿಸಿದ್ದ ಗುಕೇಶ್ ಸಾಧನೆಯ ಪಯಣ ಏರುಗತಿಯಲ್ಲಿದೆ. ಹೋದ ವರ್ಷವಷ್ಟೇ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಟೂರ್ನಿಯೊಂದರಲ್ಲಿ ಸೋಲಿಸಿ ಜಗದ ಗಮನ ಸೆಳೆದಿದ್ದರು. ಹೋದ ವರ್ಷ ನಡೆದಿದ್ದ ಚೆಸ್ ಒಲಿಂಪಿಯಾಡ್‌ನಲ್ಲಿ ಅವರ ಅಜೇಯ ಆಟದ ದಾಖಲೆ ಕೂಡ ಸ್ಮರಣೀಯವಾಗಿದೆ. ಅವರ ಸಾಧನೆಗಳು ಎಳೆಯ ಆಟಗಾರರಿಗೆ ಪ್ರೇರಣೆಯಾಗುತ್ತಿವೆ. ಅವರ ಹಾದಿಯಲ್ಲಿ ಸಾಗುತ್ತಿರುವ ಯುವ ಆಟಗಾರರು ವಿಶ್ವದ ಬಲಾಢ್ಯ ಆಟಗಾರರಿಗೆ ಸವಾಲೊಡ್ಡುತ್ತಿದ್ದಾರೆ. ಅವರಲ್ಲಿ ಪ್ರಜ್ಞಾನಂದ, ನಿಹಾಲ್ ಸರೀನ್, ಭಾಸ್ಕರನ್ ಅಧಿಬನ್ ಮತ್ತು ಅರ್ಜುನ್ ಇರಿಗೇಶಿ ಪ್ರಮುಖರು. ಸದ್ಯ ಜೂನಿಯರ್ ವಿಭಾಗದಲ್ಲಿ ವಿಶ್ವದ ಏಳು ಅಗ್ರಮಾನ್ಯ ಆಟಗಾರರಲ್ಲಿ ನಾಲ್ವರು ಭಾರತೀಯರು ಇದ್ದಾರೆ. ಜೂನಿಯರ್ ಬಾಲಕಿಯರ ಅಗ್ರ ಹತ್ತರಲ್ಲಿ ಭಾರತದ ಇಬ್ಬರಿದ್ದಾರೆ. ಮುಂದಿನ ದಿನಗಳಲ್ಲಿ ವಿಶ್ವ ಚಾಂಪಿಯನ್ ಆಗುವ ಸಾಮರ್ಥ್ಯ ಅವರಲ್ಲಿದೆ. ಈಗ ಮಿಂಚುತ್ತಿರುವ ಬಹುತೇಕ ಆಟಗಾರರು ಚೆನ್ನೈನಿಂದ ಬಂದವರು. ಸರ್ಕಾರ ಮತ್ತು ಭಾರತ ಚೆಸ್ ಸಂಸ್ಥೆಯು ಇನ್ನುಳಿದ ರಾಜ್ಯಗಳಲ್ಲಿಯೂ ಸೂಕ್ತ ಸೌಲಭ್ಯಗಳನ್ನು ನೀಡಿ ಚೆಸ್ ಆಟದ ಬೆಳವಣಿಗೆಗೆ ಒತ್ತು ನೀಡಬೇಕು. ಶಾಲೆಗಳಲ್ಲಿ ನುರಿತ ತರಬೇತುದಾರರಿಂದ ವಿದ್ಯಾರ್ಥಿಗಳಿಗೆ ಕಲಿಸಿದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭೆಗಳು ಹೊರಹೊಮ್ಮುವುದರಲ್ಲಿ ಸಂಶಯವಿಲ್ಲ. ಕೃತಕ ಬುದ್ಧಿಮತ್ತೆ ಆಧಾರಿತ ನೂತನ ತಂತ್ರಜ್ಞಾನಗಳ ಮೂಲಕವೂ ತರಬೇತಿ ನೀಡಲು ಸೌಲಭ್ಯಗಳು ಹೆಚ್ಚಬೇಕು. ಅದಕ್ಕಾಗಿ ಪ್ರಮುಖ ಅಂತರರಾಷ್ಟ್ರೀಯ ಟೂರ್ನಿಗಳನ್ನು ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸಬೇಕು. ಆನಂದ್ ಅವರು ಗ್ರ್ಯಾಂಡ್ ಮಾಸ್ಟರ್ ಆದ ನಂತರ ದೇಶದಲ್ಲಿ ಚೆಸ್ ಬೆಳವಣಿಗೆ ಆಗಸಮುಖಿಯಾಗಿದೆ. ಆನಂದ್ ಮಾರ್ಗದಲ್ಲಿ ಈಗಿನ ಯುವಪೀಳಿಗೆ ಅಮೋಘ ಸಾಧನೆ ಮಾಡುತ್ತಿರುವುದರಿಂದ ಭವ್ಯ ಭವಿಷ್ಯದ ಭರವಸೆ ಮೂಡಿದೆ.

ದಿನದ ಟ್ವೀಟ್

ಕೆಟ್ಟ ರಾಜಕೀಯ ಸಲ್ಲ



ಉದ್ಯೋಗ ಸ್ಥಳದಲ್ಲಿ ಅಥವಾ ಮನೆಯಲ್ಲಿ ನಮಗೆ ವಿಷಮಯ ವಾತಾವರಣ ಅಥವಾ ಕೆಟ್ಟ ರಾಜಕೀಯದ ಅನುಭವವಾದಾಗ, ವೈದ್ಯರಾದ ನಾವು ಇದು ನಮಗಷ್ಟೇ ಆಗುತ್ತದೆ ಎಂದು ಭಾವಿಸುತ್ತೇವೆ. ಸತ್ಯ ಸಂಗತಿ ಏನೆಂದರೆ, ಯಾವುದೇ ಕ್ಷೇತ್ರ ಅಥವಾ ಉದ್ಯೋಗ ಇದರಿಂದ ಹೊರತಾಗಿಲ್ಲ. ಇತರರೆಲ್ಲರೂ ಅದನ್ನು ಅನುಭವಿಸುವುದರಿಂದ ನಮ್ಮ ಸಮಸ್ಯೆಗಳು ಪರಿಹಾರ ಕಾಣುವುದಿಲ್ಲ. ಆದರೆ ನಾವು ಒಬ್ಬಂಟಿಯಲ್ಲ ಎಂಬುದೇ ಸಮಾಧಾನಕರ ಅಂಶ.

ಡಾ. ಕಾರ್ತಿಕ್, ಎಂಡೋಕ್ರೈನಾಲಜಿಸ್ಟ್

ಕಿಡಿನುಡಿ



ನೂಹ್‌ನಲ್ಲಿನ ತೆರವು ಕಾರ್ಯಾಚರಣೆ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಆ ಕಾರ್ಯಾಚರಣೆಗೆ ತಡೆ ನೀಡಿದೆ. ಆಡಳಿತವು ಬರೀ ಮೂರು ದಿನಗಳಲ್ಲಿ 300ಕ್ಕೂ ಹೆಚ್ಚು ಕಟ್ಟಡಗಳನ್ನು ನೆಲಸಮ ಮಾಡಿದ ನಂತರ ಈ ಆದೇಶ ಹೊರಬಿದ್ದಿದೆ.
#HaryanaMewatViolence

ಹಿಮಾಂಶಿ ದಹಿಯಾ, ಪತ್ರಕರ್ತೆ

25 ವರ್ಷಗಳ ಹಿಂದೆ

ಶನಿವಾರ, 8-8-1998

• ಕಾವೇರಿ: ಮಧ್ಯಂತರ ವರದಿ ಜಾರಿಗೆ ಒಪ್ಪಿಗೆ

ನವದೆಹಲಿ, ಆ. 7– ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶವನ್ನು ಜಾರಿಗೊಳಿಸಲು ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿ ಮುಖ್ಯ ಮಂತ್ರಿಗಳು ಇಂದು ಒಪ್ಪಿಕೊಳ್ಳುವುದರೊಡನೆ ಬಹುದಿನಗಳಿಂದ ನನೆಗುದಿಗೆ ಬಿದ್ದಿದ್ದ ಅಂತರರಾಜ್ಯ ಬಿಕ್ಕಟ್ಟು ಬಗೆಹರಿದಂತಾಗಿದೆ.

ಪ್ರಧಾನ ಮಂತ್ರಿ ನೇತೃತ್ವದ ಪ್ರಾಧಿಕಾರವೊಂದರ ರಚನೆಗೆ ವಿವಾದಿತ ರಾಜ್ಯಗಳನ್ನು ಒಪ್ಪಿಸುವ ಮೂಲಕ 7 ವರ್ಷಗಳ ಬಿಕ್ಕಟ್ಟಿಗೆ ತಾತ್ಕಾಲಿಕ ಪರಿಹಾರ ಕಂಡುಹಿಡಿಯುವಲ್ಲಿ ಪ್ರಧಾನಮಂತ್ರಿಗಳು ನಡೆಸಿದ ಸಂಧಾನವು ಯಶಸ್ವಿಯಾಯಿತು.

ಈ ತಿಂಗಳ 12ರಂದು ಸುಪ್ರೀಂ ಕೋರ್ಟ್‌ನ ಷರತ್ತನ್ನು ಪೂರೈಸುವಲ್ಲಿ ಈ ಮೂಲಕ ಕೇಂದ್ರ ಸರ್ಕಾರವು ಹೆಚ್ಚು ಕಡಿಮೆ ಯಶಸ್ವಿಯಾಗಿದೆ.

ಬಿಕ್ಕಟ್ಟು: ಆದರೆ ಕರ್ನಾಟಕದಿಂದ ತಮಿಳುನಾಡಿಗೆ 205 ಟಿಎಂಸಿ ಅಡಿ ನೀರು ಲಭ್ಯವಾಗುವಂತೆ ಮೇಲುಸ್ತುವಾರಿಗೆ ನೇಮಕ ಮಾಡುವ ಉಸ್ತುವಾರಿ ಸಮಿತಿಗೆ (ಮಾನಿಟರಿಂಗ್ ಕಮಿಟಿ) ಶಾಸನಬದ್ಧ ಅಧಿಕಾರವಿರಬೇಕೆ ಇಲ್ಲವೇ ಸಲಹಾ ರೂಪದ ಅಧಿಕಾರವಿರಬೇಕೆ ಎಂಬುದು ಇನ್ನೂ ಬಗೆಹರಿಯದ ಬಿಕ್ಕಟ್ಟಾಗಿ ಉಳಿದುಕೊಂಡಿದೆ.

ಕೇಂದ್ರ, ರಾಜ್ಯ ಸರ್ಕಾರದ ಮತ್ತು ಕೇಂದ್ರ ಜಲ ಆಯೋಗದ ಅಧಿಕಾರಿಗಳನ್ನು ಒಳಗೊಳ್ಳುವ ಉಸ್ತುವಾರಿ ಸಮಿತಿಯ ಅಧಿಕಾರ ಮತ್ತು ಕಾರ್ಯನಿರ್ವಹಣೆ ಏನಿರಬೇಕೆನ್ನುವುದರ ಕರಡು ನಿಯಮಗಳನ್ನು ರಚಿಸಲು ಕೇಂದ್ರ ಸಂಪುಟ ಕಾರ್ಯದರ್ಶಿ ಮತ್ತು ವಿವಾದಿತ ನಾಲ್ಕು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ಸಮಿತಿಯೊಂದನ್ನು ರಚಿಸಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 8-8-1973

• ಬಂಧಿತ ಸಿಬ್ಬಂದಿ ಬಿಡುಗಡೆ ಆಗದಿದ್ದರೆ ಎಲ್ಲ ರೈಲು ಸಂಚಾರ ಸ್ತಬ್ಧ

ನವದೆಹಲಿ, ಆ. 7– ಚಳವಳಿಯನ್ನು ನಿಲ್ಲಿಸುವಂತೆ ರೈಲ್ವೆ ಸಚಿವರು ಮಾಡಿದ್ದ ಮನವಿಯನ್ನು ಮುಷ್ಕರ ಹೂಡಿರುವ ಲೋಕೋ ಸಿಬ್ಬಂದಿಯವರು ಕಡೆಗಣಿಸಿ, 48 ಗಂಟೆಗಳೊಳಗಾಗಿ ಬಂಧಿತ ಲೋಕೋ ಸಿಬ್ಬಂದಿಯನ್ನು ಬಿಡುಗಡೆ ಮಾಡಿ ಭಾರತ ರಕ್ಷಣಾ ನಿಯಮಗಳನ್ನು ಸರ್ಕಾರ ವಾಪಸು ಪಡೆಯದಿದ್ದರೆ ರಾಷ್ಟ್ರದಾದ್ಯಂತ ರೈಲು ಸಂಚಾರವನ್ನು ಸ್ತಬ್ಧಗೊಳಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಬುಧವಾರ ರಾತ್ರಿ 8 ಗಂಟೆಯೊಳಗಾಗಿ ಮುಷ್ಕರವನ್ನು ನಿಲ್ಲಿಸಿದರೆ ಎಲ್ಲ ಬಂಧಿತ ಸಿಬ್ಬಂದಿ ಮತ್ತು ನಾಯಕರನ್ನು ವಿಳಂಬವಿಲ್ಲದೆ ಬಿಡುಗಡೆ ಮಾಡುವುದಾಗಿ ರೈಲ್ವೆ ಸಚಿವ ಮಿಶ್ರಾ ಅವರು ಸಂಸತ್ತಿಗೆ ತಿಳಿಸಿದ್ದರು.

• ಸರ್ಕಾರದ ಬಿಗಿ ಆರ್ಥಿಕ ಕ್ರಮ: ಹೊಸ ಹುದ್ದೆ ಸೃಷ್ಟಿ ಇಲ್ಲ

ಬೆಂಗಳೂರು, ಆ. 7– ಹೊಸ ಹುದ್ದೆ ಸೃಷ್ಟಿಸುವುದನ್ನು ಹಾಗೂ ಹೊಸ ಖಾಲಿ ಹುದ್ದೆ ಭರ್ತಿ ಮಾಡುವುದನ್ನು ಮೈಸೂರು ಸರ್ಕಾರ ನಿಷೇಧಿಸಿದೆ.

ಇಲಾಖೆಗಳ ಪುನರ್ ವ್ಯವಸ್ಥೆ ಕಾರ್ಯದ ಮೇಲೂ ನಿಲುಗಡೆ ಹಾಕಿದೆ.

ಮೈಸೂರು ಸರ್ಕಾರ ಇಂದು ಇಲ್ಲಿ ಪ್ರಕಟಿಸಿದ ಹೊಸ ಆರ್ಥಿಕ ಮಿತವ್ಯಯದ ಕ್ರಮಗಳಿವು.

ಪ್ರಯಾಣ ಭತ್ಯೆಗೆ ಸಂಬಂಧಿಸಿ ಆಯವ್ಯಯದಲ್ಲಿ ಒದಗಿಸಿರುವುದರಲ್ಲಿ ಶೇಕಡ 10ರಷ್ಟು ಖೋತಾ ಮಾಡುವಂತೆಯೂ ಸರ್ಕಾರ ಆಜ್ಞೆ ಮಾಡಿದೆ.

ಎಲ್ಲಾ ಇಲಾಖೆಗಳ ನಾನಾ ವೆಚ್ಚದ ಬಾಬ್ತುಗಳಲ್ಲಿ ಶೇಕಡ 5ರಷ್ಟು ಖೋತಾ ಮಾಡುವಂತೆಯೂ ಆಜ್ಞೆ ತಿಳಿಸಿದೆ.

ನಾನಾ ವೆಚ್ಚದ ಬಾಬ್ತುಗಳಲ್ಲಿ ವಾಹನಗಳ ನಿರ್ವಹಣೆ, ಸಾದಿಲ್ವಾರು, ಉಪಕರಣಗಳ ಕೊಳ್ಳುವಿಕೆ, ಪುಸ್ತಕಗಳು, ಪೀಠೋಪಕರಣ ಮತ್ತು ಜಾಹೀರಾತು ವೆಚ್ಚಗಳೂ ಸೇರಿವೆ.

ಯಾವುದೇ ಇಲಾಖೆಗೆ ಆಯವ್ಯಯದಲ್ಲಿ ಹೊಸದಾಗಿ ಹಣ ಒದಗಿಸಕೂಡದು ಎಂದೂ ತಿಳಿಸಿದೆ.

ಈ ಎರಡೂ ದೇಶಗಳ ವಿಷಯದಲ್ಲಿ ಗೆಲುವಿನ ಸೂತ್ರ ಇನ್ನೂ ಅಗೋಚರವಾಗಿಯೇ ಇದೆ

ರಷ್ಯಾ–ಉಕ್ರೇನ್: ಒಮ್ಮತ ಸಾಧ್ಯವೇ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಇದೀಗ ಉಕ್ರೇನ್ ರಾಜತಾಂತ್ರಿಕವಾಗಿ ಮತ್ತೊಂದು ದಿಕ್ಕಿನಲ್ಲಿ ಹೆಜ್ಜೆ ಇರಿಸಿದೆ. ರಷ್ಯಾ ಜೊತೆಗಿನ ಯುದ್ಧದ ವಿಷಯದಲ್ಲಿ ಬರೀ ಪಶ್ಚಿಮ ರಾಷ್ಟ್ರಗಳ ಬೆಂಬಲವನ್ನಷ್ಟೇ ಗಳಿಸಿಕೊಂಡರೆ ಸಾಲದು, ಪಶ್ಚಿಮ ರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನು ಪೂರೈಸಬಹುದು, ಆರ್ಥಿಕ ಸಹಾಯ ಒದಗಿಸಬಹುದು, ಆದರೆ ರಷ್ಯಾದ ಮೇಲೆ ಒತ್ತಡ ಹೇರಬೇಕಾದರೆ, ಮಾತುಕತೆಯ ವೇದಿಕೆಗೆ ರಷ್ಯಾವನ್ನು ಎಳೆದು ತರಬೇಕಾದರೆ ಬೇರೆಯದೇ ಹಾದಿಯನ್ನು ಕ್ರಮಿಸಬೇಕು ಎಂಬುದನ್ನು ಉಕ್ರೇನ್ ಅರಿತುಕೊಂಡಂತೆ ಕಾಣುತ್ತಿದೆ.

ಹಾಗಾಗಿಯೇ, ಯುದ್ಧದ ವಿಷಯದಲ್ಲಿ ತಟಸ್ಥ ನೀತಿ ಅನುಸರಿಸುತ್ತಿರುವ ದಕ್ಷಿಣ ಜಗತ್ತಿನ ರಾಷ್ಟ್ರಗಳನ್ನು ತಲುಪಲು ಉಕ್ರೇನ್ ಯೋಜನೆ ರೂಪಿಸಿದೆ. ಮುಖ್ಯವಾಗಿ ಭಾರತ, ಚೀನಾ, ಬ್ರೆಜಿಲ್ ಮತ್ತು ಆಫ್ರಿಕಾದ ರಾಷ್ಟ್ರಗಳಿಗೆ ತನ್ನ ಪರಿಸ್ಥಿತಿಯನ್ನು ವಿವರಿಸಿ, ಸಹಾನುಭೂತಿ ಗಳಿಸುವ ದಿಸೆಯಲ್ಲಿ ಉಕ್ರೇನ್ ಕಾರ್ಯೋನ್ಮುಖವಾಗಿದೆ.

ಈ ಯೋಜನೆಯ ಭಾಗವಾಗಿಯೇ ಸೌದಿ ಅರೇಬಿಯಾದಲ್ಲಿ ಈ ತಿಂಗಳ 5 ಮತ್ತು 6ರಂದು ಉಕ್ರೇನ್ ಮುಂದಿರಿಸಿರುವ ಶಾಂತಿ ಪ್ರಸ್ತಾವದ ಕುರಿತು ಚರ್ಚಿಸಲು ಬಹುರಾಷ್ಟ್ರೀಯ ಸಭೆಯೊಂದನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಅಮೆರಿಕ, ಐರೋಪ್ಯ ರಾಷ್ಟ್ರಗಳು, ಚೀನಾ, ಬ್ರೆಜಿಲ್, ಭಾರತ ಸೇರಿದಂತೆ ಹಲವು ರಾಷ್ಟ್ರಗಳ ಭದ್ರತಾ ಸಲಹೆಗಾರರು ಭಾಗವಹಿಸಿದ್ದರು. ಭಾರತದ ಪರವಾಗಿ ಅಜಿತ್ ಡೊಭಾಲ್ ಈ ಸಭೆಯಲ್ಲಿ ಪಾಲ್ಗೊಂಡರು. ರಷ್ಯಾವನ್ನು ಈ ಸಭೆಗೆ ಆಹ್ವಾನಿಸಿರಲಿಲ್ಲ!

ಹಾಗೆ ನೋಡಿದರೆ, ಉಕ್ರೇನ್ ಯುದ್ಧ ಆರಂಭವಾದ ಬಳಿಕ ಹಲವು ಹಂತಗಳಲ್ಲಿ ಶಾಂತಿ ಮಾತುಕತೆಗಳು ನಡೆದಿವೆ. ಮೊದಲಿಗೆ, ಯುದ್ಧ ಸಂತ್ರಸ್ತ ಜನರಿಗೆ ಸ್ಥಳಾಂತರಗೊಳ್ಳಲು ಅವಕಾಶ ಕಲ್ಪಿಸುವ ಸುರಕ್ಷಿತ ಮಾರ್ಗಗಳನ್ನು ಗುರುತಿಸಲು ಮಾತುಕತೆಗಳು ನಡೆದವು. ನಂತರ ಯುದ್ಧಕ್ಕೆ ಅಂತ್ಯ ಹಾಡುವ ಕುರಿತು ಗಂಭೀರ ಮಾತುಕತೆ ಟರ್ಕಿಯ ಮಧ್ಯಸ್ಥಿಕೆಯಲ್ಲಿ ನಡೆಯಿತು. ಆದರೆ ಒಮ್ಮತ ಸಾಧ್ಯವಾಗದೇ ಮಾತುಕತೆ ಮುರಿದುಬಿತ್ತು.

ನಂತರ ರಷ್ಯಾವು ಜನವಸತಿಗಳ ಮೇಲೆ ದಾಳಿ ನಡೆಸುತ್ತಿದೆ ಎಂಬ ಕಾರಣದಿಂದ ಉಕ್ರೇನ್ ಕೆಲಕಾಲ ಮಾತುಕತೆಗಳಿಂದ ದೂರ ಉಳಿಯಿತು. ಟರ್ಕಿಯ ಎರ್ಡೋಗನ್ ಉಭಯ ರಾಷ್ಟ್ರಗಳನ್ನು ಮಾತುಕತೆಯ ಮೇಜಿಗೆ ತರುವ ಪ್ರಯತ್ನ ಮುಂದುವರಿಸಿದರು. ಆದರೆ ಉಕ್ರೇನ್ ರಷ್ಯಾದ ನಿಲುವನ್ನು ಅನುಮಾನಿಸಿತು. ಆಕ್ರಮಣಕಾರಿ ಮನಃಸ್ಥಿತಿಯ ರಷ್ಯಾ, ತನಗೆ ಆದ ಹಿನ್ನಡೆಯನ್ನು ಸರಿಪಡಿಸಿಕೊಳ್ಳಲು, ಸೇನೆಯನ್ನು ಸಂಘಟಿಸಿಕೊಂಡು ಹೆಚ್ಚಿನ ಸಾಮರ್ಥ್ಯದಿಂದ ದಾಳಿ ಮಾಡಲು ಸಮಯಾವಕಾಶಕ್ಕಾಗಿ ಶಾಂತಿ ಮಾತುಕತೆಯ ನೆಪ ಹುಡುಕುತ್ತಿದೆ ಎಂಬುದು ಉಕ್ರೇನ್ ಅನುಮಾನವಾಗಿತ್ತು. ಮಾತುಕತೆಗೆ ವಿರಾಮ ಬಿತ್ತು.

ನಂತರ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ವಿವಿಧ ಜಾಗತಿಕ ವೇದಿಕೆಗಳಲ್ಲಿ ಮಾತನಾಡಿ, 10 ಅಂಶಗಳ ಶಾಂತಿ ಪ್ರಸ್ತಾವವನ್ನು ಮುಂದಿಟ್ಟರು. ಯುರೋಪಿನ ಅತಿದೊಡ್ಡ ಪರಮಾಣು ವಿದ್ಯುತ್ ಸ್ಥಾವರ ಉಕ್ರೇನಿನಲ್ಲಿದೆ, ಹಾಗಾಗಿ ವಿಕಿರಣ ಮತ್ತು ಪರಮಾಣು ಸುರಕ್ಷತೆ ಮೊದಲ ಆದ್ಯತೆ. ಉಕ್ರೇನಿನ ದವಸ ಧಾನ್ಯಗಳು ಜಗತ್ತಿನ ಇತರ ರಾಷ್ಟ್ರಗಳಿಗೆ ರಫ್ತಾಗುವುದು ಮುಂದುವರಿಯಬೇಕು. ಯುದ್ಧಕೈದಿಗಳನ್ನು ಬಿಡುಗಡೆಗೊಳಿಸಬೇಕು. ಉಕ್ರೇನಿನ ಆಕ್ರಮಿತ ಪ್ರದೇಶಗಳಿಂದ ರಷ್ಯಾ ಹಿಂದೆ ಸರಿಯಬೇಕು. ಪ್ರಾದೇಶಿಕ ಸಮಗ್ರತೆಯನ್ನು ಮರುಸ್ಥಾಪಿಸಬೇಕು. ಗಡಿಯಿಂದ ಸೇನೆಯನ್ನು ಹಿಂಪಡೆಯಬೇಕು. ವಿಶೇಷ ನ್ಯಾಯಮಂಡಳಿಯ ಮೂಲಕ ರಷ್ಯಾದ ಯುದ್ಧ ಅಪರಾಧಗಳನ್ನು ವಿಚಾರಣೆಗೆ ಒಳಪಡಿಸಬೇಕು. ಮುಂದೆ ಇಂತಹದೇ ಪರಿಸ್ಥಿತಿ ಎದುರಾಗದಂತೆ ತಡೆಯಲು ಇತರ ದೇಶಗಳು ಉಕ್ರೇನಿಗೆ ಭದ್ರತೆಯ ಅಭಯ ನೀಡಬೇಕು. ಯುದ್ಧದ ಅಂತ್ಯ ಲಿಖಿತ ರೂಪದಲ್ಲಿ ಕರಾರಿಗೆ ಪರಸ್ಪರ ಸಹಿ ಮಾಡುವ ಮೂಲಕ ಆಗಬೇಕು ಎಂದು ಝೆಲೆನ್‌ಸ್ಕಿ ತಮ್ಮ ಪ್ರಸ್ತಾವವನ್ನು ಮುಂದಿಟ್ಟರು.

ಝೆಲೆನ್‌ಸ್ಕಿ ಮಂಡಿಸಿದ ಈ ಶಾಂತಿ ಪ್ರಸ್ತಾವದಲ್ಲಿ ರಷ್ಯಾ ಒಪ್ಪಬಹುದಾದ ಕೆಲವು ಅಂಶಗಳಿದ್ದವು. ಧಾನ್ಯಗಳ ರಫ್ತು, ಯುದ್ಧ ಕೈದಿಗಳ ಹಸ್ತಾಂತರ, ವಿಕಿರಣ ಮತ್ತು ಪರಮಾಣು ಸುರಕ್ಷತೆ ಹಾಗೂ ಸೇನಾ ಹಿಂತೆಗೆತದ ವಿಷಯದಲ್ಲಿ ರಷ್ಯಾ ಒಲ್ಲೆ ಎನ್ನಲು ಕಾರಣಗಳಿರಲಿಲ್ಲ. ಆದರೆ ರಷ್ಯಾ ಒಪ್ಪಲು ಸಾಧ್ಯವಾಗದ ಅಂಶಗಳೂ ಆ ಪ್ರಸ್ತಾವದಲ್ಲಿದ್ದವು. 1991ರ ಗಡಿರೇಖೆಗೆ ರಷ್ಯಾ ಬದ್ಧವಾಗಬೇಕು ಎನ್ನುವುದು ಕ್ರಿಮಿಯಾವನ್ನು ರಷ್ಯಾ ತೊರೆಯಬೇಕು ಎನ್ನುವುದರ ಬದಲಿ ಹೇಳಿಕೆಯಾಗಿತ್ತು. ಉಕ್ರೇನಿಗೆ ಇತರ ದೇಶಗಳು ಭದ್ರತೆಯ ಅಭಯ ನೀಡಬೇಕು ಎನ್ನುವುದು ಅಮೆರಿಕ ನೇತೃತ್ವದ ಮಿಲಿಟರಿ ಒಕ್ಕೂಟಕ್ಕೆ (ನ್ಯಾಟೊ) ಉಕ್ರೇನನ್ನು ಸೇರಿಸಿಕೊಳ್ಳಬೇಕು ಎನ್ನುವುದರ ಮತ್ತೊಂದು ರೂಪವಾಗಿತ್ತು. ಹಾಗಾಗಿ ಶಾಂತಿ ಪ್ರಸ್ತಾವವನ್ನು ರಷ್ಯಾ ತಿರಸ್ಕರಿಸಿತು.

ನಂತರ ಇಂಡೊನೇಷ್ಯಾ ಕಡೆಯಿಂದ ಮತ್ತೊಂದು ಪ್ರಸ್ತಾವ ಬಂತು. ಪ್ರಸ್ತುತ ಯಾವ ಪ್ರದೇಶಗಳು ಯಾರ ಹಿಡಿತದಲ್ಲಿವೆಯೋ ಅಷ್ಟಕ್ಕೇ ಗಡಿ ಸೀಮಿತವಾಗಬೇಕು. ವೀಕ್ಷಕರ ಸಮ್ಮುಖದಲ್ಲಿ ಎರಡು ದೇಶಗಳ ನಡುವೆ ಸೇನಾರಹಿತ ವಲಯವನ್ನು ಗುರುತಿಸಬೇಕು. ವಿವಾದಿತ ಪ್ರದೇಶಗಳ ಜನರ ಅಭಿಪ್ರಾಯ ಸಂಗ್ರಹಿಸಿ, ಆ ಪ್ರದೇಶದ ಒಡೆತನ ನಿರ್ಧರಿಸುವ ಕೆಲಸವನ್ನು ವಿಶ್ವಸಂಸ್ಥೆಗೆ ಬಿಡಬೇಕು ಎಂದು ತನ್ನ ಅಭಿಪ್ರಾಯವನ್ನು ಇಂಡೊನೇಷ್ಯಾ ಹೇಳಿತು. ಇದನ್ನು ರಷ್ಯಾಪರ ಇರುವ ಪ್ರಸ್ತಾವ ಎಂದು ಉಕ್ರೇನ್ ತಿರಸ್ಕರಿಸಿತು.



ತನ್ನ ಬಗೆಗಿನ ಟೀಕೆಗಳಿಗೆ ಉತ್ತರದ ರೂಪದಲ್ಲಿ ಚೀನಾ ಪ್ರಕಟಿಸಿದ ಹನ್ನೆರಡು ಅಂಶಗಳ ಪ್ರಸ್ತಾವವು ಅಡ್ಡಗೋಡೆಯ ಮೇಲೆ ದೀಪ ಇಡುವ ಕೆಲಸ ಮಾಡಿತೇ ವಿನಾ ಬಿಕ್ಕಟ್ಟಿನ ಪರಿಹಾರಕ್ಕೆ ಸಹಕಾರಿಯಾಗಲಿಲ್ಲ. ಇಸ್ರೇಲ್, ಬ್ರೆಜಿಲ್, ಸೌದಿ ಅರೇಬಿಯಾ ಬಿಕ್ಕಟ್ಟು ಇತ್ಯರ್ಥಕ್ಕೆ ಮಧ್ಯವರ್ತಿಯಾಗುವ ಉತ್ಸಾಹ ತೋರಿದವು. ಈ ನಡುವೆ ಉಕ್ರೇನ್ ಮತ್ತು ರಷ್ಯಾದ ನಾಯಕರು ಮಾತುಕತೆಗೆ ಸಿದ್ಧ ಎಂದು ಹಲವು ಬಾರಿ ಹೇಳಿದರಾದರೂ, ದಾಳಿ, ಪ್ರತಿದಾಳಿ ಮಾತ್ರ ನಿಲ್ಲಲಿಲ್ಲ!

ಹಾಗಂತ ಇದುವರೆಗೆ ಚರ್ಚೆಗೆ ಬಂದ ಶಾಂತಿ ಪ್ರಸ್ತಾವಗಳು ಗಂಭೀರ ಸ್ವರೂಪದವೇ ಎಂದು ನೋಡಿದರೆ ಹಾಗನಿಸುವುದಿಲ್ಲ. ಜಾಗತಿಕವಾಗಿ ಮಹತ್ವದ ಪಾತ್ರ ನಿರ್ವಹಿಸುವ ಉಮೇದಿನಿಂದ ಉಕ್ರೇನ್ ಬಿಕ್ಕಟ್ಟಿಗೆ ಪರಿಹಾರ ಸೂತ್ರ ಹೊಸೆಯುವ ಪ್ರಯತ್ನಗಳೂ ನಡೆದವು. ಆದರೆ ಪಕ್ಷಪಾತಿಯಲ್ಲದ, ಎರಡೂ ರಾಷ್ಟ್ರಗಳು ಒಪ್ಪಬಹುದಾದ ಪರಿಹಾರ ಸೂತ್ರ ಮಾತ್ರ ಗೋಚರಿಸಲಿಲ್ಲ. ಅದನ್ನೇ ಅಜಿತ್ ಡೊಭಾಲ್ ಅವರು ಸೌದಿ ಅರೇಬಿಯಾದಲ್ಲಿ ನಡೆದ ಸಭೆಯಲ್ಲಿ ಹೇಳಿದ್ದಾರೆ. ಜೊತೆಗೆ ನ್ಯಾಯಯುತ ಮತ್ತು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲು ನಡೆಯುವ ಶಾಂತಿ ಮಾತುಕತೆಗಳು, ಈ ಬಿಕ್ಕಟ್ಟಿನ ಭಾಗವಾಗಿರುವ ಎಲ್ಲ ಪಾಲುದಾರರನ್ನೂ ಒಳಗೊಂಡು ನಡೆಯಬೇಕು ಎಂಬ ಭಾರತದ ನಿಲುವನ್ನು ಅವರು ಅಭಿವ್ಯಕ್ತಿಸಿದ್ದಾರೆ. ಹಾಗಾಗಿ, ರಷ್ಯಾವನ್ನು ಹೊರಗಿಟ್ಟು ನಡೆದ ಸೌದಿ ಸಭೆಯ ಕುರಿತು ಹೆಚ್ಚಿನ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ.

ಸದ್ಯದ ಮಟ್ಟಿಗಂತೂ, ಉಕ್ರೇನ್ ಮತ್ತು ರಷ್ಯಾ ನಡುವೆ ನೇರ ಮಾತುಕತೆ ಸಾಧ್ಯ ಎನ್ನುವ ಪರಿಸ್ಥಿತಿ ಇಲ್ಲ. ರಷ್ಯಾ ತನ್ನ ಸಾಮರ್ಥ್ಯಕ್ಕೆ ತಕ್ಕ ಆಕ್ರಮಣಕಾರಿ ನಿಲುವನ್ನು ಇದುವರೆಗೆ ತೋರ್ಪಡಿಸಿಲ್ಲವಾದರೂ, ಯುದ್ಧವನ್ನು ಕೊನೆಗೊಳಿಸುವ ಯಾವ ಸೂಚನೆಯನ್ನೂ ತೋರುತ್ತಿಲ್ಲ. ಆಕ್ರಮಿಸಿಕೊಂಡಿರುವ ಪ್ರದೇಶಗಳನ್ನು ರಷ್ಯಾ ಬಿಟ್ಟುಕೊಡಬೇಕಾಗುತ್ತದೆ ಎಂಬ ಸನ್ನಿವೇಶ ಕೂಡ ಸೃಷ್ಟಿಯಾಗಿಲ್ಲ.

ಇತ್ತ ಉಕ್ರೇನ್ ಪ್ರತಿದಾಳಿಯ ಮೂಲಕ ತನ್ನ ಭೂಪ್ರದೇಶವನ್ನು ಮರುವಶ ಮಾಡಿಕೊಳ್ಳುವ ಉಮೇದನ್ನು ಉಳಿಸಿಕೊಂಡಿದೆ. ನ್ಯಾಟೊ ರಾಷ್ಟ್ರಗಳಿಂದ ಸಕಾರಾತ್ಮಕ ಸಂದೇಶ ಬಾರದಿದ್ದರೂ, ನ್ಯಾಟೊ ಸೇರುವ ಬಯಕೆಯನ್ನು ಅದು ಪೂರ್ತಿಯಾಗಿ ಬಿಟ್ಟುಕೊಟ್ಟಿಲ್ಲ. ಉಕ್ರೇನ್ ಸಹಜವಾಗಿಯೇ ಈ ಯುದ್ಧವನ್ನು ತನ್ನ ಅಳಿವು ಮತ್ತು ಉಳಿವಿನ ಪ್ರಶ್ನೆಯಾಗಿ ನೋಡುತ್ತಿದೆ.

ಯಾವುದೇ ಯುದ್ಧದಲ್ಲಿ, ಕಾದಾಡುತ್ತಿರುವ ಎರಡೂ ದೇಶಗಳಿಗೆ ತಾನು ವಿಜಯ ಸಾಧಿಸಬಲ್ಲೆ ಎಂಬ ವಿಶ್ವಾಸ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಆ ದೇಶಗಳು ಶಾಂತಿ ಮಾತುಕತೆಯತ್ತ ನಿರ್ಲಕ್ಷ್ಯದ ನೋಟವನ್ನೇ ಬೀರುತ್ತವೆ. ಎರಡೂ ರಾಷ್ಟ್ರಗಳಿಗೆ ತಾನು ಗೆದ್ದೆ (ವಿನ್-ವಿನ್) ಎಂದು ಅನ್ನಿಸಬಹುದಾದಂತಹ ಮತ್ತು ಮುಖ ಉಳಿಸಿಕೊಳ್ಳುವ ಸೂತ್ರ ದೊರೆತಾಗ ಮಾತ್ರ ಅವು ಮಾತುಕತೆಗೆ ಒಲವು ತೋರುತ್ತವೆ. ಉಕ್ರೇನ್ ಮತ್ತು ರಷ್ಯಾದ ವಿಷಯದಲ್ಲಿ ಅಂತಹ ಸೂತ್ರ ಇನ್ನೂ ಅಗೋಚರವಾಗಿಯೇ ಇದೆ.

ಚುರುಮುರಿ



ಕಾಗಕ್ಕ- ಗುಬ್ಬಕ್ಕ ಕಥೆ

• ಲಿಂಗರಾಜು ಡಿ.ಎಸ್.

ಕಾಗಕ್ಕ, ಗುಬ್ಬಕ್ಕ ಮಾತಾಡ್ಕತಿದ್ರೋ. 'ನೋಡಿದೇನೆ ಕಾಗಕ್ಕ, ರಾಜಕೀಯದೋವು ಅಪ್ಪಂತ ಮಾತಾಡದು ಬುಟ್ಟು 'ಅವನ ತಲೆ ಕರಕಲಾಗ್ಯದೆ, ತುಪ್ಪವ ಕಮಲಕ್ಕನೇ ಕೊಟ್ಟರನಿಲ್ಲ' ಅಂತ ಬ್ಯಾಡದ ಸಂಗ್ತಿ ಮಾತಾಡಿಕ್ಯಂಡೇ ಕಾಲ ಕಳೀತಾವೆ' ಅಂದಳು ಗುಬ್ಬಕ್ಕ.

'ಹ್ಞೂಂ ಕಣಕ್ಕ, ಸರ್ಕಾರವೂ ಗ್ಯಾರೆಂಟಿ ಕನಸಿಂದ ಆಚೆಗೆ ಬಂದುಲ್ಲ. ಮುಂದ್ಲ ಎಲೆಕ್ಷನ್ನು ಗೆಲ್ಲದೆಂಗೆ ಅಂತ ಬಾಯಿಗೆ ಅಕ್ಕಿಕಾಳು ಹಾಕ್ಯಂಡು ಕುಂತವಂತೆ' ಅಂತಂದ್ಲು ಕಾಗಕ್ಕ.

'ಅಕ್ಕಿಕಾಳು ಎಲ್ಲಿದ್ದವಮ್ಮಿ? ನಾನೇ ಅಕ್ಕಿ ಕಾಳು ಕಂಡು ವರ್ಸಾಯ್ತು. ಜೋರಾಗಿ ನುಲಿಬ್ಯಾಡ ಕನೇ ಅಮ್ಯಾಲೆ ಹುಲಿ ಸಿದ್ದಣ್ಣ 'ಎಲ್ಲದೆ ಅಕ್ಕಿ!' ಅಂತ ಬಂದುಗಿಂದಾನು' ಗುಬ್ಬಕ್ಕ ಎಚ್ಚರಿಸಿದಳು.

'ಕಮಲಕ್ಕನ ಮನೇವು ಮೂವತ್ತು ಕಾಂಗ್ರೆಸ್ ಹಕ್ಕಿಗಳಿಗೆ ಕಾಳಾಕ್ಯವಂತೆ. ಹದಿನೇಳು ಜನ ಪಾಲು ಕೇಳಿ ಸರ್ಕಾರದ ಬಾಯಿಗೆ ಮಣ್ಣಾಕಿದ್ದು ನೀನು ಕಾಣಾ' ಕಾಗಕ್ಕ ನೆನಪಿಸಿದಳು.

'ಕಮಲದವೇನು ಕಿಸಿದಿದ್ರೋ ತಗಾ. ಕಾಂಗ್ರೆಸಿನವು ಕಮೀಶನ್ನು, ಪೇಸಿಎಂ ಅಂತ ಕೈಮದ್ದು ಇಕ್ಕಿದ್ವಲ್ಲಾ. ಅಧಿಕಾರ ಬಂದ ಮ್ಯಾಲೆ ಆ ಸುದ್ದೀನೇ ಕಾಣೆ. ಈಗ ಕೆಲಸಿಲ್ಲದ ಕುಮಾರಣ್ಣ ಎಳನೀರು ಬಂಬಲು ಗೋರಿಕ್ಯಂಡು ಕುಂತವ್ನೆ' ಗುಬ್ಬಕ್ಕ ಪುಳ್ಳೆ ಹಾಕಿದಳು.

'ಯವ್ವ ನನಕೆಟ್ಟೆ! ಕಾಸೆಲ್ಲಾ ಇವರತಾವ್ಲೆ ಹೋಗಿ ಜನ ಎಡಗೈಲೂ ನಮ್ಮನ್ನ ಓಡಿಸ್ತಿಲ್ಲ ಕವ್ವ. ನಾವೂ ಕ್ರಿಕೆಟ್ ಹೈಕ್ಳೋ, ಬಿಬಿಎಂಪಿ-ಬಿಡಿಎ ಗಳೋ ಆಗಿದ್ರೆ ಕಾಸಾದ್ರು ನೋಡಬೈದಿತ್ತು' ಕಾಗಕ್ಕ ಬಲು ನೊಂದುಕೊಂಡಳು.

'ಅಯ್ಯೋ ಬುಡ್ತು ಅನ್ನವ್ವ. ಸಾವ್ರ, ಲಕ್ಷ ಕಾಸು ಕೊಟ್ರೆ ಕೆಲಸವಂತೆ. ಕ್ರಿಕೆಟ್ಟೋರು ದೇಸಕ್ಕೋಸ್ಕರ ಯಾವತ್ತಾದ್ರೂ ಆಡಿದ್ದರೇ. ಇವುನ್ನ ಹಿಡಕಂದು ವದರಿದ್ರೆ ವರ್ಸದ ಅಕ್ಕಿ ಗ್ಯಾರೆಂಟಿಗೆ ಆಗೋವಷ್ಟು ಕಾಸು ಗುಡ್ಡೆ ಬೀಳ್ತದೆ' ಗುಬ್ಬಕ್ಕ ನಿಟ್ಟುಸಿರುಬುಟ್ಟಳು.

'ಬ್ಯಾರೇರ ಇಚಾರ ನಮಗ್ಯಾಕೆ ತಾಯಿ. ನಾವೂ ಮೋದಿ ಮಾವನಂಗೆ ಸುಮ್ಮಗಿರದು ಕಲೀಬೇಕು' ಅಂದ ಕಾಗಕ್ಕ ಕಾವ್, ಕಾವ್ ಅಂತ ಹಾರಿಹೋದಳು.

ಸಂಗತ

ಬೆಂಗಳೂರಿನಲ್ಲೊಂದು ಪಶ್ಚಿಮಘಟ್ಟ!

ವಿಶ್ವದ 18 'ಜೀವಿವೈವಿಧ್ಯದ ಹಾಟ್‌ಸ್ಪಾಟ್'ಗಳಲ್ಲಿ ಒಂದು ಎಂದು ಪ್ರಸಿದ್ಧವಾಗಿರುವ ಪಶ್ಚಿಮಘಟ್ಟದ ತುಣುಕೊಂದು ಬೆಂಗಳೂರಿನ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಇಣುಕಲಿದೆ

• ಗುರುರಾಜ್ ಎಸ್. ದಾವಣಗೆರೆ

ಬೆಂಗಳೂರಿನಲ್ಲೊಂದು ಪಶ್ಚಿಮಘಟ್ಟ! ಅಚ್ಚರಿ ಆಗುತ್ತಿದೆಯೇ? ಹೌದು, ಕಾಂಕ್ರೀಟ್ ಕಾಡು ಎಂದೇ ಕರೆಸಿಕೊಳ್ಳುವ ರಾಜಧಾನಿ ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಥೇಟ್ ಪಶ್ಚಿಮಘಟ್ಟವೇ ತಲೆ ಎತ್ತಲಿದೆ. ಕೇರಳದಿಂದ ಗುಜರಾತ್‌ವರೆಗೆ ಹಬ್ಬಿರುವ ಪಶ್ಚಿಮಘಟ್ಟ ನೆಲೆ ನಿಲ್ಲಲು ಲಕ್ಷಾಂತರ ವರ್ಷಗಳೇ ಬೇಕಾದವು. ಆದರೆ ಬೆಂಗಳೂರಿನ ಕೆಂಪುತೋಟ ಲಾಲ್‌ಬಾಗ್‌ನಲ್ಲಿ ಬರೀ ಆರೇ ವರ್ಷಗಳಲ್ಲಿ ನಿತ್ಯ ಹರಿದ್ವರ್ಣ ಪಶ್ಚಿಮಘಟ್ಟ ಆರು ಎಕರೆ ಜಾಗದಲ್ಲಿ ಜೀವಾಂಕುರಿಸಲಿದೆ. ಈ ವಿಚಾರ ಮೊಳಕೆಯೊಡೆದದ್ದು ಮೂರೂವರೆ ವರ್ಷಗಳ ಹಿಂದೆ.

ಸಸ್ಯಕಾಶಿ ಎಂದೇ ಪ್ರಸಿದ್ಧವಾಗಿರುವ ಲಾಲ್‌ಬಾಗ್ ಬೆಂಗಳೂರಿನ ಪ್ರಮುಖ ಪ್ರವಾಸಿ ತಾಣಗಳಲ್ಲೊಂದು. 240 ಎಕರೆ ಪ್ರದೇಶದ ಹಸಿರುರಾಶಿ ಬೆಂಗಳೂರು ನಗರದ ಆಮ್ಲಜನಕದ ಟ್ಯಾಂಕ್‌ನಂತೆ ಕೆಲಸ ಮಾಡುತ್ತಿದೆ. 170ಕ್ಕೂ ಹೆಚ್ಚು ಬಗೆಯ ಪಕ್ಷಿಗಳು, ಎರಡು ಸಾವಿರಕ್ಕೂ ಹೆಚ್ಚು ಪ್ರಭೇದದ ಮರಗಳಿರುವ ಲಾಲ್‌ಬಾಗ್, ಸಸ್ಯ ಸಂಶೋಧಕರು, ಸಸ್ಯಾಸಕ್ತರ ಚಿತ್ತಾಕರ್ಷಕ ಜಾಗವೂ ಹೌದು. ಈಗಾಗಲೇ 2,350 ವಿವಿಧ ಸಸ್ಯ ಪ್ರಭೇದಗಳಿರುವ ಲಾಲ್‌ಬಾಗಿಗೆ ದಿನನಿತ್ಯ ಸಾವಿರಾರು ಜನ ಭೇಟಿ ನೀಡುತ್ತಾರೆ. ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವದ ಅಂಗವಾಗಿ ನಡೆಯುವ ಫಲಪುಷ್ಪ ಪ್ರದರ್ಶನಕ್ಕೆ ಲಕ್ಷಾಂತರ ಜನ ಬರುತ್ತಾರೆ. ಇಲ್ಲಿರುವ ಮರಗಳಲ್ಲಿ ಹೆಚ್ಚಿನವು ವಿದೇಶಿ ಮೂಲದವಾಗಿದ್ದು, ಹೊಸದಾಗಿ ಅಂಕುರಿಸುತ್ತಿರುವ ಪಶ್ಚಿಮಘಟ್ಟದಲ್ಲಿ ದೇಸಿ ಮರಗಳೇ ಇರಲಿವೆ.

ಲಾಲ್‌ಬಾಗ್‌ನ ದಕ್ಷಿಣ ಭಾಗದ ಹತ್ತಕ್ಕೂ ಹೆಚ್ಚು ಎಕರೆ ಜಾಗವನ್ನು ಬಿದ್ದ ಹಳೆಯ ಮರಗಳ ಶೇಖರಣೆಗೆ ಮತ್ತು ಸಾವಯವ ಗೊಬ್ಬರ ತಯಾರಿಕೆಗೆ ಬಳಸಲಾಗುತ್ತಿತ್ತು. ಯಾವುದೋ ಶುಭ ಗಳಿಗೆಯಲ್ಲಿ, ಇಷ್ಟು ದೊಡ್ಡ ಜಾಗವನ್ನು ಅನುಪಯುಕ್ತವಾಗಿ ಇಟ್ಟುಕೊಳ್ಳುವ ಬದಲು ಹಸಿರಿಗೆ ಸಂಬಂಧಿಸಿದ ಕೆಲಸ ಮಾಡಲು ನಿರ್ಧರಿಸಿ ಹಿರಿಯ ಅರಣ್ಯತಜ್ಞ ಯಲ್ಲಪ್ಪ ರೆಡ್ಡಿ ಅವರನ್ನು ಸಂಪರ್ಕಿಸಿದಾಗ, ಪಶ್ಚಿಮಘಟ್ಟವನ್ನು ಹೋಲುವ ಕಿರು ಅರಣ್ಯ ಪ್ರದೇಶವನ್ನು ಸೃಷ್ಟಿಸಿ ಎಂದರಂತೆ. ಅವರ ಸಲಹೆಯಂತೆ ಲಾಲ್‌ಬಾಗಿನಲ್ಲಿ ಸಹ್ಯಾದ್ರಿಯ ಕಾಡು ಮೈದಳೆಯಲಿದೆ.

ಇದೇ ಒಂದರಂದು 132 ಪ್ರಭೇದಗಳ 1,240 ಸಸಿಗಳನ್ನು ನೆಡಲಾಗಿದ್ದು, ಇನ್ನೂ ಮುನ್ನೂರು ವಿವಿಧ ಪ್ರಭೇದಗಳ ಸಸಿಗಳನ್ನು ಸೇರಿಸಲಾಗುವುದು ಎಂಬ ಮಾಹಿತಿ ಇದೆ. ಇನ್ನು ಮೂರರಿಂದ ನಾಲ್ಕು ವರ್ಷಗಳ ನಂತರ ಪ್ರವಾಸಿಗರ ವೀಕ್ಷಣೆಗೆ ಮಿನಿ ಪಶ್ಚಿಮಘಟ್ಟ ಲಭ್ಯವಾಗಲಿದೆ ಎಂದಿರುವ ಅಧಿಕಾರಿಗಳು, ಕರ್ನಾಟಕದ ಏಳು ಜಿಲ್ಲೆಗಳಿಂದ ಸಸ್ಯ ಪ್ರಭೇದಗಳನ್ನು ಸಂಗ್ರಹಿಸಿದ್ದಾರೆ. ಸಸ್ಯ ಸಂಶೋಧನೆ, ಶಾಲಾ ಪ್ರವಾಸ ಮತ್ತು ಪಶ್ಚಿಮಘಟ್ಟಗಳಿಗೆ ಪ್ರವಾಸ ಹೋಗಲು ಸಾಧ್ಯವಾಗದೇ ಇರುವವರಿಗೆಲ್ಲ ಇದರಿಂದ ಬಹಳಷ್ಟು ಅನುಕೂಲವಾಗಲಿದೆ.

ಸಸ್ಯಗಳನ್ನು ಸಂಗ್ರಹಿಸಲು ರಾಜ್ಯದಾದ್ಯಂತ ಇರುವ ಸಸ್ಯತಜ್ಞರು, ಅರಣ್ಯ ಅನ್ವೇಷಕರು ಸಂಶೋಧನಾ ಕೇಂದ್ರ ಮತ್ತು ಖಾಸಗಿ ಸಸ್ಯ ಮಾರಾಟಗಾರರನ್ನು ಸಂಪರ್ಕಿಸಿದ್ದು, ಒಟ್ಟುಮಾಡಿರುವ ಪ್ರಭೇದಗಳ ಪೈಕಿ 39 ಅಳಿವಿನಂಚಿಗೆ ಸರಿದವುಗಳಾಗಿವೆ. ಹಣಿಗೆರೆ, ರಾಮಪತ್ರೆ, ಮುಳ್ಳುಸಂಪಿಗೆ, ಮುರುಗನಹುಳಿ, ಹೊಳೆಗೇರು, ಉಪ್ಪಾಗೆಮರ, ಸಾಲುಧೂಪ, ಕಿರಾಲುಭೋಗಿ ಮರಗಳು ವೀಕ್ಷಕರಿಗೆ ಪಶ್ಚಿಮಘಟ್ಟದ ಸಸ್ಯ ವೈವಿಧ್ಯವನ್ನು ಪರಿಚಯಿಸಲಿವೆ.

ಪಶ್ಚಿಮಘಟ್ಟದ ವಾತಾವರಣವೆಂದರೆ ಮಳೆ, ತೇವಾಂಶದ ಹದವಾದ ಮಿಶ್ರಣ. ಅದನ್ನು ಬೆಂಗಳೂರಿನ ಚಿಕ್ಕದೊಂದು ಭಾಗದಲ್ಲಿ ಕೃತಕವಾಗಿ ನಿರ್ಮಿಸುವುದು ಸಾಹಸದ ಕೆಲಸವೇ ಸರಿ. ಪಶ್ಚಿಮಘಟ್ಟ ಪ್ರದೇಶದ ವಾತಾವರಣದ ಸ್ಥಾಪನೆಗಾಗಿ 60 ಮಳೆ ಬಂದೂಕುಗಳನ್ನು (ರೇನ್‌ಗನ್) ಅಳವಡಿಸಲಾಗಿದೆ. ಮಳೆ ವಾತಾವರಣ ಇರುವಂತೆ ಮಾಡಲು ದಿನವಿಡೀ ಸಣ್ಣ ಸಣ್ಣ ಸಮಯಾಂತರಗಳಲ್ಲಿ ಸಸ್ಯಗಳಿಗೆ ನೀರುಣಿಸಲಾಗುತ್ತದೆ. ನಿರಂತರ ನೀರಿನ ಲಭ್ಯತೆಗಾಗಿ ಪ್ರತ್ಯೇಕ ಕೊಳವೆಬಾವಿಯನ್ನೂ ಕೊರೆಯಲಾಗಿದೆ. ಒಂದೊಂದು ಪ್ರಭೇದದ ತಲಾ ಮೂರು ಸಸಿಗಳನ್ನು ನೆಡಲಾಗಿದ್ದು, ಈಗ ಅವು 3ರಿಂದ 4 ಅಡಿ ಎತ್ತರ ಬೆಳೆದಿವೆ.



ಲಾಲ್‌ಬಾಗ್ ಸಸ್ಯತೋಟದಲ್ಲಿರುವ ಕೆಲವು ಮರಗಳು 200 ವರ್ಷಗಳಷ್ಟು ಹಳೆಯವು. ಅಪರೂಪದ ಸಸ್ಯಗಳನ್ನು ನೆಟ್ಟಿರುವುದಲ್ಲದೆ ಮುಂದಿನ ದಿನಗಳಲ್ಲಿ ಇವುಗಳನ್ನು ರಾಜ್ಯದ ಬೇರೆ ಬೇರೆ ಜಾಗಗಳಿಗೆ ಪ್ರಸರಣ ಮಾಡುವ ಉದ್ದೇಶವೂ ತೋಟಗಾರಿಕಾ ಅಧಿಕಾರಿಗಳಿಗೆ ಇದೆ.

ವಿಶ್ವದ ಹದಿನೆಂಟು 'ಜೀವಿವೈವಿಧ್ಯದ ಹಾಟ್‌ಸ್ಪಾಟ್'ಗಳಲ್ಲಿ ಒಂದು ಎಂದು ಪ್ರಸಿದ್ಧವಾಗಿರುವ ಪಶ್ಚಿಮಘಟ್ಟದ ತುಣುಕೊಂದು ಬೆಂಗಳೂರು ನಗರದ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಇಣುಕಲಿದೆ. ಬೆಂಗಳೂರಿನ 'ಪಶ್ಚಿಮಘಟ್ಟ'ದಲ್ಲಿ ಸಹ್ಯಾದ್ರಿ ಪರ್ವತಶ್ರೇಣಿ ಮಾದರಿಯ ಬೆಟ್ಟ ಗುಡ್ಡಗಳಿರುವಂತೆ ಭೂ ವಿನ್ಯಾಸ ಮಾಡಲಾಗುತ್ತದೆಯೇ ಎಂಬ ಕುರಿತು ವಿವರಗಳಿಲ್ಲ. ಪಶ್ಚಿಮಘಟ್ಟಗಳಲ್ಲಿ ಬರೀ ಸಸ್ಯ ಪ್ರಭೇದಗಳಿಲ್ಲ. ಅಲ್ಲಿನ ಶೋಲಾ, ಹುಲ್ಲುಗಾವಲು, ಕುರುಚಲು ಕಾಡಿನ ಅರಣ್ಯಗಳಲ್ಲಿ ಅಸಂಖ್ಯ ಪ್ರಾಣಿ- ಪಕ್ಷಿ– ಪಾತರಗಿತ್ತಿ, ಕಾಟಿ ಹಾವು, ಹುಲಿ, ಹೆಬ್ಬಳಿಲು, ಹಲ್ಲಿಗಳೆಲ್ಲ ನೆಲೆ ನಿಂತಿವೆ. ಜೀವನದಿಗಳು ಹುಟ್ಟಿ ಹರಿಯುತ್ತಿವೆ. ಇವೆಲ್ಲವನ್ನೂ ಪ್ರತಿಬಿಂಬಿಸುವ ಘಟ್ಟ ಪ್ರದೇಶದ ಮಾದರಿಯೊಂದು ರಾಜಧಾನಿಯಲ್ಲಿದ್ದರೆ 'ಗಾರ್ಡನ್ ಸಿಟಿ' ಎಂಬ ಖ್ಯಾತಿಯ ಬೆಂಗಳೂರಿಗೆ ಮತ್ತಷ್ಟು ಮೆರುಗಲ್ಲವೆ?

ವಾಚಕರ ವಾಣಿ

ಶಾಸಕರಿಂದ ಪ್ರಚೋದನೆ: ಸಲ್ಲದ ನಡೆ

'ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರುವವರ ಮನೆಗೆ ಬೆಂಕಿ ಹಚ್ಚುತ್ತೇವೆ' ಎಂದು ತಮ್ಮ ಬಳಿ ಅಹವಾಲು ಹೇಳಿಕೊಂಡ ಮಹಿಳೆಯರಿಗೆ, 'ಆಯಿತು ಹಾಗೇ ಮಾಡಿ' ಎಂದು ಚಿತ್ರದುರ್ಗದ ಶಾಸಕ ಕೆ.ಸಿ. ವೀರೇಂದ್ರ ಅವರು ಹೇಳಿದ್ದಾರೆ ಎನ್ನಲಾದ ಸುದ್ದಿ (ಪ್ರ.ವಾ., ಆ. 7) ಓದಿ ಆಶ್ಚರ್ಯ ಆಯಿತು. ಕ್ಷೇತ್ರದ ಶಾಸಕರ ಬಳಿ ಜನರು ತಮ್ಮ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೂರಾರು ಬಗೆಯ ದೂರುಗಳನ್ನು ಸಲ್ಲಿಸುವುದು ವಾಡಿಕೆ ಹಾಗೇ, ಅಕ್ರಮ ಮದ್ಯ ಮಾರಾಟಗಾರರ ವಿರುದ್ಧ ಮಹಿಳೆಯರು ನೀಡಿದ ದೂರಿಗೆ ಪ್ರತಿಯಾಗಿ ಶಾಸಕರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೌಜನ್ಯದಿಂದ ಉತ್ತರಿಸಬೇಕಿತ್ತು. ಅದು ಬಿಟ್ಟು ಬೆಂಕಿ ಹಚ್ಚುವಂತೆ ಪ್ರಚೋದನೆ ನೀಡುವುದು ಎಷ್ಟು ಸರಿ? ಸಮಸ್ಯೆ ಪರಿಹಾರಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಹಲವು ಮಾರ್ಗಗಳಿವೆ. ಅಕ್ರಮ ಮದ್ಯ ಮಾರಾಟ ಯಾವ ವಿಧದಲ್ಲೂ ಸಮರ್ಥನೀಯವಲ್ಲ. ಆದರೆ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾಯಕರು ಈ ರೀತಿ ಜನರಿಗೆ ಪ್ರಚೋದನೆ ನೀಡುವುದಾದರೆ, ಅಬಕಾರಿ ಇಲಾಖೆ, ಪೊಲೀಸ್ ಇಲಾಖೆ, ನ್ಯಾಯಾಂಗ ವ್ಯವಸ್ಥೆ ಇರುವುದಾದರೂ ಏತಕ್ಕೆ?

ಇದೇ ಶಾಸಕರು ಒಂದು ವಾರದ ಹಿಂದೆ, ಹಾಸ್ಟೆಲ್‌ನಲ್ಲಿ ವಾರ್ಡನ್ ಕಳಪೆ ಆಹಾರ ನೀಡುತ್ತಿದ್ದಾರೆ ಎಂದು ದೂರು ನೀಡಿದ ವಿದ್ಯಾರ್ಥಿಗಳಿಗೆ, 'ಹುಳ ಇರುವ ಅನ್ನ ನೀಡುವ ಹಾಸ್ಟೆಲ್ ವಾರ್ಡನ್‌ನನ್ನು ರೂಮಿನಲ್ಲಿ ಕೂಡಿಹಾಕಿ, ಹುಳ ತಿನ್ನಿಸಿ ಹೊಡೆಯಿರಿ' ಎಂದು ಸಲಹೆ ನೀಡಿದ್ದು ಕೂಡ ಪತ್ರಿಕೆಯಲ್ಲಿ ವರದಿಯಾಗಿತ್ತು. ಶಾಸಕರ ಇಂತಹ ಪ್ರಚೋದನೆಯಿಂದ, ಬಿಸಿರಕ್ತದ ಯುವಕರು ವಾರ್ಡನ್ ಮೇಲೆ ಹಲ್ಲೆ ನಡೆಸಿ, ಆ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣವೇನಾದರೂ ದಾಖಲಾದರೆ, ವಿದ್ಯಾರ್ಥಿಗಳು ಓದುವುದನ್ನು ಬಿಟ್ಟು ಪೊಲೀಸ್ ಠಾಣೆ ಮತ್ತು ಕೋರ್ಟಿಗೆ ಅಲೆಯಬೇಕಾಗುತ್ತದೆ. ಅಂತಹ ವಿದ್ಯಾರ್ಥಿಗಳನ್ನು ಜನರು ಸಮಾಜಘಾತುಕರು ಎಂದು ಭಾವಿಸುವುದಿಲ್ಲವೇ? ಜನಪ್ರತಿನಿಧಿಗಳು ಅಧಿಕಾರದ ಅಹಮಿನಲ್ಲಿ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಬೇಕು. ಯುವಕರು, ಸಂತ್ರಸ್ತರಿಗೆ ಪ್ರಚೋದನೆ ನೀಡುವುದು ಸುಲಭ. ಆದರೆ ಅದರ ಪರಿಣಾಮ ಎದುರಿಸುವುದು ಬಹಳ ಕಷ್ಟ ಎಂಬುದನ್ನು ಮರೆಯಬಾರದು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಮದ್ರಾಸ್ ಐ?!

ತುಂಬಿರಲಿ
ತುಂಬದಿರಲಿ
ತುಂಬುತಿರಲಿ
ಆ ಕಣ್ಣು ಸದಾ
ನಮ್ಮ 'ಕೆಆರ್‌ಎಸ್'
ಮೇಲೆಯೇ!

ಮ.ಗು.ಬಸವಣ್ಣ
ನಂಜನಗೂಡು

ಭಾಷೆ ಮೀರಿದ ಆಕರ್ಷಣೆ

ತೆಲಂಗಾಣದ ಕ್ರಾಂತಿಕಾರಿ ಗಾಯಕ, ಹೋರಾಟಗಾರ ಗದ್ದರ್ 2003ರಲ್ಲಿ ಮಹಾಲಿಂಗಪುರದಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಅದೇ ದಿನ ಸಾಯಿಬಾಬಾ ದರ್ಶನಕ್ಕೆ ತೆರಳಿದ್ದರು. ಇದನ್ನು ಖಂಡಿಸಿ ಹಾಡುವ ಮೂಲಕ ಗದ್ದರ್ ತಮ್ಮ ಭಾಷಣ ಆರಂಭಿಸಿದ್ದರು.

ಅವರು ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಮಿಶ್ರಣ ಮಾಡಿ ಸುಮಾರು ಒಂದು ಗಂಟೆ ಮಾತನಾಡಿದರು. ಅವರ ಇಡೀ ಭಾಷಣ ಅವರ ಭಾಷೆಗಿಂತ ಹೆಚ್ಚಾಗಿ ಅಭಿನಯದಿಂದ ಎಲ್ಲರಿಗೂ ಅರ್ಥವಾಯಿತು. 'ನಾನು ಹೇಳುವ ವಿಧಾನ ಮುಖ್ಯ. ಭಾಷೆ ಯಾವುದೇ ಇರಲಿ ಎಲ್ಲರಿಗೂ ಅರ್ಥವಾಗುತ್ತದೆ' ಎಂದಿದ್ದರು. ಬಸವಣ್ಣನ ವಚನಗಳನ್ನು ತುಂಬ ಸೊಗಸಾಗಿ ವಿಶ್ಲೇಷಿಸಿದ್ದರು. ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಕವಿ ವರವರರಾವ್ ಅವರ ಕವನಗಳನ್ನೂ ಗದ್ದರ್ ಹಾಡಿದ್ದರು. ಗದ್ದರ್ ಅವರ ಭಾಷಣ ಮತ್ತು ಅಭಿನಯ ತುಂಬಾ ಆಕರ್ಷಕವಾಗಿತ್ತು. ಹೀಗೆ ಸಹಜವಾಗಿ ಜನರನ್ನು ಸೆಳೆಯುತ್ತಿದ್ದ ಗದ್ದರ್, ಈಗ ನೆನಪು ಮಾತ್ರ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಮಟ್ಕಾ ದಂಧೆಗೆ ಬೀಳಲಿ ಕಡಿವಾಣ

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕು ಹಿಂದೊಮ್ಮೆ ಕರ್ನಾಟಕದ ಬಾರ್ಡೋಲಿ (ಸ್ವಾತಂತ್ರ್ಯ ಹೋರಾಟಗಾರರ ನಾಡು) ಎಂದು ಪ್ರಸಿದ್ಧವಾಗಿತ್ತು. ಆದರೀಗ ಅಕ್ಷರಶಃ ಜೂಜಾಟವಾದ ಮಟ್ಕಾ ಆಟಕ್ಕೆ ಕುಖ್ಯಾತಿ ಪಡೆದಿದೆ. ಈ ಆಟ ಆಡುವುದರಿಂದ ಸಾವಿರಾರು ಸಂಸಾರಗಳು ನೆಮ್ಮದಿ ಕಳೆದುಕೊಳ್ಳುತ್ತಿವೆ. ಈ ಹಿಂದಿನ ಪೊಲೀಸ್ ವರಿಷ್ಠಾಧಿಕಾರಿಯು ಈ ಮನೆಹಾಳ ಆಟವನ್ನು ತಹಬಂದಿಗೆ ತಂದಿದ್ದರು. ಆದರೆ ಅವರ ವರ್ಗಾವಣೆಯ ನಂತರ, ಈ ಆಟ ಮತ್ತೆ ಚಾಲ್ತಿಯಲ್ಲಿದೆ. ಈಗಂತೂ ಅದು ಎಲ್ಲೆ ಮೀರಿದೆ. ತಾಲ್ಲೂಕಿಗೆ ಮಾರಕವಾಗಿರುವ ಈ ಮಟ್ಕಾ ಆಟವನ್ನು ಕೊನೆಗಾಣಿಸಬೇಕು ಎಂಬುದು ಸ್ಥಳೀಯರ ಬಯಕೆ.

ಚಂದ್ರಕಾಂತ ನಾಮಧಾರಿ, ಅಂಕೋಲಾ, ಉತ್ತರ ಕನ್ನಡ

ಆತುರದ ನಿರ್ಧಾರ ಸರಿಯೇ?

ಹರಿಯಾಣದ ನೂಹ್‌ನಲ್ಲಿ ಸಂಭವಿಸಿದ ಹಿಂಸಾಚಾರದಲ್ಲಿ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಲು ಬಳಸಿಕೊಂಡಿದ್ದರು ಎನ್ನಲಾದ ಕಟ್ಟಡಗಳನ್ನು ಜಿಲ್ಲಾಡಳಿತವು ನೆಲಸಮ ಮಾಡಿರುವುದು ವರದಿಯಾಗಿದೆ (ಪ್ರ.ವಾ., ಆ. 7). ದುಷ್ಕರ್ಮಿಗಳಿಗೆ ಶಿಕ್ಷೆ ವಿಧಿಸಿ. ಆದರೆ ಸೇಡಿನ ಕ್ರಮವಾಗಿ ಕಟ್ಟಡ ಕೆಡಹುವುದರಲ್ಲಿ ಅರ್ಥವಿಲ್ಲ. ಆ ಕಟ್ಟಡ ನಿರ್ಮಾಣದ ಹಿಂದೆ ಎಷ್ಟೋ ಜನರ ಶ್ರಮ ಇರುತ್ತದೆ. ಕೆಲವೊಮ್ಮೆ ತಮ್ಮ ಜೀವನದ ದುಡಿಮೆಯ ಹಣವನ್ನೆಲ್ಲಾ ಅದರ ನಿರ್ಮಾಣಕ್ಕೆ ಹಾಕಿರುತ್ತಾರೆ. ಆದ್ದರಿಂದ ಸಾವಧಾನದಿಂದ ಪರಿಶೀಲನೆ ನಡೆಸಿ, ಅಕ್ರಮ ಇದ್ದರೆ ನೋಟಿಸ್ ಜಾರಿ ಮಾಡಿದ ಬಳಿಕ ಕಾನೂನು ರೀತ್ಯ ಕ್ರಮ ಕೈಗೊಳ್ಳುವುದು ಒಳ್ಳೆಯದು.

ತಿಮ್ಮರಾಜು ಎಸ್.ಆರ್., ದಾವಣಗೆರೆ

ನೆರವಿಗೆ ಮನವಿ

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಗೌಡಗೆರೆ ಗ್ರಾಮದವಳಾದ ನನಗೆ, ಮೂರು ವರ್ಷಗಳ ಹಿಂದೆ ಹೆರಿಗೆಯ ಸಂದರ್ಭದಲ್ಲಿ ಎರಡೂ ಕಿಡ್ನಿಗಳು ನಿಷ್ಕ್ರಿಯವಾಗಿವೆ. ಹೀಗಾಗಿ, ಈವರೆಗೆ ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದ 26 ವರ್ಷದ ನನಗೆ, ಕಿಡ್ನಿ ದಾನ ಮಾಡಲು 46 ವರ್ಷದ ನನ್ನ ತಾಯಿ ಗಂಗಮ್ಮ ಮುಂದೆ ಬಂದಿದ್ದಾರೆ. ಇದಕ್ಕೆ ಅಂದಾಜು ₹ 5 ಲಕ್ಷ ವೆಚ್ಚವಾಗುವುದೆಂದು ವೈದ್ಯರು ತಿಳಿಸಿದ್ದಾರೆ. ತವರು ಮನೆ ಹಾಗೂ ಗಂಡನ ಮನೆ ಎರಡೂ ಬಡಕುಟುಂಬಗಳಾಗಿದ್ದು, ಕಿಡ್ನಿ ಜೋಡಣೆಗೆ ಅಗತ್ಯವಾದ ಮೊತ್ತವನ್ನು ಭರಿಸುವ ಶಕ್ತಿ ಇಲ್ಲ. ಹೀಗಾಗಿ ದಾನಿಗಳು ದಯಮಾಡಿ ಅಗತ್ಯ ನೆರವು ನೀಡಿ ನನಗೆ ಬದುಕು ನೀಡಬೇಕೆಂದು ಕೋರುತ್ತೇನೆ. ಮೊಬೈಲ್ ಸಂಖ್ಯೆ: 72047 43295, ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್, ನಗನೂರು ಶಾಖೆ, ಸುರಪುರ ತಾಲ್ಲೂಕು, ಖಾತೆ ಸಂಖ್ಯೆ– 11038101038338, IFSC- PKGB0011038

ಲಕ್ಷ್ಮಿ, ಗೌಡಗೆರೆ, ಸುರಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಣಿಪುರ ಹಿಂಸೆ: ಸಂಸತ್ತಿನಲ್ಲಿ ಚರ್ಚೆ ಸಂಕ್ಷಿಪ್ತವೇ, ವಿಸ್ತೃತವೇ?

ಮಣಿಪುರದಲ್ಲಿನ ಹಿಂಸಾಚಾರ ಕುರಿತು ರಾಜ್ಯಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿದಿವೆ. ಈ ಬಗ್ಗೆ ಚರ್ಚೆಗೆ ಸಿದ್ಧವಿದ್ದೇವೆ ಎಂದು ಸರ್ಕಾರವೂ ಹೇಳುತ್ತಿದೆ. ಚರ್ಚೆಗೆ ವಿರೋಧ ಪಕ್ಷಗಳು ಮತ್ತು ಸರ್ಕಾರವೂ ಸಿದ್ಧವಿದ್ದರೂ ಚರ್ಚೆ ನಡೆಯುತ್ತಿಲ್ಲ. ಸರ್ಕಾರವು ಚರ್ಚೆಗೆ ಬರುತ್ತಿಲ್ಲ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ವಿರೋಧ ಪಕ್ಷಗಳು ಚರ್ಚೆಗೆ ಸಿದ್ಧವಿಲ್ಲ, ಅವರಿಗೆ ಚರ್ಚೆ ಬೇಕಾಗಿಲ್ಲ ಎಂದು ಸರ್ಕಾರವು ಆರೋಪಿಸುತ್ತಿದೆ. ಆದರೆ, ವಿರೋಧ ಪಕ್ಷಗಳು ಕೇಳುತ್ತಿರುವ ಚರ್ಚೆಯ ಸ್ವರೂಪಕ್ಕೂ ಸರ್ಕಾರ ನಡೆಸಲು ಸಿದ್ಧವಿರುವ ಚರ್ಚೆಯ ಸ್ವರೂಪಕ್ಕೂ ಬಹಳ ವ್ಯತ್ಯಾಸವಿದೆ

ಪ್ರಜಾವಾಣಿ ವಾರ್ತೆ



ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರ ಹಿಂಸಾಚಾರದ ಬಗ್ಗೆ ಸಂಸತ್ತಿನಲ್ಲಿ ಮಾತನಾಡಬೇಕು ಮತ್ತು ಸರ್ಕಾರವು ಆ ಬಗ್ಗೆ ವಿಸ್ತೃತ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಈ ಅಧಿವೇಶನದ ಮೊದಲ ದಿನದಿಂದಲೂ ಆಗ್ರಹಿಸುತ್ತಲೇ ಇವೆ. ಹೀಗಾಗಿ 11 ದಿನಗಳವರೆಗೆ ಒಂದು ದಿನವೂ ಉಭಯ ಸದನಗಳಲ್ಲಿ ಕಲಾಪ ಸುಗಮವಾಗಿ ನಡೆದಿಲ್ಲ. ಮಣಿಪುರದಲ್ಲಿ ಹಿಂಸಾಚಾರ ಆರಂಭವಾಗಿ 90 ದಿನಗಳೇ ಕಳೆದಿವೆ. ಹೀಗಾಗಿ ಈ ಬಗ್ಗೆ ವಿಸ್ತೃತವಾದ ಚರ್ಚೆ ಅಗತ್ಯವಿದೆ ಎಂಬುದು ವಿರೋಧ ಪಕ್ಷಗಳ ಆಗ್ರಹ. ಈ ಚರ್ಚೆಯನ್ನು ರಾಜ್ಯಸಭಾ ಪ್ರಕ್ರಿಯಾ ಕೈಪಿಡಿಯ 267ನೇ ನಿಯಮದ ಅಡಿಯಲ್ಲಿ ನಡೆಸಬೇಕು ಎಂಬುದು ವಿರೋಧ ಪಕ್ಷಗಳ ಒತ್ತಾಯ.

ಹೀಗಾಗಿ ಈ ನಿಯಮದ ಅಡಿ ಚರ್ಚೆ ನಡೆಸಬೇಕು ಎಂದು ವಿರೋಧ ಪಕ್ಷಗಳ ಹಲವು ನಾಯಕರು ನೋಟಿಸ್ ನೀಡಿದ್ದಾರೆ. ಆದರೆ, ಈ ಅಧಿವೇಶನದಲ್ಲಿ 267ನೇ ನಿಯಮದ ಅಡಿ ನೀಡಿರುವ ಎಲ್ಲಾ ನೋಟಿಸ್‌ಗಳನ್ನು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ವಜಾ ಮಾಡಿದ್ದಾರೆ. ಸರ್ಕಾರವು 176ನೇ ನಿಯಮದ ಅಡಿಯಲ್ಲಿ ಚರ್ಚೆ ನಡೆಸಲು ಸಿದ್ದವಿದೆ ಎಂದು ಸಭಾಪತಿ ಧನಕರ್ ತಿಳಿಸಿದ್ದರು. ಆದರೆ, ಆ ಪ್ರಸ್ತಾವವನ್ನು ವಿರೋಧ ಪಕ್ಷಗಳು ತಿರಸ್ಕರಿಸಿದ್ದವು.

ದೇಶದಲ್ಲಿನ ಯಾವುದಾದರೂ ಅಸಾಧಾರಣ ಪರಿಸ್ಥಿತಿ/ಬೆಳವಣಿಗೆ ಮತ್ತು ಸಾರ್ವಜನಿಕ ಮಹತ್ವದ ವಿಚಾರವನ್ನು ಕಲಾಪದ ಮಧ್ಯೆಯೇ ತುರ್ತಾಗಿ ಚರ್ಚೆಗೆ ಎತ್ತಿಕೊಳ್ಳಲು ಈ ಎರಡೂ ನಿಯಮಗಳಲ್ಲಿ ಅವಕಾಶವಿದೆ. 267ನೇ ನಿಯಮದ ಅಡಿಯಲ್ಲಿ ಚರ್ಚೆ ನಡೆಸುವುದಕ್ಕೂ 176ನೇ ನಿಯಮದ ಅಡಿಯಲ್ಲಿ ಚರ್ಚೆ ನಡೆಸುವುದಕ್ಕೂ ಬಹಳ ವ್ಯತ್ಯಾಸವಿದೆ. ಈ ವ್ಯತ್ಯಾಸವೇ ವಿರೋಧ ಪಕ್ಷಗಳ ಮತ್ತು ಆಡಳಿತ ಪಕ್ಷಗಳ ನಡುವಣ ಜಟಾಪಟಿಗೆ ಕಾರಣವಾಗಿದೆ.

ವಿಸ್ತೃತ ಚರ್ಚೆಗೆ ಅವಕಾಶ: 267ನೇ ನಿಯಮದ ಅಡಿಯಲ್ಲಿ ಯಾವುದೇ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳಲು, ಸದನದ ಕಲಾಪವನ್ನು ದಿನದಮಟ್ಟಿಗೆ ನಿಲ್ಲಿಸಬಹುದು. ಮತ್ತು ಆ ವಿಷಯದ ಬಗ್ಗೆ ಚರ್ಚೆ ಮುಗಿಯುವವರೆಗೂ ಚರ್ಚೆಯನ್ನು ನಡೆಸಬಹುದು. ಈ ನಿಯಮದ ಅಡಿಯಲ್ಲಿ ಚರ್ಚೆಯನ್ನು ಕೈಗೆತ್ತಿಕೊಂಡರೆ, ಹಲವು ಸದಸ್ಯರು ಆ ಬಗ್ಗೆ ಮಾತನಾಡಲು ಅವಕಾಶ ದೊರೆಯುತ್ತದೆ. ಜತೆಗೆ ಸರ್ಕಾರವು ಆ ಬಗ್ಗೆ ವಿಸ್ತೃತವಾದ ವಿವರಣೆಗಳನ್ನು ನೀಡಬೇಕಾಗುತ್ತದೆ. ಹೀಗಾಗಿಯೇ ಈ ನಿಯಮದ ಅಡಿಯಲ್ಲೇ ಚರ್ಚೆ ಬೇಕು ಎಂದು ವಿರೋಧ ಪಕ್ಷಗಳು ಪಟ್ಟುಹಿಡಿದಿದ್ದು ಮತ್ತು 176ನೇ ನಿಯಮದ ಅಡಿಯಲ್ಲಿ ಚರ್ಚೆ ನಡೆಸೋಣ ಎಂಬ ಸರ್ಕಾರದ ಪ್ರಸ್ತಾವವನ್ನು ತಿರಸ್ಕರಿಸಿದ್ದು.

ಕಾಲಮಿತಿಯ ಚರ್ಚೆಗೆ ಸೀಮಿತ: ಸರ್ಕಾರವು ಹೇಳುತ್ತಿರುವಂತೆ 176ನೇ ನಿಯಮದ ಅಡಿಯಲ್ಲಿ ಚರ್ಚೆ ನಡೆದರೆ, ಆ ಚರ್ಚೆ 2 ಗಂಟೆ 30 ನಿಮಿಷಗಳ ಅವಧಿಯನ್ನು ಮೀರುವಂತಿಲ್ಲ. ಜತೆಗೆ ನೋಟಿಸ್ ನೀಡಿದವರು ಮಾತನಾಡಿ ಮತ್ತು ಸಂಬಂಧಿತ ಸಚಿವರು ಮಾತ್ರ ಉತ್ತರ ನೀಡುವಲ್ಲಿಗೆ ಚರ್ಚೆಯನ್ನು ನಿಲ್ಲಿಸಲು ಸದನದ ನಿಯಮಗಳಲ್ಲಿ ಅವಕಾಶವಿದೆ. ಹೀಗಾಗಿಯೇ, 'ಮಣಿಪುರ ಹಿಂಸಾಚಾರದ ಬಗ್ಗೆ ಚರ್ಚೆ ನಡೆಸಲು ಸರ್ಕಾರಕ್ಕೆ ಇಚ್ಛೆಯಿಲ್ಲ, ಈ ಕಾರಣದಿಂದಲೇ ಸಂಕ್ಷಿಪ್ತವಾಗಿ ಚರ್ಚೆ ನಡೆಸಲು ಸಿದ್ಧವಾಗಿದೆ' ಎಂಬುದು ವಿರೋಧ ಪಕ್ಷಗಳ ಆರೋಪ.

ಅಧಿವೇಶನ ಆರಂಭವಾಗಿ 11 ದಿನಗಳವರೆಗೂ ಈ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗದೇ ಇದ್ದ ಕಾರಣ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಜತೆ ಸಚಿವರಾದ ಪೀಯೂಷ್ ಗೋಯಲ್ ಮತ್ತು ಪ್ರಲ್ಹಾದ ಜೋಶಿ ಮಾತುಕತೆ ನಡೆಸಿದರು. ಅನಂತರ 167ನೇ ನಿಯಮದ ಅಡಿಯಲ್ಲಿ ಚರ್ಚೆ ನಡೆಸಲು ವಿರೋಧ ಪಕ್ಷಗಳು ಮತ್ತು ಸರ್ಕಾರ ಒಮ್ಮತಕ್ಕೆ ಬಂದಿವೆ. 267ನೇ ಮತ್ತು 176ನೇ ನಿಯಮಗಳ ಆಯ್ದ ಅಂಶಗಳನ್ನು ಒಳಗೊಂಡಿರುವ 167ನೇ ವಿಧಿಯು ಸಂಕ್ಷಿಪ್ತ ಚರ್ಚೆ ಮತ್ತು ವಿಸ್ತೃತ ಚರ್ಚೆಗಳ ಮಧ್ಯಮ ಮಾರ್ಗವಾಗಿದೆ. ಆದರೆ, ಈ ನಿಯಮದ ಅಡಿಯಲ್ಲಿ ಚರ್ಚೆ ನಡೆಸಲು ವಿರೋಧ ಪಕ್ಷಗಳಿಗೆ ಹತ್ತಾರು ನಿರ್ಬಂಧಗಳು ಅನ್ವಯವಾಗುತ್ತವೆ.

267ನೇ ನಿಯಮ

ರಾಜ್ಯಸಭಾ ಪ್ರಕ್ರಿಯಾ ಕೈಪಿಡಿಯ 'ನಿಯಮಗಳ ಅಮಾನತು' ಭಾಗದಲ್ಲಿ 267ನೇ ನಿಯಮವನ್ನು ಸೇರಿಸಲಾಗಿದೆ. ಸಾರ್ವಜನಿಕವಾಗಿ ಅತ್ಯಂತ ಮಹತ್ವದ ವಿಚಾರವೊಂದರ ಬಗ್ಗೆ ವಿಸ್ತೃತ ಚರ್ಚೆ ನಡೆಸಲು ಅವಕಾಶ ನೀಡಿ ಎಂದು ಸದನದ ಯಾವುದೇ ಸದಸ್ಯ ಸಭಾಪತಿಯನ್ನು ಕೋರಬಹುದು. ಈ ಬಗ್ಗೆ ಅವರು ನೋಟಿಸ್ ನೀಡಬಹುದು. ಆ ನೋಟಿಸ್ ಅನ್ನು ಅನುಮೋದಿಸಿದರೆ, ಅದನ್ನು ಚರ್ಚೆಗೆ ಎತ್ತಿಕೊಳ್ಳಲು ಒಂದು ದಿನವನ್ನು ನಿಗದಿಪಡಿಸಬೇಕಾಗುತ್ತದೆ. ಮತ್ತು ಆ ದಿನ ನಡೆಯಬೇಕು ಎಂದು ಈಗಾಗಲೇ ಪೂರ್ವನಿಗದಿಯಾಗಿರುವ ಕಾರ್ಯಕಲಾಪವನ್ನು ರದ್ದುಪಡಿಸಬೇಕಾಗುತ್ತದೆ. ಈ ನಿಯಮದ ಅಡಿ ಎತ್ತಿಕೊಂಡ ಚರ್ಚೆಯಲ್ಲಿ ಹೆಚ್ಚಿನ ಸದಸ್ಯರು ಭಾಗಿಯಾಗಲು ಅವಕಾಶವಿದೆ.

176ನೇ ನಿಯಮ

ರಾಜ್ಯಸಭಾ ಪ್ರಕ್ರಿಯಾ ಕೈಪಿಡಿಯ 13ನೇ ಅಧ್ಯಾಯದಲ್ಲಿ 'ಕಡಿಮೆ ಅವಧಿಯ ಚರ್ಚೆ' ಕುರಿತ ನಿಯಮಗಳನ್ನು ಉಲ್ಲೇಖಿಸಲಾಗಿದೆ. 176ರಿಂದ 179ನೇ ನಿಯಮಗಳ ಅಡಿಯಲ್ಲಿ ಇಂತಹ ಚರ್ಚೆಗಳನ್ನು ನಿರ್ವಹಿಸಲಾಗುತ್ತದೆ.

176: ಸಾರ್ವಜನಿಕರ ಹಿತ ದೃಷ್ಟಿಯಿಂದ ಹೆಚ್ಚಿನ ಮಹತ್ವ ಪಡೆದುಕೊಂಡ ವಿಚಾರಗಳನ್ನು ಚರ್ಚಿಸಬೇಕು ಎಂದು ಸದಸ್ಯರೊಬ್ಬರು ಇಚ್ಛಿಸಿದರೆ, ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ನೋಟಿಸ್ ಅನ್ನು ಬರಹದ ರೂಪದಲ್ಲಿ ನೀಡಬೇಕು. ಮಾತನಾಡಬೇಕು ಎಂದು ಇಚ್ಛಿಸಿರುವ ವಿಷಯದ ಕುರಿತು ಈ ನೋಟಿಸ್‌ನಲ್ಲಿ ಸಂಕ್ಷಿಪ್ತವಾಗಿ ವಿವರಿಸಿರಬೇಕು. ಜೊತೆಗೆ, ಯಾಕಾಗಿ ಈ ವಿಷಯದ ಕುರಿತು ಮಾತನಾಡಲು ಅಥವಾ ಪ್ರಶ್ನಿಸಲು ಇಚ್ಛಿಸಿದ್ದಾರೆ ಎನ್ನುವ ಕುರಿತು ವಿಸ್ತೃತವಾಗಿ ಹೇಳಿರಬೇಕು. ಈ ಎಲ್ಲದರ ಜೊತೆಗೆ, ಈ ನೋಟಿಸ್‌ನಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಬೆಂಬಲಿಸಿ ಇಬ್ಬರು ಸದಸ್ಯರು ಸಹಿಯನ್ನೂ ಹಾಕಿರಬೇಕು.

177: ಸದಸ್ಯ ನೀಡಿದ ನೋಟಿಸ್ ಅನ್ನು ಪರಿಶೀಲಿಸಿದ ಸಭಾಪತಿಯು, ಆ ಸದಸ್ಯರನ್ನು ಹಾಗೂ ನೋಟಿಸ್‌ನ ವಿಷಯಕ್ಕೆ ಸಂಬಂಧಿಸಿ ಸಚಿವರಿಂದ ಸಾಕಷ್ಟು ಮಾಹಿತಿಗಳನ್ನು ಪಡೆದುಕೊಳ್ಳುತ್ತಾರೆ. ಒಂದು ವೇಳೆ ನೋಟಿಸ್‌ನಲ್ಲಿ ಪ್ರಸ್ತಾಪಿಸಿರುವ ವಿಷಯವು ಗಂಭೀರವಾಗಿದ್ದು, ಆದಷ್ಟು ಬೇಗ ಚರ್ಚೆಗೆ ಒಳಪಡಬೇಕಾದ ಅಗತ್ಯ ಇದ್ದಲ್ಲಿ ಸದನದ ನಾಯಕನೊಂದಿಗೆ ಚರ್ಚಿಸಿ ಸಭಾಪತಿಯು ಈ ನೋಟಿಸ್ ಅನ್ನು ಚರ್ಚೆಗೆ ಪರಿಗಣಿಸಬಹುದು. ಚರ್ಚೆಯ ದಿನಾಂಕವನ್ನೂ ನಿಗದಿಪಡಿಸಬಹುದು. ಈ ನಿಯಮದ ಅಡಿಯಲ್ಲಿ ನಡೆಸಲಾಗುವ ಚರ್ಚೆಯ ಅವಧಿಯು ಎರಡೂವರೆ ತಾಸನ್ನು ಮೀರಬಾರದು. ಎರಡೂವರೆ ತಾಸುಗಳ ಅವಧಿಯವರೆಗೆ ಚರ್ಚಿಸಬಹುದು ಎಂದು ಸಭಾಪತಿ ಅವರಿಗೆ ಅನ್ನಿಸಿದರೆ ಮಾತ್ರವೇ ಇಷ್ಟು ಅವಧಿಗೆ ಚರ್ಚೆ ನಡೆಸಬಹುದಾಗಿದೆ.

ನಿಗದಿಯಾದ ದಿನಾಂಕಕ್ಕಿಂತ ಮುಂಚಿತವಾಗಿ ಈ ವಿಷಯವಾಗಿ ಚರ್ಚಿಸಲು ಅನುಮತಿ ಕೋರಿದರೆ, ಸಭಾಪತಿಯು ಈ ಮನವಿಯನ್ನು ನಿರಾಕರಿಸಬಹುದು.

178: ವಿಷಯಕ್ಕೆ ಸಂಬಂಧಿಸಿದ ಸಚಿವರು ಕೂಡ ಸಂಕ್ಷಿಪ್ತವಾಗಿ ಉತ್ತರ ನೀಡಬಹುದು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಸದಸ್ಯ ಅಧಿವೇಶನದಲ್ಲಿ ಮಾತನಾಡಬೇಕು ಎಂದು ಬಯಸಿದರೆ ಆ ಸದಸ್ಯನಿಗೆ ಸಭಾಪತಿಯು ಅವಕಾಶವನ್ನು ನೀಡಬಹುದು ಅಥವಾ ನೀಡದೆಯೂ ಇರಬಹುದು.

179: ಚರ್ಚೆಯ ಅವಧಿ, ಸದಸ್ಯರ ಮಾತಿನ ಅವಧಿಯನ್ನು ಸಭಾಪತಿಯು ನಿರ್ಧರಿಸಬಹುದು

ಆಧಾರ: ರಾಜ್ಯಸಭಾ ಪ್ರಕ್ರಿಯಾ ಕೈಪಿಡಿ, ಪಿಟಿಐ

167ನೇ ನಿಯಮ

12ನೇ ಅಧ್ಯಾಯದಲ್ಲಿ 'ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಿದ ವಿಷಯಗಳ ನಿಲುವಳಿಗಳು' ವಿಷಯದ ಕುರಿತು ನಿಯಮಗಳನ್ನು ವಿವರಿಸಲಾಗಿದೆ.

167: ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಿದ ವಿಷಯಗಳ ಕುರಿತು ಚರ್ಚಿಸಲು ಸಭಾಪತಿಯ ಅನುಮತಿ ಪಡೆದುಕೊಂಡು ಮಂಡಿಸಿದ ನಿಲುವಳಿ ಕುರಿತು ಮಾತ್ರವೇ ಚರ್ಚೆಗೆ ಅವಕಾಶವಿರುತ್ತದೆ.

168: ನಿಲುವಳಿ ಮಂಡಿಸಲು ಬಯಸುವ ವಿಷಯದ ಕುರಿತ ನೋಟಿಸ್ ಅನ್ನು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗೆ ನೀಡಬೇಕು.

169: ಈ ನಿಲುವಳಿಯನ್ನು ಮಂಡಿಸಲು ಒಪ್ಪಿಗೆ ನೀಡಲು ಒಟ್ಟು 18 ಷರತ್ತುಗಳನ್ನು ವಿಧಿಸಲಾಗಿದೆ. ಈ ಷರತ್ತುಗಳಿಗೆ ಒಳಗಾಗಿದ್ದರೆ ಮಾತ್ರವೇ ಈ ನಿಲುವಳಿಯನ್ನು ಮಂಡಿಸಲು ಸಭಾಪತಿಯವರು ಅವಕಾಶ ನೀಡುತ್ತಾರೆ. ಅವು **ಇಂತಿವೆ:**

- ಒಂದೇ ವಿಷಯವಿರಬೇಕು, ಅದು ಖಚಿತವಾಗಿರಬೇಕು
- ನಿಲುವಳಿಯಲ್ಲಿ ಯಾವುದೇ ರೀತಿಯ ತೀರ್ಮಾನ ನೀಡಿರಬಾರದು, ವ್ಯಂಗ್ಯ ಮಾಡಿರಬಾರದು, ಆರೋಪ ಅಥವಾ ಮಾನಹಾನಿಕರ ಹೇಳಿಕೆ ಇರಬಾರದು
- ಯಾವುದೇ ವ್ಯಕ್ತಿಯ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತಿರಬಾರದು
- ಇತ್ತೀಚೆಗೆ ನಡೆದ ಘಟನೆಯ ಸಂಬಂಧವೇ ನಿಲುವಳಿ ಮಂಡಿಸಬೇಕು
- ಹಕ್ಕು ಬಾಧ್ಯತೆಯನ್ನು ಪ್ರಶ್ನಿಸುವಂತಿರಬಾರದು
- ಇದೇ ಅಧಿವೇಶನದ ಅವಧಿಯಲ್ಲಿ ಈಗಾಗಲೇ ಚರ್ಚಿಸಿದ ವಿಷಯದ ಮೇಲೆ ನಿಲುವಳಿ ಮಂಡಿಸಬಾರದು
- ಇದೇ ಅಧಿವೇಶನದಲ್ಲಿ ಮುಂದಿನ ದಿನಗಳಲ್ಲಿ ಚರ್ಚಿಸಲು ನಿರ್ಧರಿಸಿರುವ ವಿಷಯದ ಮೇಲೆ ನಿಲುವಳಿ ಇರಬಾರದು
- ನಿಲುವಳಿ ಮಂಡಿಸಬೇಕು ಎಂದು ಇಚ್ಛಿಸಿರುವ ವಿಷಯದ ಕುರಿತು ಭಾರತದ ಯಾವುದೇ ನ್ಯಾಯಾಲಯವು ಈಗಾಗಲೇ ತೀರ್ಪು ನೀಡಿದ್ದರೆ, ಆ ವಿಷಯದ ಕುರಿತು ನಿಲುವಳಿ ಮಂಡಿಸುವಂತಿಲ್ಲ
- ಈ ನಿಲುವಳಿ ಮಂಡನೆ ಮೂಲಕ ಸದಸ್ಯರೊಬ್ಬರು ಹೇಳಿಕೆ ನೀಡಬಯಸಿದರೆ, ಆ ಹೇಳಿಕೆಯ ಪೂರ್ತಿ ಜವಾಬ್ದಾರಿಯು ಆ ಸದಸ್ಯನದ್ದೇ ಆಗಿರುತ್ತದೆ
- ಖಾಸಗಿ ಸದಸ್ಯ ಮಂಡಿಸಿದ ವಿಷಯಗಳ ಕುರಿತು ನಿಲುವಳಿ ಮಂಡಿಸಬಾರದು
- ಸಂಸದೀಯ ಸಮಿತಿಯ ಮುಂದಿರುವ ವಿಷಯಗಳ ಕುರಿತೂ ನಿಲುವಳಿ ಮಂಡಿಸಬಾರದು
- ಅಮೂರ್ತವಾದ ಕಾನೂನು ಪ್ರಶ್ನೆ ಅಥವಾ ಊಹೆ ಮೇಲಿನ ವಿಷಯಗಳ ಕುರಿತು ಅಭಿಪ್ರಾಯವನ್ನು ಮತ್ತು ಪರಿಹಾರವನ್ನು ಬಯಸುವಂತಿಲ್ಲ
- ಭಾರತ ಸರ್ಕಾರಕ್ಕೆ ನೇರವಾಗಿ ಸಂಬಂಧಪಡದ ವಿಚಾರಕ್ಕೆ ಸಂಬಂಧಿಸಿ ನಿಲುವಳಿ ಇರಬಾರದು
- ಭಾರತದ ಸರ್ಕಾರಕ್ಕೆ ನೇರವಾಗಿ ಸಂಬಂಧಿಸದ ವ್ಯಕ್ತಿ ಅಥವಾ ಸಂಸ್ಥೆ ಕುರಿತ ವಿಷಯಗಳ ಬಗ್ಗೆ ನಿಲುವಳಿ ಮಂಡಿಸಬಾರದು
- ಭಾರತದ ಸರ್ಕಾರದ ಯಾವುದೇ ಸಚಿವಾಲಯಕ್ಕೆ ಅಧಿಕೃತವಾಗಿ ಸಂಬಂಧಪಡದ ವಿಷಯಗಳ ಕುರಿತು ನಿಲುವಳಿ ಇರಬಾರದು
- ಭಾರತದ ಮಿತ್ರ ರಾಷ್ಟ್ರಗಳ ಕುರಿತ ಪ್ರಸ್ತಾಪ ಇರಬಾರದು
- ಸಚಿವ ಸಂಪುಟದಲ್ಲಿ ನಡೆಸಲಾದ ಚರ್ಚೆ ಹಾಗೂ ರಾಷ್ಟ್ರಪತಿಗೆ ನೀಡಿದ ಮಾರ್ಗದರ್ಶನ ಕುರಿತು ಚರ್ಚೆ ನಡೆಸಲು ಅನುಮತಿ ಕೇಳಬಾರದು
- ನಿಲುವಳಿ ಮಂಡಿಸಲಿರುವ ವಿಷಯವು ಕ್ಷುಲ್ಲಕವಾಗಿರಬಾರದು

170: ಈ ಎಲ್ಲಾ ಷರತ್ತುಗಳಿಗೆ ನಿಲುವಳಿಯು ಬದ್ಧವಾಗಿದೆಯೇ ಎಂದು ಸಭಾಪತಿ ನಿರ್ಧರಿಸಬೇಕು. ಈ ನಿಲುವಳಿಯನ್ನು ಇಡಿಯಾಗಿ ಅಥವಾ ಕೆಲವು ಭಾಗಗಳನ್ನಷ್ಟೇ ಚರ್ಚಿಸಬಹುದು ಎಂದು ಸಭಾಪತಿಯು ನಿರ್ಧರಿಸಬಹುದು.

171: ನಿಲುವಳಿಯನ್ನು ಮಂಡಿಸಬಹುದು ಎಂದು ಸಭಾಪತಿ ಅನುಮೋದಿಸುತ್ತಾರೆ. ಆದರೆ, ಇದರ ಚರ್ಚೆಗೆ ದಿನಾಂಕ ಗೊತ್ತು ಮಾಡಿರುವುದಿಲ್ಲ. ಆಗ ಇದನ್ನು 'ದಿನಾಂಕವನ್ನು ಇನ್ನಷ್ಟೇ ನಿಗದಿ ಮಾಡಬೇಕಿರುವ ನಿಲುವಳಿ' ಎಂಬ ತಲೆಬರಹದೊಂದಿಗೆ ತಕ್ಷಣದಲ್ಲಿ ರಾಜ್ಯಸಭೆಯ ಬುಲೆಟಿನ್‌ನಲ್ಲಿ ಉಲ್ಲೇಖಿಸಬೇಕು.

172: ಸದನದ ನಾಯಕನೊಂದಿಗೆ ಚರ್ಚಿಸಿ ಈ ನಿಲುವಳಿಯ ಮಂಡನೆಗೆ ದಿನವನ್ನು ಅಥವಾ ದಿನದ ಒಂದು ಭಾಗವನ್ನು ನಿಗದಿ ಮಾಡಬಹುದು.

ಸ್ಯಾಂಡಲ್‌ವುಡ್‌ನ 'RRR' ಹೇಳಿದ್ದೇನು?



ರಕ್ಷಿತ್, ರಾಜ್ ಹಾಗೂ ರಿಷಬ್

ಚಂದನವನದಲ್ಲಿ 'RRR' ಎಂದೇ ಹೆಸರಾದ ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ ಹಾಗೂ ರಾಜ್ ಬಿ.ಶೆಟ್ಟಿ ಮೂವರೂ ಇತ್ತೀಚೆಗೆ ಒಂದೇ ವೇದಿಕೆ ಮೇಲಿದ್ದರು. ಸಂದರ್ಭ: ರಾಜ್ ಬಿ.ಶೆಟ್ಟಿ ನಟನೆಯ 'ಟೋಬಿ' ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ. 'RRR' ಅಲ್ಲಿ ಹೇಳಿದ್ದೇನು? ಇಲ್ಲಿ ಓದಿ...

ರಾಜ್ ಬಿ.ಶೆಟ್ಟಿ

- ಈ ಸಿನಿಮಾ ಪ್ರಾರಂಭಿಸಬೇಕಾದರೆ ನಾನೊಂದು ಗುಂಡಿಯಲ್ಲಿದ್ದೆ. ಆದರೆ, ಗುಂಡಿಯಲ್ಲಿ ಬಹಳ ವಿಶ್ರಾಂತಿ ಪಡೆದ ಜೀವಕ್ಕೆ ಮೇಲೆ ಬರುವ ಸಾಮರ್ಥ್ಯ, ಶಕ್ತಿ ಹೆಚ್ಚಿರುತ್ತದೆ. ಸೋತಾಗ ಸೋಲು ಒಪ್ಪಿಕೊಳ್ಳಬೇಕು. ಆದರೆ ಸಾವು ಒಪ್ಪಿಕೊಳ್ಳುವುದಿಲ್ಲ.
- ಕ್ರಿಯೆಗೆ ಮಾತಿನ ಪ್ರತಿಕ್ರಿಯೆ ಸತ್ತುಹೋಗುತ್ತದೆ. ಆದರೆ ಈ ಪ್ರತಿಕ್ರಿಯೆ ಸಿನಿಮಾ ಮೂಲಕ ಇದ್ದಾಗ ಅದು ಸಾಯುವುದಿಲ್ಲ.
- ಯಾರು ಏನೇ ಮಾಡಲಿ, ಅವರ ಹೆಸರು ಬೇಡ. ಅವರು ಹೆಸರು ಹೇಳುವಷ್ಟು ದೊಡ್ಡವರಲ್ಲ. ಏಕೆಂದರೆ ಸಿನಿಮಾ ದೊಡ್ಡದಾಗಿದೆ ಅದಕ್ಕಾಗಿ. ಹಾಗಾಗಿ ಅವರಿಗೆ ಉತ್ತರವಾಗಿ 'ಟೋಬಿ'. ಮಾರಿ ಮಾರಿ ಮಾರಿಗೆ ದಾರಿ. ಕುರಿಯನ್ನು ಕೆಣಕಲು ಹೋಗಬೇಡಿ.
- 'ಟೋಬಿ' ಬಿಡುಗಡೆಯಾದ ಒಂದು ವಾರದಲ್ಲೇ ರಕ್ಷಿತ್ ನಟನೆಯ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಿಡುಗಡೆಯಾಗಲಿದೆ. ಎಲ್ಲರೂ ಕಾಂಪಿಟೀಷನ್ ಎನ್ನುವಾಗ ರಕ್ಷಿತ್ ನನ್ನ ಜೊತೆ ಕೂತು 'ಟೋಬಿ' ಚೆನ್ನಾಗಿದೆ ನೋಡಿ ಎನ್ನುತ್ತಾರೆ. ಇಲ್ಲಿ ಯಾವುದೇ ಸ್ಪರ್ಧೆ ಇಲ್ಲ. ಇದು ಸಹಯೋಗ. ರಕ್ಷಿತ್ ಶೆಟ್ಟಿಯ ತುಂಬಾ ದೊಡ್ಡ ಅಭಿಮಾನಿಗಳಲ್ಲಿ ನಾನೂ ಒಬ್ಬ. ರಕ್ಷಿತ್ ಯಾವಾಗ 'ಉಳಿದವರು ಕಂಡಂತೆ' ಸಿನಿಮಾ ಮಾಡಿದರೋ, ಅದರಿಂದಾಗಿ ರಾಜ್ ಬಿ.ಶೆಟ್ಟಿ ಮಂಗಳೂರು ಕನ್ನಡದ ಸಿನಿಮಾ ಮಾಡಿದ. ಸ್ಫೂರ್ತಿ ಪಡೆದವರ ಜೊತೆ ಯಾವ ಸ್ಪರ್ಧೆ?

ರಿಷಬ್ ಶೆಟ್ಟಿ

- 'ಟೋಬಿ' ಸೂಪರ್ ಡೂಪರ್ ಆಗಿದ್ದು ರಾಜ್ ಬಿ.ಶೆಟ್ಟಿ ಕಥೆಯನ್ನು ಬರೆದಾಗ. ರಾಜ್ ಅವರ ಬರವಣಿಗೆಗೆ ದೊಡ್ಡ ಅಭಿಮಾನಿ ನಾನು.
- ಮೂಗು ಚುಚ್ಚಿ ರಕ್ತ ಬರುತ್ತಿತ್ತು. ಒಳಗಡೆ ರಕ್ತ ಕುದೀತಿದೆ! ಆ ಫೀಲಿಂಗ್‌ನಲ್ಲೇ ರಾಜ್ ಸಾಹಸ ದೃಶ್ಯಗಳನ್ನು ಮಾಡಿದ್ದಾರೆ! ಅದು ವಿಲನ್‌ಗೆ ಹೊಡೆದಿದ್ದೇ ಅಲ್ಲ. ಆ ಸ್ಥಾನದಲ್ಲಿ ಬೇರೆಯವರಿದ್ದಾರೆ. ಅದು ಯಾರು ಎಂದು ರಾಜ್ ಶೆಟ್ರೇ ಹೇಳಿದರೆ ಸೂಪರ್. ಆ ರೀತಿಯ ರಕ್ತಸಿಕ್ತ ಕವಿತೆ ಅವರಿಂದ ಮೂಡಿಬಂದಿದೆ.
- ನಮ್ಮ ಜೋಡಿ ಇದೇ ಮೊದಲೇ ಬಾರಿ ಏನೂ ಜೊತೆಯಾಗುತ್ತಿಲ್ಲ. 'ಗರುಡ ಗಮನ..' ಸಿನಿಮಾವನ್ನು ರಕ್ಷಿತ್ ಪ್ರಸ್ತುತಪಡಿಸಿದ್ದ. 'ಕಾಂತಾರ' ಸಿನಿಮಾಗೆ ರಾಜ್ ನನಗೆ ಸಹಾಯ ಮಾಡಿದರು. 'ಸರ್ಕಾರಿ ಹಿರಿಯ..' ಸಿನಿಮಾದಲ್ಲೂ ಬರವಣಿಗೆಗೆ ಸಹಾಯ ಮಾಡಿದ್ದರು. ಈ ಸಹಯೋಗ ಬಹುಮುಖ್ಯ. ಚಿತ್ರರಂಗದ ಎಲ್ಲರಲ್ಲೂ ಈ ರೀತಿ ಸಹಯೋಗ ಇರಬೇಕು.

ರಕ್ಷಿತ್ ಶೆಟ್ಟಿ

- ₹18–₹25 ಲಕ್ಷ ಬಜೆಟ್‌ನ 'ಒಂದು ಮೊಟ್ಟೆಯ ಕಥೆ'ಯನ್ನು ರಾಜ್ ಹಿಟ್ ಮಾಡಿ ತೋರಿಸದರು. ಅದಕ್ಕಿಂತ 10% ಹೆಚ್ಚಿನ ಬಜೆಟ್‌ನ 'ಗರುಡ ಗಮನ..'ವನ್ನೂ ಹಿಟ್ ಮಾಡಿದರು. ಅದಕ್ಕಿಂತ ದೊಡ್ಡ ಬಜೆಟ್‌ನ 'ಟೋಬಿ' ಕೈಗೆತ್ತಿಕೊಂಡಿದ್ದಾರೆ. ಇಂಡಸ್ಟ್ರಿ ಬೆಳೆದರಷ್ಟೇ ನಾವೆಲ್ಲಾ ಬೆಳೆಯಲು ಸಾಧ್ಯ. ಈ ಇಂಡಸ್ಟ್ರಿಗೆ ಕನಿಷ್ಠ 10–15 ನಿರ್ದೇಶಕರು, ಹೀರೊಗಳು ಬೇಕು.
- ಕರ್ನಾಟಕದ ಮೂಲೆ ಮೂಲೆಯಲ್ಲೂ 'ಟೋಬಿ', 'ಹಾಸ್ಟೆಲ್ ಹುಡುಗರು' ರೀತಿಯ ತಂಡಗಳು ಬೆಳೆಯಬೇಕು. ಇವರಿಗೆ ಯಾರೂ ಗಾಡ್‌ಫಾದರ್ ಇಲ್ಲ. ಆದರೂ ಈ ಸಿನಿಮಾಗಳು ಹಿಟ್. 'ಟೋಬಿ' ಬಿಡುಗಡೆಗೆ ಕಾತರದಿಂದ ಕಾಯುತ್ತಿದ್ದೇನೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಎಷ್ಟು ಆಹ್ಲಾದಕರ ಹಾಗೂ ಸುಮಧುರವಾಗಿದೆ. ನಾವು ಮೊದಲು ಮನುಷ್ಯರು. ಬಾಕಿದ್ದೆಲ್ಲ ಕಾಲ್ಪನಿಕ. ಒಬ್ಬರು ಕುಕಿ ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಇನ್ನೊಬ್ಬರು ಮೈತೇಯಿ ಸಮುದಾಯಕ್ಕೆ ಸೇರಿದವರು. ಇದು ವೈವಿಧ್ಯ ಹಾಗೂ ಪ್ರೀತಿಯ ಸೌಂದರ್ಯ' ಎಂದು ಖ್ಯಾತ ವಕೀಲ, ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಭೂಷಣ್ ಅವರು ಆ. 6ರಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಪುರುಷ ಹಾಗೂ ಮಹಿಳೆಯೊಬ್ಬರು ಹಿಂದಿ ಚಿತ್ರಗೀತೆಯೊಂದನ್ನು ಹಾಡಿರುವ ವಿಡಿಯೊ ಇದಾಗಿದ್ದು, ಪ್ರಶಾಂತ್ ಅವರು ಈ ವಿಡಿಯೊ ಜತೆಗೆ ಮೇಲಿನ ಬರಹವನ್ನು ಪೋಸ್ಟ್ ಮಾಡಿದ್ದರು. ಈ ವಿಡಿಯೊವನ್ನು 3.9 ಲಕ್ಷ ಜನರು ವೀಕ್ಷಿಸಿದ್ದರು ಹಾಗೂ ವಿಡಿಯೊಕ್ಕೆ 11 ಸಾವಿರ ಲೈಕ್ಸ್ ದೊರೆತಿತ್ತು. ಆದರೆ, ಇದು ಸುಳ್ಳು ಸುದ್ದಿ.



✓ ಈ ವಿಡಿಯೊ ಮೊದಲ ಬಾರಿಗೆ ಯೂಟ್ಯೂಬ್‌ಗೆ ಅಪ್‌ಲೋಡ್ ಆಗಿದ್ದು ಮೇ 25ರಂದು. ಇದೇ ವಿಡಿಯೊ ಟ್ವಿಟರ್‌ನಲ್ಲೂ ಇದ್ದು, ಇದನ್ನು ಶೆಕಿನಾ ಮುಖಿಯಾ ಎಂಬವರು ಅಪ್‌ಲೋಡ್ ಮಾಡಿದ್ದಾರೆ. 'ನಾನು ಹಾಗೂ ನನ್ನ ಅಪ್ಪ ಈ ಸುಂದರ ಹಾಡನ್ನು ಹಾಡಲು ಯತ್ನಿಸಿದ್ದೇವೆ' ಎಂದು ಬರೆದುಕೊಂಡಿದ್ದಾರೆ. ಪ್ರಶಾಂತ್ ಭೂಷಣ್ ಅವರ ಪೋಸ್ಟ್ ಅನ್ನು ತಮ್ಮ ಪೋಸ್ಟ್‌ನೊಂದಿಗೆ ಲಗತ್ತಿಸಿ, ಶೆಕಿನಾ ಅವರು ಸ್ಪಷ್ಟನೆಯನ್ನೂ ನೀಡಿದ್ದಾರೆ. 'ನಮಗೂ ಮಣಿಪುರಕ್ಕೂ ಯಾವುದೇ ಸಂಬಂಧವಿಲ್ಲ' ಎಂದಿದ್ದಾರೆ. 'ನಾವು ಉತ್ತರಾಖಂಡದವರು' ಎಂದು ಶೆಕಿನಾ ಅವರ ತಂದೆ ವಿಕಾಸ್ ಮುಖಿಯಾ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಈ ವಿಡಿಯೊದಲ್ಲಿ ಇರುವವರು ಮಣಿಪುರದವರು ಅಲ್ಲ. ಬದಲಿಗೆ ಉತ್ತರಾಖಂಡದ ತಂದೆ–ಮಗಳ ಜೋಡಿ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಆಗಸ್ಟ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಅಷ್ಟಮಿ ಗಂ. 27-53 ನಕ್ಷತ್ರ: ಭರಣಿ ಗಂ. 25-32 ಯೋಗ: ಗಂಡ ಗಂ. 16-41 ಕರಣ: ಬಾಲವ ಗಂ. 15-59, ಕರ್ಕಾಟಕ ಮಾಸದ 22 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2. ರಾಹುಕಾಲ : ಸಾಯಂಕಾಲ 03-00 - 04-30, ಸೂರ್ಯೋದಯ : 06-20 ಸೂರ್ಯಾಸ್ತ : 06-52 ಮುಸ್ಲಿಂ ದಿನಾಂಕ : 20 ಮೊಹರಮ್ ಅದೃಷ್ಟ ಸಂಖ್ಯೆ : 5, 12

ಮೇಷ: ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಕೋರ್ಟು ವ್ಯವಹಾರಗಳಲ್ಲಿ ಜಯ ಸಿದ್ಧಿಸಲಿದೆ.

ವೃಷಭ: ರಾಜಕೀಯದಲ್ಲಿನ ಬದಲಾವಣೆ ಲಾಭ ಪಡೆಯುವಿರಿ. ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಮನವರಿಕೆ ಮಾಡಿ ಕೊಡುವಿರಿ. ಈಶ್ವರನ ದೇವಸ್ಥಾನಕ್ಕೆ ಮನೆಯವರೊಡನೆ ಹೋಗಿ ಪ್ರಾರ್ಥನೆ ಸಲ್ಲಿಸಿ.

ಮಿಥುನ: ಆಹಾರ ಶೈಲಿಯು ಆರೋಗ್ಯ ಹದಗೆಡಲು ಕಾರಣವಾಗುತ್ತದೆ. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನವಾಗುವುದು. ನಿರೀಕ್ಷೆಗೆ ತಕ್ಕಂತೆ ಶುಭ ಕಾಲ.

ಕರ್ಕಾಟಕ: ಕೆಲಸ ಕಾರ್ಯಗಳನ್ನು ಶೀಘ್ರ ಪೂರ್ತಿಗೊಳಿಸಿಕೊಳ್ಳಲು ನಿರ್ಧಾರ ಮಾಡಿ. ಈ ದಿನ ದೊರೆತಿರುವ ಖ್ಯಾತಿ ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ. ಗೃಹದಲ್ಲಿ ಹಂತ ಹಂತವಾಗಿ ಶಾಂತಿ ಹೆಚ್ಚಲಿದೆ.

ಸಿಂಹ: ಉದ್ಯೋಗ ತ್ಯಜಿಸಿ ಹುಟ್ಟಿದ ಊರಿನಲ್ಲಿ ಕೃಷಿ ಮಾಡಲು ಯೋಚನೆ ಬರುವುದು. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನವಾಗಲಿದೆ. ಮಕ್ಕಳ ವರ್ತನೆ ಮನಸ್ಸಿಗೆ ಸಂತೋಷ ತಂದುಕೊಡಲಿದೆ.

ಕನ್ಯಾ: ನಿರೀಕ್ಷಿತ ಬೆಳವಣಿಗೆಯಿಂದ ತೃಪ್ತಿ ಹೊಂದುವಿರಿ. ವಾಹನ ವ್ಯವಹಾರಗಳಲ್ಲಿ ವಿಶೇಷ ಲಾಭ ಆಗುವುದು. ಜವಳಿ ವ್ಯಾಪಾರದ ಅಭಿವೃದ್ಧಿಗಾಗಿ ಸಹಾಯ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ತುಲಾ: ಪ್ರಯತ್ನಿಸಿದ ಕಾರ್ಯಗಳು ಗುರು-ಹಿರಿಯರ ಅನುಗ್ರಹದಿಂದ ಕೈಗೂಡುತ್ತವೆ. ಸ್ವತ್ತು ವಿವಾದಗಳಲ್ಲಿ ಜಯ ಸಿಗಲಿದೆ. ಸಂಬಂಧಿಕರ ಆಗಮನದಿಂದ ಮನೆಯಲ್ಲಿ ಸಂಭ್ರಮದ ವಾತಾವರಣ ಉಂಟಾಗುವುದು.

ವೃಶ್ಚಿಕ: ಹಳೆಯ ವಿಷಯಗಳನ್ನು ಆಗಾಗ ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ಸಾಮಾಜಿಕ ಬದುಕಿನಲ್ಲಿ ಉತ್ತಮ ಸಾಧನೆ ಮಾಡುವಿರಿ. ಸೋದರನ ಓದಿಗಾಗಿ ಖರ್ಚು ಮಾಡಬೇಕಾಗುವುದು.

ಧನು: ಮಾತಾ-ಪಿತೃಗಳಿಂದ ನಿಮ್ಮ ಆಸೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಹೊಂದುವಿರಿ. ಪರರಿಗೆ ಸಹಾಯ ಮಾಡುವ ಮನೋಭಾವದಿಂದ ಮುನ್ನಡೆ ಇರುವುದು. ಕೃಷಿ ಕಾರ್ಮಿಕರಿಗೆ ಕೆಲಸದ ಒತ್ತಡ ಉಂಟಾಗುವುದು.

ಮಕರ: ಪರೋಪಕಾರದ ಫಲವಾಗಿ ಈ ದಿನ ಬೆಟ್ಟದಂತೆ ಕಂಡು ಬಂದ ಒಂದು ಸಮಸ್ಯೆಯು ಬುದ್ಧಿವಂತಿಕೆಯಿಂದ ಮಂಜಿನಂತೆ ಕರಗಿ ಹೋಗುವುದು. ಉತ್ಸಾಹದಿಂದ ಮುಂದಿನ ಹೆಜ್ಜೆಗಳನ್ನು ಇರಿಸುವಿರಿ.

ಕುಂಭ: ಆಲಸ್ಯತನವನ್ನು ದೂರ ಮಾಡಿಕೊಳ್ಳುವುದರಿಂದ ಯಾವುದೇ ರೀತಿಯ ಸಮಸ್ಯೆಗಳು ಬರಲಾರದು. ಸಮಾಜದಲ್ಲಿ ಈಗಿನ ಕಾಲ ಘಟ್ಟಕ್ಕೆ ಸರಿಯಾದ ಸಮಾನ ಸ್ಥಾನಮಾನಗಳು ದೊರಕುವ ಪ್ರಯತ್ನವಿರಲಿ.

ಮೀನ: ವೃತ್ತಿಯ ಬದುಕಿನಲ್ಲಿ ತಪ್ಪುಗಳು ನಡೆಯುವ ಸಂಭವವು ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗುತ್ತದೆ. ಮಕ್ಕಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವಿರಿ. ಧರ್ಮ ಕಾರ್ಯಗಳಲ್ಲಿ ಭಾಗಿಯಾಗಿ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಒಂದು ಶಾಂತಿ ಮಂತ್ರ

ತಮ್ಮೆಲ್ಲ ಹಸಿವುಗಳ ತಣಿಯಿಪನಿತನ್ಯೋನ್ಯ |
ಹೊಮ್ಮುಗೌದಾರ್ಯ ಜನಜನಪದಂಗಳಲಿ ||
ಬೊಮ್ಮನೆಲ್ಲರನಾಳ್ವನಿಹನೆನುವ ನೆನಪಿನಲಿ |
ನೆಮ್ಮದಿಯ ಪಡೆಗೆ ಜಗ – ಮಂಕುತಿಮ್ಮ || 944 ||

ಪದ-ಅರ್ಥ: ತಣಿಯಿಪನಿತನ್ಯೋನ್ಯ = ತಣಿಯಿಪ (ತಣಿಸುವ) + ಅನಿತ(ಕೊಂಚ) + ಅನ್ಯೋನ್ಯ ಹೊಮ್ಮುಗೌದಾರ್ಯ = ಹೊಮ್ಮುಗೆ (ಹೊಮ್ಮಲಿ) + ಔದಾರ್ಯ,ಜನಜನಪದಗಳಲಿ = - ಜನ + ಜನಪದಗಳಲಿ(ಜನಪದಗಳಲಿ), ಬೊಮ್ಮನೆಲ್ಲರನಾಳ್ವನಿಹನೆನುವ = ಬೊಮ್ಮನು(ಪರಬ್ರಹ್ಮನು) + ಎಲ್ಲರನು + ಆಳ್ವನು + ಇಹನು(ಇದ್ದಾನೆ) + ಎನುವ, ಪಡೆಗೆ = ಪಡೆಯಲಿ.

ವಾಚ್ಯಾರ್ಥ: ಜನ ಜನಪದಗಳಲ್ಲಿ, ತಮ್ಮೆಲ್ಲರ ಹಸಿವು, ಅಪೇಕ್ಷೆಗಳನ್ನು ಅನ್ಯೋನ್ಯವಾಗಿ ತಣಿಸಿಕೊಳ್ಳುವ ಔದಾರ್ಯ ಹೊಮ್ಮಲಿ. ಭಗವಂತನು ಎಲ್ಲರನ್ನೂ ಕಾಪಾಡಲು ಇರುವನೆಂಬ ನೆನಪಿನಲ್ಲಿ, ಜಗತ್ತು ನೆಮ್ಮದಿಯನ್ನು ಪಡೆಯಲಿ.

ವಿವರಣೆ: ಪ್ರಪಂಚದಲ್ಲಿ ಸುಖ-ಸಮೃದ್ಧಿ ನೆಲೆಸುವಂತೆ ಆಶಿಸಲು ಅನೇಕ ಮಾರ್ಗಗಳಿವೆ. ಪೂಜೆ, ಭಜನೆ, ಅರ್ಚನೆ, ಜಪ, ಮಂತ್ರಪಠಣ ಹೀಗೆ ಯಾವುದಾದರೂ ಆಗಬಹುದು. ಅದರಂತೆ ಒಂದು ವಿಧಾನ ಶಾಂತಿಮಂತ್ರಗಳ ಪಠಣ. ಈ ಮಂತ್ರಗಳನ್ನು ಹೇಳುವುದರಿಂದ ಮನಸ್ಸಿಗೆ ಶಾಂತಿ ದೊರಕಿ ಹೃದಯ ವಿಶಾಲವಾಗುತ್ತದೆ. ಈ ಮಂತ್ರಗಳು ಪ್ರಪಂಚದ ಎಲ್ಲ ಜೀವಿಗಳ ಕ್ಷೇಮವನ್ನೇ ಬಯಸುತ್ತವೆ.

ಓಂ ಸಹನಾವವತು ಸಹನೌಭುನಕ್ತು |
ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು
ಮಾವಿದ್ವಷಾವಹೈ ||
ಓಂ ಶಾಂತಿ: ಶಾಂತಿ: ಶಾಂತಿ:

'ಭಗವಂತನ ಕೃಪೆ ನಮ್ಮೆಲ್ಲರನ್ನು ಜೊತೆಯಲ್ಲಿ ರಕ್ಷಿಸಲಿ, ಜೊತೆಯಲ್ಲಿ ಪೋಷಿಸಲಿ. ಜೊತೆಯಲ್ಲಿಯೇ ನಾವು ಸಮರ್ಥವಾದಕಾರ್ಯಗಳನ್ನು ಮಾಡುವಂತಾಗಲಿ. ನಮ್ಮ ಅಧ್ಯಯನ ತೇಜಸ್ವಿಯಾಗಲಿ, ನಾವು ದ್ವೇಷಿಸದೆ ಇರುವಂತಾಗಲಿ. ಎಲ್ಲೆಲ್ಲಿಯೂ ಶಾಂತಿ ನೆಲೆಸಲಿ'.

ನನ್ನ ಪ್ರಕಾರ, ಈ ಕಗ್ಗ ಕೂಡ ಯಾವ ಶಾಂತಿಮಂತ್ರಕ್ಕೂ ಕಡಿಮೆಯಿಲ್ಲದ್ದು. ಇದರಲ್ಲಿರುವುದು ಇಡೀ ಪ್ರಪಂಚಕ್ಕೆ ಕಲ್ಯಾಣವಾಗಲಿ ಎಂಬ ಆಶಯ. ಜಗತ್ತಿನಲ್ಲಿಯ ಎಲ್ಲ ಜನರು, ಜನಪದಗಳು ತಮ್ಮೆಲ್ಲ ಹಸಿವು, ಅಪೇಕ್ಷೆಗಳನ್ನು ತಣಿಸಿಕೊಳ್ಳಲಿ. ಅಲ್ಲೊಂದು ವಿಶೇಷವಾದ ಮಾತಿದೆ. ತಮ್ಮ ಅಪೇಕ್ಷೆಗಳನ್ನು ಪೂರೈಸಿಕೊಳ್ಳುವಾಗ ಅನ್ಯೋನ್ಯತೆ ಇರಲಿ. ಅಲ್ಲಿ ಔದಾರ್ಯ ಹೊಮ್ಮಲಿ. ಮತ್ತೊಬ್ಬರಿಗೆ ಹಾನಿಮಾಡಿ, ನೋವುಂಟು ಮಾಡಿ ತಣಿಸಿಕೊಂಡ ಅಪೇಕ್ಷೆ ಸಂಪೂರ್ಣ ಸ್ವಾರ್ಥ. ಇನ್ನೊಂದು ಬಹುದೊಡ್ಡ ಶ್ರದ್ಧೆಯ ಮಾತಿದೆ. ಮೇಲೆ ನಮ್ಮೆಲ್ಲರನ್ನೂ ಕಾಪಿಡುವ, ನಿಗ್ರಹಿಸುವ ಶಕ್ತಿಯೊಂದಿದೆ ಎಂಬುದು ನೆನಪಿರಲಿ. ಈ ನೆನಪು ಮನುಷ್ಯರಲ್ಲಿ ಅಹಂಕಾರ ಮೊಳೆಯದಂತೆ ನೋಡುವುದಲ್ಲದೆ, ಕಷ್ಟ ಬಂದು ಮೊಣಕಾಲೂರಿ ಕುಳಿತಾಗ, ಆ ಶಕ್ತಿ ಕಾಪಾಡುತ್ತದೆಂಬ ಭರವಸೆ ಆತ್ಮವಿಶ್ವಾಸವನ್ನು ತುಂಬುತ್ತದೆ. ಹೀಗೆ ಜಗತ್ತು ನೆಮ್ಮದಿಯನ್ನು ಪಡೆಯಲಿ ಎಂದು ಕಗ್ಗ ಆಶಿಸುತ್ತದೆ. ಪರಸ್ಪರ ಅನ್ಯೋನ್ಯತೆ ಮತ್ತು ಭಗವಂತನಲ್ಲಿ ಶ್ರದ್ಧೆ ಇವೆರಡೂ ನೆಮ್ಮದಿಯ ತಾಣಗಳು.

ಪದಬಂಧ 5404

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇಧಿಯಾಗಲು ಕೊಡುವ ಔಷಧ (4)
3.ಅಂಧರ ಶೂನ್ಯ ತೆಗೆದಾಗಿನ ತುಟಿ! (3)
4.ಜೊತೆಯಲ್ಲಿ ವಾಸಿಸುವಿಕೆ (4)
7.ಕೊತ್ತಂಬರಿ ಬೀಜ ಇಲ್ಲಿದೆ (3)
8.ಹಳೆಯದನ್ನು ಹೊಸದು ಮಾಡುವಿಕೆ (5)
10.ಮೊದಲನೇ ಸಂವತ್ಸರ (3)
12.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
14.ಬಣವೆ ಹಾಕುವಾಗ ಪಟ್ಟಿರುವ ತೊಂದರೆ (3)
15.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ಅಗಲಿಕೆ ಈ ತರಹ ಬಂದಿದೆ (3)
2.ಕನಸಲ್ಲಿರುವ ಗಲೀಜು (2)
3.ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು (7)
5.ಸಮಾಜವನ್ನು ತಿದ್ದುವುದು (7)
6. ತಂತಿಯ ವಾದ್ಯವಿಲ್ಲಿ ಉಲ್ಟಾ ಕಾಣುತ್ತಿದೆ (2)
7.ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
8.ಒಂಭತ್ತಾದರೂ ಇದು ಹೊಸದು! (2)
9.ಮನೋರಥದಲ್ಲಿರುವ ತೇರು (2)
11.ಕೊನೆಗೆ ಬರ ಬಂದಾಗ ನೋಡಿದ ಆಕಾಶ (3)
13.ಮನೋನಿಗ್ರಹ ಅಥವಾ ನೆಮ್ಮದಿ (2)

■	■	1			2	■	■	■
3			■	■	4			5
	■		■	■	■	■	■	
	■	■	6	■	■	7		
	■	8			9		■	
10			■	■		■	■	
	■	■	■	■	■	11	■	
12			13	■	■	14		
■	■	■	15				■	■

5403ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿತರಕ 3.ಸನ್ಮತಿ
5.ಮರುಕ 7.ಉಪಾಯ
8.ಕಾಲಹರಣ 11.ಸಾರಣೆ
12.ಮಲ್ಲಿಗೆ 15.ನಗರ
16.ಸಮುದಾಯ

ಮೇಲಿಂದ ಕೆಳಕ್ಕೆ:
1.ವಿಲೋಮ 2.ಕಫ
3.ಸಮಯ 4.ತಿರುಮಂತ್ರ
6.ಕಯಕಾ 7.ಉದಾಹರಣೆ
9.ಣರಮ 10.ಉಪಮಾನ
11.ಸಾವಿರ 13.ಗೆಳೆಯ
14.ಮೋಸ

ಸುಡೊಕು 5790

		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1	3				
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5789 ಸುಡೊಕು


9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಶಾಕಾಹಾರಿ ಊಟ ದುಬಾರಿ

ಮುಂಬೈ (ಪಿಟಿಐ): ಟೊಮೆಟೊ ಬೆಲೆ ಭಾರಿ ಪ್ರಮಾಣದಲ್ಲಿ ಹೆಚ್ಚಾದ ಪರಿಣಾಮವಾಗಿ ಶಾಕಾಹಾರಿ ಊಟ ಸಿದ್ಧಪಡಿಸುವ ವೆಚ್ಚವು ಜುಲೈನಲ್ಲಿ ಶೇಕಡ 28ರಷ್ಟು ಹೆಚ್ಚಾಯಿತು ಎಂದು ಕ್ರಿಸಿಲ್ ಸಂಸ್ಥೆ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಹಿಂದಿನ ವರ್ಷದ ಜುಲೈನ ಮಟ್ಟಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಊಟ ಸಿದ್ಧಪಡಿಸಲು ಬೇಕಿರುವ ವೆಚ್ಚ ಇಷ್ಟು ಹೆಚ್ಚಾಯಿತು ಎಂದು ಅದು ಹೇಳಿದೆ. ಮಾಂಸಾಹಾರಿ ಊಟ ಸಿದ್ಧಪಡಿಸುವ ವೆಚ್ಚವು ಶೇ 11ರಷ್ಟು ಹೆಚ್ಚಾಯಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,517
ಇಂದಿನ ಅಂತ್ಯ	19,597
▲	80
ದಿನದ ಗರಿಷ್ಠ	19,620

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹485

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹292-531
ದ್ವಿತಳಿ (ಬಿ.ವಿ)	₹320-635

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹147
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹124

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹960 (965)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹863 (870)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13800
ಎಸಿ	₹7140
ಆರ್‌ಪಿ	₹10200
ಆರ್‌ಸಿ	₹6230

ಬ್ಯಾಂಕ್: ವಾರದಲ್ಲಿ ಐದೇ ದಿನ ಕೆಲಸ?

ಪ್ರಜಾವಾಣಿ ವಾರ್ತೆ




ಬೆಂಗಳೂರು: ಬ್ಯಾಂಕ್ ನೌಕರರಿಗೆ ತಿಂಗಳ ಎಲ್ಲ ಶನಿವಾರವೂ ರಜೆ ನೀಡುವ ಪ್ರಸ್ತಾವಕ್ಕೆ ಇಂಡಿಯನ್ ಬ್ಯಾಂಕರ್ಸ್ ಅಸೋಸಿಯೇಷನ್ (ಐಬಿಎ) ಒಪ್ಪಿಗೆ ನೀಡಿದೆ. ಈ ಸಂಬಂಧ ಶಿಫಾರಸನ್ನು ಕೇಂದ್ರ ಹಣಕಾಸು ಸಚಿವಾಲಯಕ್ಕೆ ರವಾನಿಸಿದೆ ಎಂದು ಮೂಲಗಳು ಹೇಳಿವೆ.

ಈ ಶಿಫಾರಸು ಜಾರಿಗೆ ಬಂದರೆ, ಸೋಮವಾರದಿಂದ ಶುಕ್ರವಾರದವರೆಗೆ ಮಾತ್ರ ಬ್ಯಾಂಕ್ ಶಾಖೆಗಳಲ್ಲಿ ಸೇವೆಗಳು ಲಭ್ಯವಿರಲಿವೆ.

ಈಗ ಬ್ಯಾಂಕ್ ನೌಕರರಿಗೆ ಪ್ರತಿ ತಿಂಗಳ ಎರಡನೆಯ ಹಾಗೂ ನಾಲ್ಕನೆಯ ಶನಿವಾರ ರಜೆ ಇದೆ. ಈ ರಜೆಯನ್ನು ಎಲ್ಲ ಶನಿವಾರಗಳಿಗೂ ವಿಸ್ತರಣೆ ಮಾಡಬೇಕು ಎಂಬ ಬೇಡಿಕೆಯನ್ನು ಬ್ಯಾಂಕಿಂಗ್ ವಲಯದ ವಿವಿಧ ಕಾರ್ಮಿಕ ಸಂಘಟನೆಗಳು ಇರಿಸಿದ್ದವು.

ಜುಲೈ ತಿಂಗಳ ಕೊನೆಯಲ್ಲಿ ನಡೆದ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಐಬಿಎ ಒಪ್ಪಿದ್ದು, ಅದನ್ನು ಹಣಕಾಸು ಸಚಿವಾಲಯಕ್ಕೆ ಶಿಫಾರಸು ಮಾಡಿದೆ. ಇದಕ್ಕೆ ಹಣಕಾಸು ಸಚಿವಾಲಯ, ಕೇಂದ್ರ ಕಾರ್ಮಿಕ ಸಚಿವಾಲಯ ಸೇರಿದಂತೆ ಕೆಲವು ಸಚಿವಾಲಯಗಳ ಸಮ್ಮತಿ ಸಿಗಬೇಕಿದೆ ಎಂದು ಮೂಲಗಳು ಹೇಳಿವೆ.

ಬ್ಯಾಂಕ್‌ಗಳಿಂದ ₹14.56 ಲಕ್ಷ ಕೋಟಿ ಸಾಲ ರೈಟ್‌ಆಫ್



ನವದೆಹಲಿ (ಪಿಟಿಐ): ಕಳೆದ ಒಂಬತ್ತು ಹಣಕಾಸು ವರ್ಷಗಳಲ್ಲಿ ಬ್ಯಾಂಕ್‌ಗಳು ಒಟ್ಟು ₹14.56 ಲಕ್ಷ ಕೋಟಿ ವಸೂಲಾಗದ ಸಾಲವನ್ನು (ಎನ್‌ಪಿಎ) ರೈಟ್‌ಆಫ್ ಮಾಡಿವೆ. ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ಲೋಕಸಭೆಗೆ ಸೋಮವಾರ ಈ ಮಾಹಿತಿ ನೀಡಿದ್ದಾರೆ.

ರೈಟ್‌ಆಫ್ ಮಾಡಿರುವ ಒಟ್ಟು ಮೊತ್ತದಲ್ಲಿ ₹7.40 ಲಕ್ಷ ಕೋಟಿಯಷ್ಟು ದೊಡ್ಡ ಕೈಗಾರಿಕೆಗಳು ಮತ್ತು ಸೇವೆಗಳಿಗೆ ಸಂಬಂಧಿಸಿದ ವಸೂಲಾಗದ ಸಾಲದ ಮೊತ್ತವಾಗಿದೆ ಎಂದು ಅವರು ಹೇಳಿದ್ದಾರೆ.

2014ರ ಏಪ್ರಿಲ್‌ನಿಂದ 2023ರ ಮಾರ್ಚ್‌ವರೆಗಿನ ಅವಧಿಯಲ್ಲಿ ವಾಣಿಜ್ಯ ಬ್ಯಾಂಕ್‌ಗಳು ರೈಟ್‌ಆಫ್ ಮಾಡಿದ ಸಾಲದಲ್ಲಿ ₹2.04 ಲಕ್ಷ ಕೋಟಿ ಸಾಲವನ್ನು ವಸೂಲಿ ಮಾಡಿವೆ ಎಂದು ಮಾಹಿತಿ ನೀಡಿದ್ದಾರೆ.

ವಸೂಲಾಗದ ಸಾಲ ಕಡಿಮೆ ಮಾಡಲು ಸರ್ಕಾರ ಮತ್ತು ಆರ್‌ಬಿಐ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸರಾಸರಿ ಎನ್‌ಪಿಎ 2023ರ ಮಾರ್ಚ್ 31ರ ಅಂತ್ಯಕ್ಕೆ ₹8.96 ಲಕ್ಷ ಕೋಟಿಯಿಂದ ₹4.28 ಲಕ್ಷ ಕೋಟಿಗೆ ಇಳಿಕೆ ಕಂಡಿದೆ ಎಂದು ಹೇಳಿದ್ದಾರೆ.

ಷೇರುಪಾಲು ಹೆಚ್ಚಿಸಿಕೊಳ್ಳಲಿರುವ ವಿಜಯ ಶೇಖರ

ನವದೆಹಲಿ (ಪಿಟಿಐ): ನೆದರ್ಲೆಂಡ್ಸ್‌ನ ಆ್ಯಂಟ್‌ಫಿನ್ ಹೋಲ್ಡಿಂಗ್ಸ್ ಕಂಪನಿಯು ಪೇಟಿಎಂನಲ್ಲಿ ಹೊಂದಿದ್ದ ಶೇಕಡ 10.30ರಷ್ಟು ಷೇರುಪಾಲನ್ನು ಒನ್‌97 ಕಮ್ಯುನಿಕೇಷನ್ಸ್‌ನ ಸ್ಥಾಪಕ ವಿಜಯ ಶೇಖರ ಶರ್ಮ ಅವರು ಸ್ವಾಧೀನಪಡಿಸಿಕೊಂಡಿದ್ದಾರೆ.

ಶರ್ಮ ಅವರು ವಿದೇಶದಲ್ಲಿ ಹೊಂದಿರುವ ರಿಸೈಲೆಂಟ್ ಅಸೆಟ್ ಮ್ಯಾನೇಜ್‌ಮೆಂಟ್ ಬಿವಿ ಕಂಪನಿಯ ಮೂಲಕ ಪೇಟಿಎಂನ ಷೇರುಗಳನ್ನು ಖರೀದಿಸಲಿದ್ದಾರೆ.

ಇದಕ್ಕೆ ಬದಲಾಗಿ ರಿಸೈಲೆಂಟ್ ಕಂಪನಿಯು ಆ್ಯಂಟ್‌ಫಿನ್‌ಗೆ ಒಸಿಡಿ (ಆಪ್ಷನಲಿ ಕನ್ವರ್ಟಬಲ್ ಡಿಬೆಂಚರ್ಸ್) ನೀಡಲಿದೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2100
ಮಧ್ಯಮ	₹1500-1800
ಸಣ್ಣ	₹1000-1500

ಮುಂಬೈ ಧಾರಣೆ

ಶೇಂಗಾ

7-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	910(915)
ಪಾಮ್ ವಾರದ ಡೆಲಿವರಿ	861(868)
ಸೂರ್ಯಕಾಂತಿ ಎಣ್ಣೆ ಕಚ್ಚಾ	910(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,200 (59,250)
ಬೆಳ್ಳಿ ಕೆ.ಜಿ
71,950 (72,250)

ಆವರಣದಲ್ಲಿ ಶನಿವಾರದ ಧಾರಣೆ

ಪ್ರಯಾಣಿಕ, ದ್ವಿಚಕ್ರ ವಾಹನ ಮಾರಾಟದಲ್ಲಿ ಏರಿಕೆ: ಎಫ್‌ಎಡಿಎ

ವಾಹನ ರಿಟೇಲ್ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು ಜುಲೈನಲ್ಲಿ ಶೇಕಡ 10ರಷ್ಟು ಏರಿಕೆ ಕಂಡಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಸೋಮವಾರ ಹೇಳಿದೆ.


ಈ ವರ್ಷದ ಜುಲೈನಲ್ಲಿ 17.70 ಲಕ್ಷ ವಾಹನಗಳು ಮಾರಾಟ ಆಗಿವೆ. 2022ರ ಜುಲೈನಲ್ಲಿ 16.09 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಪ್ರಯಾಣಿಕ ವಾಹನ, ದ್ವಿಚಕ್ರ ಮತ್ತು ವಾಣಿಜ್ಯ ವಾಹನಗಳ ಮಾರಾಟ ಹೆಚ್ಚಾಗಿರುವುದೇ ಈ ಪ್ರಮಾಣದ ಬೆಳವಣಿಗೆಗೆ ಕಾರಣ ಎಂದು ಒಕ್ಕೂಟವು ತಿಳಿಸಿದೆ.

ಬೇಡಿಕೆ ಹೆಚ್ಚಾಗಿರುವುದು, ಬಿಡಿಭಾಗಗಳ ಪೂರೈಕೆಯು ಸಕಾಲಕ್ಕೆ ಆಗಿರುವುದು ಹಾಗೂ ಹೊಸ ವಾಹನಗಳನ್ನು ಬಿಡುಗಡೆ ಮಾಡಿರುವುದು ಪ್ರಭಾವ ಬೀರಿವೆ. ಹೀಗಿದ್ದರೂ ಮುಂಗಾರು ವ್ಯತ್ಯಯ ಹಾಗೂ ಉತ್ತರ ಭಾರತದಲ್ಲಿ ಪ್ರವಾಹದ ಪರಿಸ್ಥಿತಿ ಎದುರಾಗಿರುವುದು ಮಾರಾಟದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಎಂದು ಒಕ್ಕೂಟದ ಅಧ್ಯಕ್ಷ ಮನೀಶ್ ರಾಜ್ ಸಿಂಘಾನಿಯಾ ಹೇಳಿದ್ದಾರೆ.

ಎಸ್‌ಯುವಿ ವರ್ಗದ ವಾಹನಗಳು ಜುಲೈ ತಿಂಗಳಿನಲ್ಲಿಯೂ ಖರೀದಿದಾರರ ಜನಪ್ರಿಯ ಆಯ್ಕೆಯಾಗಿಯೇ ಮುಂದುವರಿದಿವೆ ಎಂದು ಅವರು ತಿಳಿಸಿದ್ದಾರೆ.

ಸವಾಲುಗಳ ನಡುವೆಯೂ ದ್ವಿಚಕ್ರ ವಾಹನ ವಿಭಾಗವು ಉತ್ತಮ ಬೆಳವಣಿಗೆ ಕಂಡಿದೆ. ಪ್ರಮುಖ ಬ್ರ್ಯಾಂಡ್‌ಗಳಿಗೆ ಬೇಡಿಕೆ ಮತ್ತು ನಂಬಿಕೆ ಹೆಚ್ಚಾಗಿದೆ ಎಂದು ಸಿಂಘಾನಿಯಾ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಅಂದಾಜು ಮಾಡಿರುವುದರಿಂದ ಗ್ರಾಮೀಣ ಭಾಗದಲ್ಲಿ ಖರೀದಿ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಆತಂಕ ಎದುರಾಗಿದೆ ಎಂದು ಒಕ್ಕೂಟವು ಹೇಳಿದೆ.



ಜಾಲಿಂ ಲೋಷನ್: ಗೋವಿಂದ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಿವುಡ್ ನಟ ಗೋವಿಂದ ಅವರು ಜಾಲಿಂ ಲೋಷನ್‌ನ ರಾಯಭಾರಿ ಆಗಿ ಕೆಲಸ ಮಾಡಲಿದ್ದಾರೆ. ಜಾಲಿಂ ಲೋಷನ್‌ಅನ್ನು ಚರ್ಮದ ಕೆಲವು ಬಗೆಯ ಸಮಸ್ಯೆಗಳಿಗೆ ಔಷಧಿಯಾಗಿ ಬಳಸಲಾಗುತ್ತದೆ ಎಂದು ಪ್ರಕಟಣೆ ಹೇಳಿದೆ.

'ಗೋವಿಂದ ಅವರನ್ನು ರಾಯಭಾರಿ ಆಗಿ ಹೊಂದುವುದಕ್ಕೆ ನಮಗೆ ಸಂತಸವಾಗುತ್ತಿದೆ. ಅವರು ನಮ್ಮ ರಾಯಭಾರಿ ಆಗುವುದಕ್ಕೆ ತಡಮಾಡದೆ ಒಪ್ಪಿದರು. ಅವರನ್ನು ರಾಯಭಾರಿ ಆಗಿ ನೇಮಕ ಮಾಡಿರುವುದರ ಪರಿಣಾಮವಾಗಿ ಉತ್ಪನ್ನವು ಇನ್ನಷ್ಟು ಯಶಸ್ಸು ಕಾಣಲಿದೆ' ಎಂದು ಈ ಔಷಧವನ್ನು ತಯಾರಿಸುವ ಓರಿಯಂಟಲ್ ಕೆಮಿಕಲ್ ವರ್ಕ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ನವೀನ್ ಝಾ ಪ್ರಕಟಣೆಯಲ್ಲಿ ಹೇಳಿದ್ದಾರೆ.



ಜಾಲಿಂ ಲೋಷನ್ ರಾಯಭಾರಿ ಗೋವಿಂದ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48000
ಕುಮಟಾ	
ಚಿಪ್ಪು	33019-36089
ಕೋಕ	22869-35019
ಫ್ಯಾಕ್ಟರಿ	15019-22849
ಹಳೆಚಾಲಿ	39809-42169
ಹೊಸಚಾಲಿ	39019-42099
ಪುತ್ತೂರು	
ಹೊಸತು	34000-45000
ಸಾಗರ	
ಬಿಳಿಗೋಟು	32709-34429
ಚಾಲಿ	35899-41299
ಕೋಕ	28161-36989
ಕೆಂಪುಗೋಟು	24899-43199
ರಾಶಿ	35899-54609
ಸಿಪ್ಪೆಗೋಟು	13499-23109
ಶಿವಮೊಗ್ಗ	
ಬೆಟ್ಟೆ	50400-53510
ಗೊರಬಲು	18100-42128
ರಾಶಿ	38019-54699
ಸರಕು	54009-80010
ಸಿದ್ದಾಪುರ	
ಬಿಳಿಗೋಟು	31899-35899
ಚಾಲಿ	38600-42799
ಕೋಕ	30019-35529
ಕೆಂಪುಗೋಟು	33819-35089
ರಾಶಿ	47809-50899
ತಟ್ಟಿಬೆಟ್ಟೆ	39699-49099
ಶಿರಸಿ	
ಬೆಟ್ಟೆ	40099-47508
ಬಿಳಿಗೋಟು	29009-37809
ಚಾಲಿ	38190-43899
ಕೆಂಪುಗೋಟು	31899-38689
ರಾಶಿ	48000-51269
ಯಲ್ಲಾಪುರ	
ಬಿಳಿಗೋಟು	26999-37499
ಚಾಲಿ	39179-43099
ಕೋಕ	21718-35109
ಕೆಂಪುಗೋಟು	32118-36306
ರಾಶಿ	48609-54209
ತಟ್ಟಿಬೆಟ್ಟೆ	38599-47899

ಬ್ರಿಟನ್: ಅಕ್ರಮ ವಲಸೆ ತಡೆಗೆ ಟೆಕ್ ಸಹಭಾಗಿತ್ವ

ಲಂಡನ್ (ಎಎಫ್‌ಪಿ): ಬ್ರಿಟನ್‌ಗೆ ಅಕ್ರಮವಾಗಿ ವಲಸೆ ಹೋಗುವುದನ್ನು ಪ್ರೋತ್ಸಾಹಿಸುವ ಆನ್‌ಲೈನ್ ಮಾಹಿತಿಗೆ ಕಡಿವಾಣ ಹಾಕಲು ಪ್ರಧಾನಿ ರಿಷಿ ಸುನಕ್ ಸರ್ಕಾರವು ಸಾಮಾಜಿಕ ಮಾಧ್ಯಮ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಘೋಷಿಸಿದೆ.

ಉತ್ತರ ಫ್ರಾನ್ಸ್‌ನಿಂದ ಬ್ರಿಟನ್‌ಗೆ ಸಮುದ್ರ ಮಾರ್ಗದಲ್ಲಿ ಸಣ್ಣ ದೋಣಿಗಳ ಮೂಲಕ ಬರುವ ವಲಸಿಗರನ್ನು ನಿಯಂತ್ರಿಸುವ ಭರವಸೆಯನ್ನು ಕನ್ಸರ್ವೇಟಿವ್ ಪಕ್ಷ ದೇಶಕ್ಕೆ ನೀಡಿದೆ. ಈ ನಿಟ್ಟಿನಲ್ಲಿ ಬ್ರಿಟನ್ ಸರ್ಕಾರ ನಡೆಸುತ್ತಿರುವ ಹಲವು ಪ್ರಯತ್ನಗಳು ವಿಫಲವಾಗಿವೆ. ಆದರೂ ಪ್ರಯತ್ನ ಮುಂದುವರಿಸಿರುವ ಸರ್ಕಾರ ಹೊಸ ಕ್ರಮಕ್ಕೆ ಮುಂದಾಗಿದೆ.

ಅಕ್ರಮ ವಲಸೆ ತಡೆಗೆ ಬ್ರಿಟನ್‌ನ 'ನ್ಯಾಷನಲ್ ಕ್ರೈಮ್ ಏಜನ್ಸಿ' ಮತ್ತು ಸಾಮಾಜಿಕ ಮಾಧ್ಯಮಗಳಾದ ಮೆಟಾ, ಟಿಕ್‌ಟಾಕ್ ಮತ್ತು ಟ್ವಿಟರ್‌ಗಳ ಜತೆಗೆ ಸಹಭಾಗಿತ್ವ ಏರ್ಪಟ್ಟಿದೆ. ವಲಸಿಗರಿಗೆ ಸುಳ್ಳು ದಾಖಲೆ ಒದಗಿಸುವ, ಗುಂಪಿನಲ್ಲಿ ಹೋಗುವವರಿಗೆ ರಿಯಾಯಿತಿ ಒದಗಿಸುವ, ಮಕ್ಕಳಿಗೆ ಸ್ಥಳಾವಕಾಶ ಕಲ್ಪಿಸುವ, ಸುರಕ್ಷಿತ ಪ್ರಯಾಣದ ಆಮಿಷವೊಡ್ಡುವ ಆನ್‌ಲೈನ್ ಮಾಹಿತಿಗಳ ವಿರುದ್ಧ ಸಹಭಾಗಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ ಎಂದು ಪ್ರಧಾನಿ ಕಚೇರಿ ಹೇಳಿದೆ.



ರಿಷಿ ಸುನಕ್

'ದೋಣಿಗಳನ್ನು (ವಲಸೆ ಬರುವವರುವನ್ನು) ತಡೆಯಬೇಕಿದ್ದರೆ ನಾವು ದುಷ್ಕರ ವ್ಯಾಪಾರ ಮಾದರಿಯನ್ನು ಮೂಲದಲ್ಲೇ ನಾಶಗೊಳಿಸಬೇಕಿದೆ' ಎಂದು ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

'ಅಮಾಯಕರು ಕಾನೂನು ಬಾಹಿರವಾಗಿ ವಲಸೆ ಹೋಗಲು ಆಮಿಷವೊಡ್ಡುವ, ಅವರ ಜೀವವನ್ನು ಅಪಾಯಕ್ಕೆ ದೂಡುವವರ ಕೃತ್ಯಗಳಿಗೆ ನಮ್ಮ ಈ ಕ್ರಮದಿಂದ ಕಡಿವಾಣ ಬೀಳಿದೆ. ದುಷ್ಕರ ವಿರುದ್ಧದ ನಮ್ಮ ಹೋರಾಟವು ಸಾಮಾಜಿಕ ಮಾಧ್ಯಮಗಳ ಸಹಭಾಗಿತ್ವದಿಂದ ಇಮ್ಮಡಿಗೊಳ್ಳಲಿದೆ' ಎಂದೂ ಸುನಕ್ ಹೇಳಿದ್ದಾರೆ.

ಆದರೆ, ಸರ್ಕಾರದ ಈ ಕ್ರಮವನ್ನು ವಿರೋಧ ಪಕ್ಷ ಲೇಬರ್ ಪಾರ್ಟಿಯ ವಕ್ತಾರ ಇವೆಟ್ ಕೂಪರ್ ಟೀಕಿಸಿದ್ದಾರೆ. 'ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ವಿಳಂಬವಾಗಿ, ಅತಿ ಚಿಕ್ಕ ಕ್ರಮಕ್ಕೆ ಮುಂದಾಗಿದೆ' ಎಂದು ಹೇಳಿದ್ದಾರೆ.

ಅಕ್ರಮ ವಲಸೆಯು ಬ್ರಿಟನ್‌ನ ಸಾರ್ವತ್ರಿಕ ಚುನಾವಣೆಯ ಚರ್ಚೆಯ ವಿಷಯವೂ ಆಗಿದೆ.

'ರಾಜತಾಂತ್ರಿಕ ಅಧಿಕಾರಿಗಳಿಗೆ ಸೂಕ್ತ ಭದ್ರತೆ'

ಟೊರಾಂಟೊ (ಪಿಟಿಐ): ದೇಶದಲ್ಲಿರುವ ಎಲ್ಲಾ ರಾಜತಾಂತ್ರಿಕ ಅಧಿಕಾರಿಗಳಿಗೆ ಸೂಕ್ತ ಭದ್ರತೆ ಒದಗಿಸಲಾಗುವುದು ಎಂದು ಕೆನಡಾದ ಸಾರ್ವಜನಿಕ ಸುರಕ್ಷತಾ ಇಲಾಖೆ ತಿಳಿಸಿದೆ.

'ಹಿಂಸೆಯನ್ನು ಪ್ರಚೋದಿಸುವುದಕ್ಕೆ ದೇಶದಲ್ಲಿ ಆಸ್ಪದ ನೀಡೆವು' ಎಂದು 'ಎಕ್ಸ್' ವೇದಿಕೆಯಲ್ಲಿ ಹೇಳಿದೆ.

ಭಾರತದ ರಾಜತಾಂತ್ರಿಕ ಅಧಿಕಾರಿಗಳಿಗೆ ಬೆದರಿಕೆಯೊಡ್ಡಿರುವ ವಿಡಿಯೊವೊಂದು ಆನ್‌ಲೈನ್‌ನಲ್ಲಿ ಹರಿದಾಡಿರುವುದಕ್ಕೆ ಸಂಬಂಧಿಸಿ ಇಲಾಖೆಯು ಈ ಹೇಳಿಕೆ ನೀಡಿದೆ. ತಿಂಗಳ ಹಿಂದೆ ಖಾಲಿಸ್ತಾನ ಪರ ಗುಂಪುಗಳು ಭಾರತದ ರಾಜತಾಂತ್ರಿಕ ಅಧಿಕಾರಿಗಳ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಆನ್‌ಲೈನ್‌ನಲ್ಲಿ ಹಂಚಿಕೊಂಡಿದ್ದವು.

ಸುಧಾ, ಮಯೂರ ಓದಿರಿ

ನೂಹ್: ಅಕ್ರಮ ಕಟ್ಟಡ ನೆಲಸಮ ಕಾರ್ಯಾಚರಣೆಗೆ ಹೈಕೋರ್ಟ್ ತಡೆ

ಚಂಡೀಗಢ (ಪಿಟಿಐ): ಹಿಂಸಾಚಾರ ನಡೆದಿದ್ದ ಹರಿಯಾಣದ ನೂಹ್‌ನಲ್ಲಿ ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸುವ ಕಾರ್ಯಾಚರಣೆಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಸೋಮವಾರ ತಡೆ ನೀಡಿದೆ.

ಈ ವಿಚಾರವನ್ನು ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಜಿ.ಎಸ್. ಸಂಧ್‌ವಾಲಿಯಾ ಅವರು, ಜಿಲ್ಲಾಡಳಿತವು ನಡೆಸುತ್ತಿರುವ ಅಕ್ರಮ ಕಟ್ಟಡಗಳ ನೆಲಸಮ ಕಾರ್ಯಾಚರಣೆಯನ್ನು ತಡೆಹಿಡಿಯುವಂತೆ ಹರಿಯಾಣ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆ.

ವಿಶ್ವ ಹಿಂದೂ ಪರಿಷತ್ ಈಚೆಗೆ ಹಮ್ಮಿಕೊಂಡಿದ್ದ ಮೆರವಣಿಗೆಯ ವೇಳೆ ಗಲಭೆಕೋರರು ಕಲ್ಲು ತೂರಾಟ ನಡೆಸಲು ಈ ಅಕ್ರಮ ಕಟ್ಟಡಗಳನ್ನು ಬಳಸಿಕೊಂಡಿದ್ದರು ಎಂದು ಆರೋಪಿಸಲಾಗಿತ್ತು.

ಅನಧಿಕೃತ ಕಟ್ಟಡಗಳನ್ನು ನೆಲಸಮಗೊಳಿಸುವ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ನೂಹ್ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಗೃಹರಕ್ಷಕ ದಳದ ಇಬ್ಬರು ಸಿಬ್ಬಂದಿ ಸೇರಿದಂತೆ ಆರು ಮಂದಿ ಈ ಗಲಭೆಯಲ್ಲಿ ಮೃತಪಟ್ಟಿದ್ದರು.

ದರ್ಗಾಕ್ಕೆ ಬೆಂಕಿ, ಪ್ರಾರ್ಥನಾ ಸಾಮಗ್ರಿ ಭಸ್ಮ (ಗುರುಗ್ರಾಮ): ಗುರುಗ್ರಾಮದ ಗ್ರಾಮವೊಂದರಲ್ಲಿ ಸೋಮವಾರ ಮುಂಜಾನೆ ಅಪರಿಚಿತ ವ್ಯಕ್ತಿಗಳ ಗುಂಪು ದರ್ಗಾಕ್ಕೆ ಬೆಂಕಿ ಹಚ್ಚಿದೆ.

ಸ್ಥಳೀಯರು ಬೆಂಕಿ ನಿಯಂತ್ರಣಕ್ಕೆ ತರುವ ಮೊದಲು ಕೆಲವು ಪ್ರಾರ್ಥನಾ ಸಾಮಗ್ರಿಗಳು ಸುಟ್ಟು ಹೋಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ನೂಹ್ ಜಿಲ್ಲೆಯಲ್ಲಿ ಪ್ರಾರಂಭವಾದ ಕೋಮು ಗಲಭೆ ಹತ್ತಿರದ ಪ್ರದೇಶಗಳಿಗೆ ಹರಡಿದ ಹಿನ್ನೆಲೆಯಲ್ಲಿ ನಿಷೇಧಾಜ್ಞೆ ಇನ್ನೂ ಗುರುಗ್ರಾಮದಲ್ಲಿ ಜಾರಿಯಲ್ಲಿರುವಾಗ ಈ ಘಟನೆ ನಡೆದಿದೆ.



ದೆಹಲಿಯ ಏಮ್ಸ್‌ನ ಹಳೇ ಕಟ್ಟಡದ ಎರಡನೇ ಮಹಡಿಯಲ್ಲಿರುವ ಎಂಡೊಸ್ಕೋಪ್ ಕೊಠಡಿಯಲ್ಲಿ ಸೋಮವಾರ ಸಂಭವಿಸಿದ ಬೆಂಕಿ ಅವಘಡದಿಂದ ದಟ್ಟವಾದ ಹೊಗೆ ಹೊರಬಂತು. ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಆರು ಜನ ಹಾಗೂ ಇತರ 30 ರೋಗಿಗಳನ್ನು ಎಬಿ2 ವಾರ್ಡ್‌ನಿಂದ ಕಟ್ಟಡದ ಇತರ ಭಾಗಕ್ಕೆ ಸ್ಥಳಾಂತರಿಸಲಾಗಿದೆ ಎಂದು ಹಿರಿಯ ವೈದ್ಯರೊಬ್ಬರು ತಿಳಿಸಿದ್ದಾರೆ. ಸ್ಥಳಾಂತರಗೊಂಡ ರೋಗಿಗಳ ಸಂಖ್ಯೆ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಹಂಚಿಕೊಂಡಿಲ್ಲ. ಎಂಡೊಸ್ಕೋಪ್ ಕೊಠಡಿಯ ಸ್ಟೋರ್ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನಿಖರ ಕಾರಣ ತಿಳಿದುಬಂದಿಲ್ಲ– ಪಿಟಿಐ ಚಿತ್ರ

ಜುಕರ್‌ಬರ್ಗ್ ಜತೆಗಿನ ಕುಸ್ತಿಗೂ ಮುನ್ನ ಶಸ್ತ್ರಚಿಕಿತ್ಸೆ: ಮಸ್ಕ್

ನ್ಯೂಯಾರ್ಕ್ (ನ್ಯೂಯಾರ್ಕ್ ಟೈಮ್ಸ್): ಮೆಟಾ ಸಂಸ್ಥಾಪಕ ಮಾರ್ಕ್ ಜುಕರ್‌ಬರ್ಗ್ ಅವರೊಂದಿಗೆ ನಡೆಸಲಿರುವ ಕುಸ್ತಿಗೂ ಮುನ್ನ ಶಸ್ತ್ರಚಿಕಿತ್ಸೆಗೆ ಒಳಗಾಗುವುದಾಗಿ 'ಎಕ್ಸ್' (ಟ್ವಿಟರ್) ಮಾಲೀಕ ಇಲಾನ್ ಮಸ್ಕ್ ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಕ್ಷೇತ್ರದ ದಿಗ್ಗಜರಿಬ್ಬರೂ ಕುಸ್ತಿಯಾಡಲು ಜೂನ್‌ನಲ್ಲಿ ಪರಸ್ಪರ ಒಪ್ಪಿದ್ದಾರೆ. ಇಬ್ಬರ ನಡುವಿನ ಕಾದಾಟ ನಡೆಯುತ್ತದೆಯೇ ಎಂಬುದು ಅಸ್ಪಷ್ಟ. ಆದರೂ, ಮಸ್ಕ್ ಮತ್ತು ಜುಕರ್‌ಬರ್ಗ್ ಆನ್‌ಲೈನ್‌ನಲ್ಲಿ ಪರಸ್ಪರ ಪ್ರಚೋದಿಸುವ ಮಾತುಗಳನ್ನಾಡುತ್ತಾ, ಕುಸ್ತಿ ಬಗ್ಗೆ ಕುತೂಹಲ ಮೂಡಿಸಿದ್ದಾರೆ.

'ನಾನು ಸಿದ್ಧನಿದ್ದೇನೆ. ಆಗಸ್ಟ್ 26ಕ್ಕೆ ಕಾದಾಟ ನಡೆಯಲಿ ಎಂದು ಸವಾಲು ಹಾಕಿದಾಗಲೇ ನಾನು ಹೇಳಿದ್ದೆ. ಆದರೆ ಅವರು (ಇಲಾನ್ ಮಸ್ಕ್) ದೃಢೀಕರಿಸಿರಲಿಲ್ಲ' ಎಂದು ಜುಕರ್‌ಬರ್ಗ್ ಬರೆದುಕೊಂಡಿದ್ದಾರೆ. ಅವರು ಮಿಶ್ರ ಮಾರ್ಷಲ್ ಆರ್ಟ್ಸ್‌ನಲ್ಲಿ ತರಬೇತಿ ಪಡೆದವರಾಗಿದ್ದರು, ಜಿಯು ಜಿಟ್ಸು ತರಬೇತಿಯನ್ನು ಇತ್ತೀಚೆಗೆ ಪೂರ್ಣಗೊಳಿಸಿರುವುದಾಗಿಯೂ ಹೇಳಿದ್ದರು.

'ನಾನು ನಾಳೆ ನನ್ನ ಕುತ್ತಿಗೆ ಮತ್ತು ಬೆನ್ನಿನ ಎಂಆರ್‌ಐ ಮಾಡಿಸುತ್ತಿದ್ದೇನೆ. ಕುಸ್ತಿಗೂ ಮುನ್ನ ಶಸ್ತ್ರಚಿಕಿತ್ಸೆ ನಡೆಯಬಹುದು. ಅದು ಈ ವಾರ ತಿಳಿಯಲಿದೆ' ಎಂದು ಅವರು ಹೇಳಿದ್ದಾರೆ.

ಇಮ್ರಾನ್ ಖಾನ್ ಆರೋಗ್ಯ, ಸುರಕ್ಷೆ ಬಗ್ಗೆ ಪಕ್ಷ ಆತಂಕ

ಲಾಹೋರ್ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆರೋಗ್ಯ ಮತ್ತು ಸುರಕ್ಷೆ ಬಗ್ಗೆ 'ಪಾಕಿಸ್ತಾನ್ ತೆಹ್ರಿಕ್ ಇ ಇನ್ಸಾಫ್ (ಪಿಟಿಐ)' ತೀವ್ರ ಆತಂಕ ವ್ಯಕ್ತಪಡಿಸಿದೆ. ಖಾನ್‌ಗೆ ವಿಧಿಸಲಾಗಿರುವ ಕಠಿಣ ಏಕಾಂತ ಸೆರೆವಾಸದ ಬಗ್ಗೆಯೂ ಆಕ್ಷೇಪ ವ್ಯಕ್ತಪಡಿಸಿದೆ. ಪಿಟಿಐ ಉಪಾಧ್ಯಕ್ಷ ಮಹಮೂದ್ ಖುರೇಷಿ ನೇತೃತ್ವದಲ್ಲಿ ಕೋರ್ ಕಮಿಟಿ ಸಭೆ ಭಾನುವಾರ ನಡೆಯಿತು.

ರಾವಲ್ಪಿಂಡಿಯ ಆದಿಯಾಲಾ ಕಾರಾಗೃಹಕ್ಕೆ ಬದಲಾಗಿ ಅಟಕ್ ಕಾರಾಗೃಹದಲ್ಲಿ ಇಮ್ರಾನ್ ಖಾನ್ ಅವರನ್ನು ಇರಿಸಲಾಗಿದೆ. ಅಲ್ಲಿ ಅವರ ಆರೋಗ್ಯ, ಸುರಕ್ಷತೆ, ಒದಗಿಸಲಾಗುವ ಆಹಾರದ ಗುಣಮಟ್ಟ ಮತ್ತು ಶುಚಿತ್ವದ ಬಗ್ಗೆ ಕೋರ್ ಕಮಿಟಿ ಸಭೆಯಲ್ಲಿ ತೀವ್ರ ಕಳವಳ ವ್ಯಕ್ತವಾಯಿತು. ಜತೆಗೆ, ಜೈಲಿನಲ್ಲಿ ಇಮ್ರಾನ್ ಖಾನ್‌ಗೆ ದೈಹಿಕವಾಗಿ, ಮಾನಸಿಕವಾಗಿ ಗಾಸಿಯಾಗಬಹುದು ಎಂದು ಪಿಟಿಐ ಅನುಮಾನ ವ್ಯಕ್ತಪಡಿಸಿದೆ.



ಇಮ್ರಾನ್ ಖಾನ್

ಮುಂದಿನ ಕಾನೂನು ಹೋರಾಟಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳಿಗೆ ಖಾನ್ ಸಹಿ ಪಡೆಯಲೂ ವಕೀಲರ ತಂಡಕ್ಕೆ ಅಧಿಕಾರಿಗಳಿಂದ ಅನುಮತಿ ಸಿಗುತ್ತಿಲ್ಲ ಎಂದು ಪಿಟಿಐ ಆರೋಪಿಸಿದೆ. ದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ, ನಾಗರಿಕರ ಹೋರಾಟದ ಹಕ್ಕನ್ನೇ ಕಸಿಯಲಾಗಿದೆ ಎಂದೂ ಆಕ್ರೋಶ ವ್ಯಕ್ತಪಡಿಸಿದೆ.

ಖಾನ್ ಬಂಧನದ ನಂತರ ನಡೆದ ಎರಡನೇ ಕೋರ್ ಕಮಿಟಿ ಸಭೆ ಇದಾಗಿದ್ದು, ಮೊದಲ ಸಭೆಯಲ್ಲಿ ದೇಶದಾದ್ಯಂತ ಪ್ರತಿಭಟನೆಗೆ ಕರೆ ನೀಡಲಾಗಿತ್ತು. ಇಸ್ಲಾಮಾಬಾದ್‌ನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಶನಿವಾರ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ಮೂರು ವರ್ಷಗಳ ಸಜೆ ವಿಧಿಸಿದೆ. ಇದರ ಬೆನ್ನಿಗೇ ಪೊಲೀಸರು ಖಾನ್ ಅವರನ್ನು ಲಾಹೋರ್‌ನ ಅವರ ನಿವಾಸದಿಂದ ಬಂಧಿಸಿದ್ದರು.

ಶೀಘ್ರ ಆರೋಪ ಪಟ್ಟಿ ಸಲ್ಲಿಕೆಗೆ ಜಾರಿ ನಿರ್ದೇಶನಾಲಯ ಸಿದ್ಧತೆ

‘ನ್ಯೂಸ್ ಕ್ಲಿಕ್’ಗೆ ಚೀನಾ ಹಣ?

ನವದೆಹಲಿ (ಪಿಟಿಐ): ಭಾರತ ಸೇರಿದಂತೆ ವಿಶ್ವದಾದ್ಯಂತ ಚೀನಾ ಪರ ನಿಲುವುಗಳನ್ನು ಪ್ರಚುರಪಡಿಸಲು ₹86 ಕೋಟಿ ವಿದೇಶಿ ಆರ್ಥಿಕ ನೆರವು ಪಡೆದ ಆರೋಪ ಹೊತ್ತಿರುವ ‘ನ್ಯೂಸ್ ಕ್ಲಿಕ್’ ವೆಬ್‌ಸೈಟ್ ವಿರುದ್ಧ ಜಾರಿ ನಿರ್ದೇಶನಾಲಯವು(ಇ.ಡಿ) ಶೀಘ್ರವೇ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಸೋಮವಾರ ಮೂಲಗಳು ತಿಳಿಸಿವೆ.

ಭಾರತದ ಈ ನ್ಯೂಸ್ ಪೋರ್ಟಲ್‌ಗೆ ಚೀನಾದಿಂದ ಹಣ ಸಂದಾಯವಾಗಿರುವ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ವರದಿ ಪ್ರಕಟಿಸಿದೆ. 2021ರ ಸೆಪ್ಟೆಂಬರ್‌ಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪದ ಮೇಲೆ ಪೋರ್ಟಲ್‌ನ ಸಂಪಾದಕ ಪ್ರಬೀರ್ ಪುರ್ಕಾಯಸ್ಥ ಸೇರಿದಂತೆ ಅದರ ಪ್ರವರ್ತಕರ ವಿರುದ್ಧ ಇ.ಡಿ ದಾಳಿ ನಡೆಸಿ ಪ್ರಕರಣ ದಾಖಲಿಸಿತ್ತು. ಆ ವೇಳೆ ಕಾಂಗ್ರೆಸ್ ಪಕ್ಷವು ವೆಬ್‌ಸೈಟ್ ಪರವಾಗಿ ನಿಂತಿತ್ತು.

ಚೀನಾ ಪರವಾಗಿ ಪ್ರಚಾರ ನೀಡಲು ಅಮೆರಿಕದ ಕೋಟ್ಯಧೀಶ ನೆವಿಲ್ಲೆ ರಾಮ್ ಸಿಂಘಂ ಎಂಬುವರು ಇದರಲ್ಲಿ ಹಣ ಹೂಡಿಕೆ ಮಾಡಿದ್ದಾರೆ ಎಂದು ಎನ್ನಲಾಗಿದೆ.

ಆಧಾರರಹಿತ ಆರೋಪ: ಇದಕ್ಕೆ ಪ್ರತಿಕ್ರಿಯಿಸಿರುವ ನ್ಯೂಸ್ ಪೋರ್ಟಲ್, ‘ಕೆಲವು ರಾಜಕೀಯ ನಾಯಕರು ಹಾಗೂ ಮಾಧ್ಯಮಗಳಲ್ಲಿ ಇರುವವರು ವಾಸ್ತವಾಂಶ ಅರಿಯದೆ ನಮ್ಮ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದ್ದಾರೆ’ ಎಂದು ಪ್ರತಿಕ್ರಿಯಿಸಿದೆ.

ವೆಬ್‌ಸೈಟ್ ವಿರುದ್ಧ ಸುಳ್ಳು ಆರೋಪ ಮಾಡುವುದು ಸರಿಯಲ್ಲ. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯ ಹಂತದಲ್ಲಿದೆ. ದೇಶದ ಕಾನೂನನ್ನು ಗೌರವಿಸುವುದು ನಮ್ಮ ಕರ್ತವ್ಯ. ಮಾಧ್ಯಮಗಳು ನಡೆಸುವ ವಿಚಾರಣೆಯಲ್ಲಿ ಪಾಲ್ಗೊಳ್ಳುವ ಉದ್ದೇಶವಿಲ್ಲ’ ಎಂದಿದೆ.

ಅಮಾನತು ರದ್ದು: ನಿಯಮಗಳಿಗೆ ವಿರುದ್ಧವಾಗಿ ಸದನದ ಕಲಾಪಗಳನ್ನು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದ ಕಾಂಗ್ರೆಸ್ ಸಂಸದೆ ರಜನಿ ಪಾಟೀಲ್ ಅವರ ಅಮಾನತು ಆದೇಶವನ್ನು ಸೋಮವಾರ ರಾಜ್ಯಸಭೆ ಹಿಂಪಡೆದಿದೆ.

ಮಹಾರಾಷ್ಟ್ರದ ಸಂಸದೆಯಾಗಿರುವ ರಜನಿ ಅವರು ಇದೇ ವರ್ಷ ಫೆಬ್ರುವರಿ 10ರಂದು ಬಜೆಟ್ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ಅವರಿಗೆ ವಂದನೆ ಸಲ್ಲಿಸುವಾಗ ವಿಪಕ್ಷಗಳು ಪ್ರತಿಭಟನೆ ನಡೆಸಿದ್ದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು.

ರಾಹುಲ್ ಅಂಗಡಿಯಲ್ಲಿ ಚೀನಿ ಸರಕು: ಬಿಜೆಪಿ

‘ಭಾರತ ವಿರೋಧಿ ಕೃತ್ಯದಲ್ಲಿ ಕಾಂಗ್ರೆಸ್, ಚೀನಾ ಹಾಗೂ ನ್ಯೂಸ್ ಕ್ಲಿಕ್ ನಡುವೆ ಹೊಕ್ಕಳು ಬಳ್ಳಿಯ ಸಂಬಂಧವಿದೆ. ರಾಹುಲ್ ಗಾಂಧಿ ಅವರ ನಕಲಿ ‘ಪ್ರೀತಿಯ ಅಂಗಡಿ’ಯಲ್ಲಿ (ಮೊಹಬತ್ ಕಿ ದುಕಾನ್) ಚೀನಿ ಸರಕುಗಳು ಮಾರಾಟವಾಗುತ್ತಿವೆ’ ಎಂದು ಬಿಜೆಪಿ ಲೇವಡಿ ಮಾಡಿದೆ.

ಸೋಮವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ನ್ಯೂಯಾರ್ಕ್ ಟೈಮ್ಸ್‌ನ ವರದಿ ಉಲ್ಲೇಖಿಸಿ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಹಾಗೂ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ‘ನ್ಯೂಸ್ ಪೋರ್ಟಲ್ ಚೀನಾದ ಪರವಾಗಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದೆ’ ಎಂದು ಟೀಕಿಸಿದರು.

ಇದರ ಕಾರ್ಯವೈಖರಿ ಬಗ್ಗೆ ಕೇಂದ್ರ ಸರ್ಕಾರವು 2021ರಿಂದಲೂ ಎಚ್ಚರಿಸುತ್ತಿದೆ. ವಿದೇಶಿ ಕೈಗಳು ಹೇಗೆ ಭಾರತದ ವಿರುದ್ಧ ಷಡ್ಯಂತ್ರ ನಡೆಸುತ್ತಿವೆ ಎಂಬ ಬಗ್ಗೆ ಆಗಲೇ ಬಹಿರಂಗಪಡಿಸಿದ್ದೆವು ಎಂದರು.

ಎರಡು ವರ್ಷದ ಹಿಂದೆ ಈ ಪೋರ್ಟಲ್ ಮೇಲೆ ಇ.ಡಿ ದಾಳಿ ನಡೆಸಿತ್ತು. ಆಗ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳು ಅದರ ಬೆನ್ನಿಗೆ ನಿಂತಿದ್ದವು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸಲಾಗುತ್ತಿದೆ ಎಂದು ಕೇಂದ್ರದ ಕ್ರಮವನ್ನೇ ಪ್ರಶ್ನಿಸಿದ್ದವು ಎಂದು ದೂರಿದರು.

ಚೀನಾ ಮಾಧ್ಯಮ ಕಂಪನಿ ಮಕು ಗುಂಪಿನ ಜೊತೆಗೆ ನೆವಿಲ್ಲೆ ರಾಯ್ ಅವರಿಗೆ ನಿಕಟ ಸಂಬಂಧವಿದೆ. ಚೀನಾದಿಂದ ಆತನಿಗೆ ಹಣ ಪೂರೈಕೆಯಾಗಿದೆ. ಹಣ ಪಡೆದು ಚೀನಾ ನಿಲುವುಗಳನ್ನು ಹರಡುತ್ತಿದ್ದಾರೆ. ಇದಕ್ಕೆ ಕಾಂಗ್ರೆಸ್ ಕೂಡ ಬೆಂಬಲ ನೀಡುತ್ತಿದೆ ಎಂದು ಆಪಾದಿಸಿದರು.

ಉಚಿತ ಸುದ್ದಿ ಪ್ರಕಟಿಸುವ ನೆಪದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಲಾಗುತ್ತದೆ. ಇಂತಹ ದೇಶ ವಿರೋಧಿ ಕೃತ್ಯಕ್ಕೆ ವಿರೋಧ ಪಕ್ಷಗಳು ಸಹಕಾರ ನೀಡುತ್ತಿವೆ ಎಂದು ಆರೋಪಿಸಿದರು.

ಗೊಗೋಯಿ ಮಾತು: ನಾಲ್ವರು ಸದಸ್ಯೆಯರ ಸಭಾತ್ಯಾಗ

ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯ, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯಿ ಅವರು ಸದನವನ್ನು ಪ್ರವೇಶಿಸಿದ 40 ತಿಂಗಳ ನಂತರ ಮೊದಲ ಬಾರಿಗೆ ಸೋಮವಾರ, ದೆಹಲಿ ಸೇವಾ ವಿಷಯಗಳ ಮಸೂದೆ ಕುರಿತ ಚರ್ಚೆಯಲ್ಲಿ ಭಾಗವಹಿಸಿದ್ದರು.

ಗೊಗೋಯಿ ಭಾಷಣ ಆರಂಭವಾದಂತೆ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ಮಹಿಳಾ ಸದಸ್ಯರಾದ ಜಯಾ ಬಚ್ಚನ್ (ಸಮಾಜವಾದಿ ಪಕ್ಷ), ಪ್ರಿಯಾಂಕಾ ಚತುರ್ವೇದಿ (ಶಿವಸೇನೆ–ಉದ್ಧವ್ ಬಣ), ವಂದನಾ ಚವಾಣ್ (ಎನ್‌ಸಿಪಿ), ಸುಶ್ಮಿತಾ ದೇವ್ (ತೃಣಮೂಲ ಕಾಂಗ್ರೆಸ್) ಪ್ರತಿಭಟನೆಯಾಗಿ ಸದನದಿಂದ ಹೊರನಡೆದರು. ‘ಗೊಗೋಯಿ ಅವರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪವಿದೆ. ಅವರ ವಿರುದ್ಧ ಪ್ರತಿಭಟನೆಯಾಗಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ. ಹಿರಿಯರಾಗಿ ಅವರು ಮಹಿಳೆಯರನ್ನು ಗೌರವಿಸಲಿಲ್ಲ, ಮಹಿಳೆಯರ ಕಷ್ಟ ಪರಿಹರಿಸಲು ತಮ್ಮ ಅಧಿಕಾರ ಬಳಸಲಿಲ್ಲ’ ಎಂದು ಪ್ರಿಯಾಂಕಾ ಅವರು ಸಭಾತ್ಯಾಗಕ್ಕೆ ಕಾರಣ ನೀಡಿದರು.

ದೆಹಲಿ ಸೇವಾ ವಿಷಯಗಳ ಮಸೂದೆಯ ಸಮರ್ಥನೆಗೆ ಹೆಚ್ಚಿನ ಬಲಪಡೆಯುವುದು ಗೊಗೋಯಿ ಅವರನ್ನು ಮಾತಿಗೆ ಇಳಿಸಿರುವುದರ ಉದ್ದೇಶ ಎನ್ನಲಾಗಿದೆ. 16 ನಿಮಿಷ ಮಾತನಾಡಿದ ಗೊಗೋಯಿ, ‘ಸಂಸತ್ತಿಗೆ ಶಾಸನ ರೂಪಿಸುವ ಅಧಿಕಾರವಿದೆ. ಇದರಲ್ಲಿ ಪ್ರಾಬಲ್ಯ ಹೊಂದುವ ಪ್ರಶ್ನೆಯೇ ಇಲ್ಲ’ ಎಂದರು.

‘ದೆಹಲಿಯು ಕೇಂದ್ರಾಡಳಿತ ಪ್ರದೇಶವಾಗಿದೆ. ಇದು, ಅಸಮ್ಮತ ಒಕ್ಕೂಟವಾಗಿದೆ. ಮಸೂದೆಯಿಂದ ಸಂವಿಧಾನದ ಯಾವುದಾದರೂ ವಿಧಿ ಉಲ್ಲಂಘನೆಯಾಗಲಿದೆಯೇ ಎಂದು ಪ್ರಶ್ನಿಸಿದರು. ಮಸೂದೆಯು ನಿಯಮಾನುಸಾರ ಇದ್ದು, ಪೂರ್ಣವಾಗಿ ಬೆಂಬಲಿಸುತ್ತೇನೆ’ ಎಂದು ಹೇಳಿದರು.

ದೆಹಲಿ ಮಸೂದೆಗೆ ರಾಜ್ಯಸಭೆ ಅಸ್ತು

131–102 ಮತಗಳಿಂದ ಅನುಮೋದನೆ • ಎಎಪಿ, ಕಾಂಗ್ರೆಸ್ ವಿರೋಧ



ರಾಜ್ಯಸಭೆಯಲ್ಲಿ ಸೋಮವಾರ ‘ದೆಹಲಿ ಸೇವೆಗಳ ನಿಯಂತ್ರಣ ಮಸೂದೆ’ ಕುರಿತ ಚರ್ಚೆಯಲ್ಲಿ ವಿರೋಧಪಕ್ಷಗಳ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಸದಸ್ಯರು ಭಾಗವಹಿಸಿದ್ದರು. ಕಾಂಗ್ರೆಸ್‌ನ ಮನಮೋಹನ ಸಿಂಗ್ ಅವರು ಗಾಲಿ ಕುರ್ಚಿಯಲ್ಲಿ ಸದನಕ್ಕೆ ಬಂದರು –ಪಿಟಿಐ ಚಿತ್ರ

ನವದೆಹಲಿ: ಆಮ್ ಆದ್ಮಿ ಪಕ್ಷ ಮತ್ತು ಕಾಂಗ್ರೆಸ್ ಸೇರಿದಂತೆ ವಿರೋಧಪಕ್ಷಗಳ ತೀವ್ರ ವಿರೋಧದ ನಂತರವು, ವಿವಾದಾತ್ಮಕ ‘ದೆಹಲಿ ಸೇವೆಗಳ ನಿಯಂತ್ರಣ ಮಸೂದೆ’ಯು ರಾಜ್ಯಸಭೆಯಲ್ಲಿ 131-102 ಮತಗಳಿಂದ ಅಂಗೀಕಾರಗೊಂಡಿತು.

ಮಸೂದೆಯನ್ನು ಈಗಾಗಲೇ ಲೋಕಸಭೆಯು ಅಂಗೀಕರಿಸಿದೆ. ರಾಷ್ಟ್ರಪತಿಗಳ ಅಂಕಿತ ಬಿದ್ದ ಬಳಿಕ ಕಾಯ್ದೆಯಾಗಿ ಜಾರಿಗೆ ಬರಲಿದೆ. ಈಗಾಗಲೇ ಹೊರಡಿಸಿರುವ ಸುಗ್ರೀವಾಜ್ಞೆಗೆ ಕಾಯ್ದೆಯ ರೂಪವನ್ನು ನೀಡಲು ಸರ್ಕಾರ ಮಸೂದೆಯನ್ನು ಮಂಡಿಸಿತ್ತು.

ವಿಸ್ತೃತ, ಬಿಸಿ ಚರ್ಚೆಯ ಬಳಿಕ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ಮಸೂದೆಯ ಪರವಾಗಿ 131 ಮತ್ತು ವಿರುದ್ಧವಾಗಿ 102 ಸದಸ್ಯರು ಮತ ಚಲಾಯಿಸಿದರು. ಮಸೂದೆಯು ಅಂಗೀಕಾರಗೊಂಡಿತು.

ಇದಕ್ಕೂ ಮೊದಲು ಮಸೂದೆ ಮಂಡಿಸಿದ ಗೃಹ ಸಚಿವ ಅಮಿತ್ ಶಾ ಅವರು, ‘ರಾಷ್ಟ್ರ ರಾಜಧಾನಿಯಲ್ಲಿ ಭ್ರಷ್ಟಾಚಾರ ರಹಿತ ಮತ್ತು ಪರಿಣಾಮಕಾರಿಯಾದ ಆಡಳಿತ ನೀಡುವುದು ಈ ಮಸೂದೆಯ ಉದ್ದೇಶವಾಗಿದೆ’ ಎಂದು ಸಮರ್ಥಿಸಿಕೊಂಡರು.

ಟಿಎಂಸಿಯ ಸುಕೇಂದು ಶೇಖರ್ ರಾಯ್, ಡಿಎಂಕೆಯ ತಿರುಚಿ ಶಿವ ಅವರು ಮಸೂದೆ ವಿರೋಧಿಸಿ ಮಾತನಾಡಿದರು. ಬಿಜೆಡಿಯ ಸಸ್ಮಿತ್ ಪಾತ್ರಾ ಮತ್ತು ವೈಎಸ್‌ಆರ್‌ಸಿಪಿಯ ವಿ.ವಿಜಯಸಾಯಿ ರೆಡ್ಡಿ ಅವರು ಮಸೂದೆಯನ್ನು ಬೆಂಬಲಿಸಿ ಮಾತನಾಡಿದರು.

ಇದಕ್ಕೂ ಮುನ್ನ ಚರ್ಚೆಯಲ್ಲಿ ಭಾಗವಹಿಸಿದ್ದ ಎಎಪಿ ಸದಸ್ಯ ರಾಘವ್ ಛಡ್ಡಾ ಅವರು, ‘ಇದು ‘ರಾಜಕೀಯ ವಂಚನೆ’, ‘ಸಾಂವಿಧಾನಿಕ ಅಪರಾಧ’ವಾಗಿದೆ. ಮಸೂದೆ ಚುನಾಯಿತ ಸರ್ಕಾರಗಳ ಅಧಿಕಾರ ಕಸಿದುಕೊಳ್ಳುವ ಉದ್ದೇಶ ಹೊಂದಿದೆ’ ಎಂದು ಟೀಕಿಸಿದರು.

‘ನಾನು ದೆಹಲಿಯ ಎರಡು ಕೋಟಿ ಜನರ ಪ್ರತಿನಿಧಿಯಾಗಿ ಅಲ್ಲ, ದೇಶದ 135 ಕೋಟಿ ಜನರನ್ನು ಪ್ರತಿನಿಧಿಸಿ ಈ ಮಾತು ಹೇಳುತ್ತಿದ್ದೇನೆ. ಎಎಪಿ ಈ ಸದನದಲ್ಲಿ ನ್ಯಾಯವನ್ನು ಬಯಸುತ್ತಿದೆ’ ಎಂದರು.

‘ಬಿಜೆಪಿ ಕಳೆದ 25 ವರ್ಷಗಳಲ್ಲಿ ದೆಹಲಿಯಲ್ಲಿ ಆರು ಚುನಾವಣೆಗಳಲ್ಲಿ ಸೋತಿದೆ. ಮುಂದಿನ 25 ವರ್ಷವು ಗೆಲ್ಲುವುದು ಅಸಾಧ್ಯ ಎಂಬುದು ಬಿಜೆಪಿಗೆ ತಿಳಿಸಿದೆ. ಹೀಗಾಗಿ, ರಾಜ್ಯ ಸರ್ಕಾರವನ್ನು ದುರ್ಬಲಗೊಳಿಸಲು ಬಿಜೆಪಿ ಯತ್ನಿಸುತ್ತಿದೆ. ‘ಸುಪ್ರೀಂ’ ಆದೇಶಕ್ಕೆ ವಿರುದ್ಧವಾಗಿ ಎಂಟು ದಿನದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಬಿಜೆಪಿಗೆ ಇದ್ದ ಬಲವಾದ ಕಾರಣವಾದರೂ ಏನು?’ ಎಂದು ಪ್ರಶ್ನಿಸಿದರು.

ಎಲ್ಲ ಪ್ರತಿಪಕ್ಷಗಳು ವಿರೋಧಿಸಲಿ –ಸಿಂಘ್ವಿ: ‘ದೆಹಲಿ ಸೇವಾ ನಿಯಂತ್ರಣ ಕುರಿತ ಮಸೂದೆಯ ಅಸಾಂವಿಧಾನಿಕವಾದುದು. ಮುಂದೊಂದು ದಿನ ಈ ಒಕ್ಕೂಟ ವಿರೋಧಿ ಧೋರಣೆಯು ನಿಮ್ಮ ಕದವನ್ನೂ ತಟ್ಟಬಹುದು. ಹೀಗಾಗಿ, ಎಲ್ಲ ವಿರೋಧಪಕ್ಷಗಳು ಈಗ ಮಸೂದೆಯನ್ನು ವಿರೋಧಿಸಬೇಕಾಗಿದೆ’ ಎಂದು ಕಾಂಗ್ರೆಸ್ ನಾಯಕ ಅಭಿಷೇಕ್ ಸಿಂಘ್ವಿ ಮನವಿ ಮಾಡಿದರು.

‘ದುರುದ್ದೇಶದಿಂದ ಕೇಂದ್ರ ಸರ್ಕಾರವು ಈ ಮಸೂದೆ ತಂದಿದೆ. ಇದು, ಸುಪ್ರೀಂ ಕೋರ್ಟ್ ನ್ಯಾಯಪೀಠದ ಎರಡು ಆದೇಶಗಳಿಗೆ ಇದು ವಿರುದ್ಧವಾಗಿದೆ’ ಎಂದು ರಾಜ್ಯಸಭೆಯಲ್ಲಿ ಮಸೂದೆಯ ಮೇಲೆ ಚರ್ಚೆಯನ್ನು ಆರಂಭಿಸಿ ಹೇಳಿದರು.

ಕೇಂದ್ರೀಯ ವಿದ್ಯಾಲಯ– ಸಂಸದರ ಕೋಟಾ ಜಾರಿ ಪ್ರಸ್ತಾವ ಇಲ್ಲ: ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರವೇಶ ಪಡೆಯುವುದಕ್ಕೆ ಸಂಬಂಧಿಸಿದ ‘ಸಂಸದರ ವಿವೇಚನಾ ಕೋಟಾ’ವನ್ನು ರದ್ದುಪಡಿಸಿರುವ ಆದೇಶವನ್ನು ಪುನರ್ ಪರಿಶೀಲಿಸುವ ಪ್ರಸ್ತಾವ ಇಲ್ಲ ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವೆ ಅನ್ನಪೂರ್ಣ ದೇವಿ ತಿಳಿಸಿದ್ದಾರೆ.

ಡಿಜಿಟಲ್ ದತ್ತಾಂಶ ಸಂರಕ್ಷಣಾ ಮಸೂದೆ ಅಂಗೀಕಾರ

ನವದೆಹಲಿ(ಪಿಟಿಐ): ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದ ವಿರೋಧ ಪಕ್ಷಗಳ ಗದ್ದಲದ ನಡುವೆಯೇ ಡಿಜಿಟಲ್ ದತ್ತಾಂಶ ಸಂರಕ್ಷಣಾ ಮಸೂದೆಗೆ ಲೋಕಸಭೆಯಲ್ಲಿ ಸೋಮವಾರ ಧ್ವನಿ ಮತದ ಅಂಗೀಕಾರ ದೊರೆಯಿತು. ವಿರೋಧ ಪಕ್ಷಗಳ ಸದಸ್ಯರು ಪ್ರಸ್ತಾಪಿಸಿದ್ದ ತಿದ್ದುಪಡಿಗೆ ಸೋಲಾಯಿತು.

ನಾಗರಿಕ ಕಲ್ಯಾಣ ಮತ್ತು ಜನರ ವೈಯಕ್ತಿಕ ಮಾಹಿತಿ ಸಂರಕ್ಷಣೆಯಂಥ ವಿಷಯಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಸದಸ್ಯರಿಗೆ ಸ್ವಲ್ಪ ಮಟ್ಟಿಗೆ ಆತಂಕವಿದೆ. ಆದ್ದರಿಂದ ಅವರು ಘೋಷಣೆ ಕೂಗುತ್ತಿದ್ದಾರೆ ಎಂದು ಮಸೂದೆ ಮಂಡನೆ ವೇಳೆ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಜತೆಗೆ, ಮಸೂದೆಗೆ ಸರ್ವಾನುಮತದ ಅನುಮೋದನೆ ನೀಡಬೇಕೆಂದು ಕೋರಿದರು.

ಭಾರತೀಯ ನಾಗರಿಕರ ಖಾಸಗಿತನ ಕಾಪಾಡುವುದು ಈ ಮಸೂದೆಯ ಮುಖ್ಯ ಉದ್ದೇಶ. ಜನರ ಡಿಜಿಟಲ್ ದತ್ತಾಂಶ ದುರುಪಯೋಗಪಡಿಸಿಕೊಳ್ಳುವ ಅಥವಾ ದತ್ತಾಂಶ ರಕ್ಷಿಸದ ಸಂಸ್ಥೆಗಳಿಗೆ ₹250 ಕೋಟಿ ದಂಡ ವಿಧಿಸುವ ಪ್ರಸ್ತಾವವನ್ನೂ ಮಸೂದೆ ಹೊಂದಿದೆ.

‘ರಕ್ತದಾಹ ಹೊಂದಿದ್ದ ಅಪರಾಧಿಗಳು’

ನವದೆಹಲಿ (ಪಿಟಿಐ): ‘2002ರ ಗುಜರಾತ್ ಗಲಭೆ ಸಂದರ್ಭದಲ್ಲಿ ನಡೆದ ಬಿಲ್ಕಿಸ್ ಬಾನೊ ಸಾಮೂಹಿಕ ಅತ್ಯಾಚಾರ ಹಾಗೂ ಅವರ ಕುಟುಂಬದ ಏಳು ಸದಸ್ಯರ ಹತ್ಯೆ ಪ್ರಕರಣದ ಅಪರಾಧಿಗಳು ಮುಸ್ಲಿಮರನ್ನು ಬೇಟೆಯಾಡುವ ರಕ್ತದಾಹ ಹೊಂದಿದ್ದು, ಅದೇ ಉದ್ದೇಶದಿಂದ ಬಾನೊ ಅವರನ್ನು ಬೆನ್ನಟ್ಟಿದ್ದರು’ ಎಂದು ಸುಪ್ರೀಂ ಕೋರ್ಟ್‌ಗೆ ಸೋಮವಾರ ಮಾಹಿತಿ ನೀಡಲಾಗಿದೆ.

ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿದ್ದ 11 ಅಪರಾಧಿಗಳಿಗೆ ನೀಡಿದ್ದ ಕ್ಷಮಾಪಣೆ ಹಾಗೂ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸೋಮವಾರ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನಾ ಮತ್ತು ಉಜ್ವಲ್ ಭುಯಾನ್ ಅವರನ್ನೊಳಗೊಂಡ ನ್ಯಾಯಪೀಠವು ನಡೆಸಿತು.

ಬಾನೊ ಪರ ವಾದಿಸಿದ ವಕೀಲರಾದ ಶೋಭಾ ಗುಪ್ತಾ ಅವರು, ‘ಗರ್ಭಿಣಿಯಾಗಿದ್ದ ಬಾನೊ ಅವರ ಮೇಲೆ ಅಪರಾಧಿಗಳು ಸಾಮೂಹಿಕ ಅತ್ಯಾಚಾರ ನಡೆಸಿ, ಅವರ ಮೊದಲ ಮಗುವನ್ನು ಕಲ್ಲಿಗೆ ಅಪ್ಪಳಿಸಿ ಕೊಂದಿದ್ದರು. ತಮಗೆ ಪರಿಚಿತರಾಗಿದ್ದ ಅಪರಾಧಿಗಳಿಗೆ ‘ನಾನು ನಿಮ್ಮ ಸಹೋದರಿ ಇದ್ದಂತೆ’ ಎಂದು ಬಾನೊ ಪರಿಪರಿಯಾಗಿ ಬೇಡಿಕೊಂಡಿದ್ದರು. ಇದು ಆ ಕ್ಷಣಕ್ಕೆ ನಡೆದ ಘಟನೆಯಲ್ಲ. ಅಪರಾಧಿಗಳು ಮುಸ್ಲಿಮರನ್ನು ಬೇಟೆಯಾಡಿ ತಮ್ಮ ರಕ್ತದಾಹವನ್ನು ತೀರಿಸಿಕೊಳ್ಳುವ ಉದ್ದೇಶದಿಂದಲೇ ಬಾನೊ ಅವರನ್ನು ಬೆನ್ನಟ್ಟಿದ್ದರು. ‘ಇವರು ಮುಸ್ಲಿಮರು. ಇವರನ್ನು ಕೊಲ್ಲಿ’ ಎಂದು ಘೋಷಣೆಯನ್ನೂ ಕೂಗಿದ್ದರು

ಇದು ಅಸಾಮಾನ್ಯ, ಅಪರೂಪದ ಅಪರಾಧದ ಪ್ರಕರಣವಾಗಿದ್ದು ಕೋಮುದ್ವೇಷದಿಂದಲೇ ಇದು ನಡೆದಿದೆ ಎಂಬುದನ್ನು ಹೈಕೋರ್ಟ್ ಗಮನಿಸಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.



ನೃತ್ಯ ಸೊಬಗು

ಶಿಮ್ಲಾದಲ್ಲಿ ಸೋಮವಾರ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಅಂಗವಾಗಿ ಕಲಾವಿದರು ನೃತ್ಯ ಪ್ರದರ್ಶಿಸಿದರು –ಪಿಟಿಐ ಚಿತ್ರ

‘ಚೀತಾಗಳ ಸಾವು ತಡೆ: ತಜ್ಞರಿಗೆ ಬಿಡುವುದು ಸೂಕ್ತ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾಗಳ ಸಾವು ತಡೆಯಲು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ ಎಂಬ ಕೇಂದ್ರ ಸರ್ಕಾರದ ಹೇಳಿಕೆಯನ್ನು ನಂಬದೇ ಇರಲು ಯಾವುದೇ ಕಾರಣ ಕಾಣುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಕೋರ್ಟ್‌ಗೆ ಈ ವಿಷಯದಲ್ಲಿ ಪರಿಣತಿ ಇಲ್ಲ. ಇದನ್ನು ಪರಿಣತರ ಪರಿಶೀಲನೆಗೆ ಬಿಡುವುದೇ ಸೂಕ್ತ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಪಿ.ಎಸ್.ನರಸಿಂಹ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠ ಸೋಮವಾರ ಅಭಿಪ್ರಾಯಪಟ್ಟಿತು.

ಆದರೆ, ಮೃತಪಟ್ಟಿರುವ ಚೀತಾಗಳ ಸಂಖ್ಯೆ ಕಡಿಮೆಯಲ್ಲ ಎಂಬ ಅಂಶವನ್ನು ಪರಿಗಣಿಸಿದ ಪೀಠವು, ‘ಚೀತಾಗಳ ಸಾವು ತಡೆಗೆ ಕೈಗೊಳ್ಳುವ ಕ್ರಮಗಳಿಗೆ ಪೂರಕವಾಗಿ ಕೋರ್ಟ್ ರಚಿಸಿರುವ ಪರಿಣತರ ತಂಡದ ಅಭಿಪ್ರಾಯಗಳನ್ನೂ ಪಡೆಯಬೇಕು‘ ಎಂದು ಸೂಚಿಸಿತು.

‘ದಕ್ಷಿಣ ಆಫ್ರಿಕಾದ ನಮೀಬಿಯಾದಿಂದ 20 ಚೀತಾಗಳನ್ನು ಕರೆತರಲಾಗಿತ್ತು. ಇವುಗಳಲ್ಲಿ ಆರು ಮೃತಪಟ್ಟಿವೆ. ಚೀತಾಗಳ ಸಾವು ಕುರಿತಂತೆ ಮಾಧ್ಯಮಗಳಲ್ಲಿ ತಪ್ಪುವರದಿಗಳು ಪ್ರಕಟವಾಗಿವೆ’ ಎಂದು ಕೇಂದ್ರ ಸರ್ಕಾರ ನ್ಯಾಯಪೀಠಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಕೇಂದ್ರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ಪ್ರಮಾಣಪತ್ರ ಸಲ್ಲಿಸಿದ್ದು, ‘ಹೆಚ್ಚುವರಿಯಾಗಿ ಮೃತಪಟ್ಟಿವೆ ಎಂದು ಉಲ್ಲೇಖಿಸಿರುವ 3 ಚೀತಾಗಳು, ನಮೀಬಿಯಾದಿಂದ ಕರೆತರಲಾಗಿದ್ದ ಚೀತಾಗಳ ಮರಿಗಳಾಗಿವೆ’ ಎಂದು ತಿಳಿಸಿದರು. ‘ಅಂತರರಾಷ್ಟ್ರೀಯ ಪರಿಣತರಿರುವ 11 ಜನರ ಸಮಿತಿ ರಚಿಸಲಾಗಿದೆ. ಚೀತಾಗಳ ಸಾವು ತಡೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಈ ಎಲ್ಲ ಪರಿಣತರನ್ನು ಸಂಪರ್ಕಿಸಿ ಅಭಿಪ್ರಾಯಗಳನ್ನು ಪಡೆಯಲಾಗಿದೆ’ ಎಂಬ ಕೇಂದ್ರದ ಹೇಳಿಕೆಯನ್ನು ನ್ಯಾಯಪೀಠ ಪರಿಗಣಿಸಿತು.

ಕೇಂದ್ರದ ಹೇಳಿಕೆಯನ್ನು ನಂಬದಿರಲು ಕಾರಣಗಳಿಲ್ಲ ಎಂದ ನ್ಯಾಯಪೀಠವು, ‘ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಚೀತಾಗಳ ಸಾವು ತಡೆಗೆ ಕೇಂದ್ರವು ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ಸಲ್ಲಿಸಲಾಗಿದ್ದ ಅರ್ಜಿಯನ್ನು ವಿಲೇವಾರಿ ಮಾಡಿತು.

ಸೆಂಥಿಲ್ ಬಿಡುಗಡೆ ಅರ್ಜಿ ತಿರಸ್ಕಾರ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರ ಬಂಧನದ ಕ್ರಮವನ್ನು ಸಮರ್ಥಿಸಿದ್ದ ಮದ್ರಾಸ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬಾಲಾಜಿ ಹಾಗೂ ಅವರ ಪತ್ನಿ ಮೇಗಲ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ.

ಬಾಲಾಜಿ ಅವರನ್ನು ಐದು ದಿನಗಳ ಕಾಲ (ಆ. 12ರವರೆಗೆ) ಜಾರಿ ನಿರ್ದೇಶನಾಲಯದ ವಶಕ್ಕೆ ನೀಡುವಂತೆಯೂ ಸುಪ್ರೀಂ ಕೋರ್ಟ್ ಸೂಚಿಸಿದೆ.

ಸಂಸತ್‌ಗೆ ಮರಳಿದ ರಾಹುಲ್

ಒಂದನೇ ಪುಟದಿಂದ...

ಆಗ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು, ‘ನ್ಯೂಸ್ ಕ್ಲಿಕ್ ಪೋರ್ಟಲ್‌ಗೆ ಚೀನಾದಿಂದ ಹಣ ಸಂದಾಯವಾಗಿದೆ. ದೇಶವಿರೋಧಿ ಕೃತ್ಯಗಳಿಗೆ ಈ ಹಣ ಬಳಸಿಕೊಳ್ಳಲಾಗುತ್ತಿದೆ’ ಎಂದು ರಾಹುಲ್ ಅವರನ್ನು ಉಲ್ಲೇಖಿಸಿ ಆರೋಪಿಸಿದರು. ಬಳಿಕ ಈ ಮಾತನ್ನು ಕಡತದಿಂದ ತೆಗೆದುಹಾಕಲಾಯಿತು.

ಮಣಿಪುರ ಸಂಘರ್ಷ ಸಂಬಂಧ ಬಿಜೆಪಿ ಮತ್ತು ವಿಪಕ್ಷಗಳ ಸದಸ್ಯರ ನಡುವೆ ನಡೆದ ವಾಗ್ವಾದದಿಂದ ಕಲಾಪವನ್ನು ಮುಂದೂಡಲಾಯಿತು. ನಂತರ ರಾಹುಲ್ ಸಂಸತ್‌ನೊಳಗೆ ತಮ್ಮ ತಾಯಿ ಸೋನಿಯಾ ಗಾಂಧಿ ಹಾಗೂ ವಿರೋಧ ಪಕ್ಷದ ಸದಸ್ಯರೊಟ್ಟಿಗೆ ಚರ್ಚೆಯಲ್ಲಿ ತೊಡಗಿದರು.

ಬಳಿಕ ಡಿಎಂಕೆ ಕಚೇರಿಗೆ ತೆರಳಿದ ಅವರು, ದಿವಂಗತ ಎಂ. ಕರುಣಾನಿಧಿ ಅವರ ಪುಣ್ಯ ಸ್ಮರಣೆಯಲ್ಲಿ ಪಾಲ್ಗೊಂಡು ನಮನ ಸಲ್ಲಿಸಿದರು. ಮಲ್ಲಿಕಾರ್ಜುನ ಖರ್ಗೆ ಮತ್ತು ಸೋನಿಯಾ ಗಾಂಧಿ ಅವರು ಮಣಿಪುರದ ಕಾಂಗ್ರೆಸ್ ನಾಯಕರ ನಿಯೋಗದ ಜೊತೆ ಚರ್ಚಿಸಿದರು.

‘ಇಂಡಿಯಾ’ ಸ್ವಾಗತ: ಸದನ ಪ್ರವೇಶಿಸಿದ ರಾಹುಲ್ ಅವರನ್ನು ಕಾಂಗ್ರೆಸ್ ಸೇರಿದಂತೆ ‘ಇಂಡಿಯಾ’ ಮೈತ್ರಿಕೂಟದ ನಾಯಕರು ಸ್ವಾಗತಿಸಿದರು. ಅಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಕಾಂಗ್ರೆಸ್ ಸದಸ್ಯರು ಸಿಹಿ ಹಂಚಿ ಸಂಭ್ರಮಿಸಿದರು.

ಎಐಸಿಸಿ ಕೇಂದ್ರ ಕಚೇರಿ ಮುಂಭಾಗ ಕಾಂಗ್ರೆಸ್ ಕಾರ್ಯಕರ್ತರು ನೃತ್ಯ ಪ್ರದರ್ಶಿಸಿ ರಾಹುಲ್ ಪರ ಘೋಷಣೆ ಕೂಗಿದರು.

ಮೋದಿ ಉಪನಾಮಕ್ಕೆ ಸಂಬಂಧಿಸಿದಂತೆ ರಾಹುಲ್ ನೀಡಿದ್ದ ಹೇಳಿಕೆಗೆ ವಿಚಾರಣಾ ನ್ಯಾಯಾಲಯವು ಮಾರ್ಚ್ 23ರಂದು ಎರಡು ವರ್ಷ ಶಿಕ್ಷೆ ವಿಧಿಸಿತ್ತು. ಕೇರಳದ ವಯನಾಡ್ ಲೋಕಸಭಾ ಸದಸ್ಯತ್ವ ಸ್ಥಾನದಿಂದ ಅವರನ್ನು ಮಾರ್ಚ್ 24ರಂದೇ ಅನರ್ಹಗೊಳಿಸಲಾಗಿತ್ತು.

ಬದಲಾಯ್ತು ಎಕ್ಸ್ (ಟ್ವಿಟರ್) ಬಯೊ: ಸದಸ್ಯತ್ವದ ಅನರ್ಹತೆ ರದ್ದಾದ ಬೆನ್ನಲ್ಲೇ ರಾಹುಲ್ ಅವರ ಎಕ್ಸ್‌ನ ಬಯೊ (ಸ್ವವಿವರಣೆ) ಕೂಡ ಬದಲಾಗಿದೆ.

ವಿಚಾರಣಾ ಕೋರ್ಟ್‌ನಿಂದ ಶಿಕ್ಷೆ ಪ್ರಕಟಗೊಂಡ ತಕ್ಷಣವೇ ಟ್ವಿಟರ್‌ನ ಬಯೊ ಮಾಹಿತಿಯನ್ನು ಅಪ್‌ಡೇಟ್ ಮಾಡಿದ್ದ ಅವರು, ‘ಅನರ್ಹ ಸಂಸದ’ ಎಂದು ನಮೂದಿಸಿದ್ದರು. ಈಗ ‘ಲೋಕಸಭಾ ಸಂಸದ’ ಎಂದು ಮರು ನಮೂದಿಸಿದ್ದಾರೆ.

ಪ್ರಸ್ತುತ ಬಯೊದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯ ಹಾಗೂ ಲೋಕಸಭಾ ಸದಸ್ಯ ಎಂಬ ವಿವರಣೆ ಇದೆ.

‘ತಾತ್ಕಾಲಿಕ ಪರಿಹಾರ’: ‘ರಾಹುಲ್ ಗಾಂಧಿ ಅವರಿಗೆ ಸದ್ಯಕ್ಕೆ ತಾತ್ಕಾಲಿಕ ಪರಿಹಾರ ಸಿಕ್ಕಿದೆಯಷ್ಟೇ. ಇದೇ ಅಂತಿಮವಲ್ಲ’ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿ ಯುವ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷರು ಕೂಡ ಆಗಿರುವ ಅವರು ಭೋಪಾಲ್‌ನಲ್ಲಿ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವೇಳೆ ಪಿಟಿಐ ಜೊತೆಗೆ ಮಾತನಾಡಿದರು.

ಉತ್ತಮ ಆಡಳಿತ ನೀಡಿ: ಖರ್ಗೆ– ರಾಹುಲ್ ಅವರ ಸದಸ್ಯತ್ವವನ್ನು ಮರು ಸ್ಥಾಪಿಸಿರುವುದು ದೇಶದ ಜನರಿಗೆ ಅದರಲ್ಲೂ ವಯನಾಡ್ ಕ್ಷೇತ್ರದ ಮತದಾರರಿಗೆ ಸಮಾಧಾನ ತಂದಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯಿಸಿದ್ದಾರೆ.

‘ಸುಪ್ರೀಂ’ ತ್ರಿಸದಸ್ಯ ಸಮಿತಿ ರಚನೆ

ಒಂದನೇ ಪುಟದಿಂದ

ಅಪರಾಧ ಪ್ರಕರಣಗಳ 11 ಎಫ್‌ಐಆರ್‌ಗಳನ್ನು ಸಿಬಿಐಗೆ ವರ್ಗಾಯಿಸಲಾಗುವುದು ಎಂದು ನ್ಯಾಯಪೀಠ ತಿಳಿಸಿದೆ.

ತನಿಖೆಯ ಮೇಲ್ವಿಚಾರಣೆಗೆ ಡಿವೈಎಸ್‌ಪಿ ಶ್ರೇಣಿಯ ಐವರು ಅಧಿಕಾರಿಗಳನ್ನು ಸಿಬಿಐಗೆ ನಿಯೋಜಿಸುವಂತೆ ವಿವಿಧ ರಾಜ್ಯಗಳಿಗೆ ಸೂಚಿಸಲಾಗುವುದು. ಈ ಮೂಲಕ ಜನರಲ್ಲಿ ನಂಬಿಕೆ ಮೂಡುವುದನ್ನು ಖಾತರಿಪಡಿಸಲಾಗುವುದು ಎಂದು ಕೋರ್ಟ್ ಹೇಳಿದೆ.

ಈ ಅಧಿಕಾರಿಗಳು ಸಿಬಿಐನ ಆಡಳಿತಾತ್ಮಕ ವ್ಯವಸ್ಥೆಯಲ್ಲೇ ಕಾರ್ಯನಿರ್ವಹಿಸುತ್ತಾರೆ ಮತ್ತು ಸಿಬಿಐ ಜಂಟಿ ನಿರ್ದೇಶಕ ಶ್ರೇಣಿಯ ಅಧಿಕಾರಿಯು ಇವರ ಮೇಲ್ವಿಚಾರಣೆ ನಡೆಸಬಹುದು ಎಂದಿದೆ.

ಸಿಬಿಐಗೆ ವರ್ಗಾವಣೆಯಾಗದ ಪ್ರಕರಣಗಳನ್ನು ರಾಜ್ಯ ಸರ್ಕಾರದ 42 ವಿಶೇಷ ತನಿಖಾ ತಂಡಗಳು (ಎಸ್‌ಐಟಿ) ತನಿಖೆ ನಡೆಸುತ್ತಿವೆ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಪರವಾಗಿ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಪೀಠಕ್ಕೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದಾರೆ ಎಂದು ಪೀಠ ಹೇಳಿದೆ.

ಪ್ರತಿಯೊಂದು ಎಸ್‌ಐಟಿಗೂ ಬೇರೆ ರಾಜ್ಯದ ಕನಿಷ್ಠ ಒಬ್ಬ ಇನ್‌ಸ್ಪೆಕ್ಟರ್‌ರನ್ನಾದರೂ ನಿಯೋಜಿಸಬೇಕು. ಹೊರಗಿನ ರಾಜ್ಯಗಳ ಡಿಐಜಿ ಶ್ರೇಣಿಯ ಆರು ಮಂದಿ ಅಧಿಕಾರಿಗಳು 42 ಎಸ್‌ಐಟಿಗಳ ತನಿಖೆಯ ಮೇಲ್ವಿಚಾರಣೆ ನಡೆಸಬೇಕು ಎಂದು ನ್ಯಾಯಪೀಠ ಸೂಚಿಸಿದೆ.

ಮಣಿಪುರದ ಮುಖ್ಯ ಕಾರ್ಯದರ್ಶಿ ವಿನೀತ್ ಜೋಶಿ ಮತ್ತು ಪೊಲೀಸ್ ಮಹಾ ನಿರ್ದೇಶಕ ರಾಜೀವ್ ಸಿಂಗ್ ಅವರು ವಿಚಾರಣೆಗೆ ಹಾಜರಾಗಿದ್ದರು.

‘ರಾಜ್ಯ ಸರ್ಕಾರವು ಪರಿಸ್ಥಿತಿಯನ್ನು ಪ್ರಬುದ್ಧವಾಗಿ ನಿಭಾಯಿಸುತ್ತಿದೆ’ ಎಂದು ಅಟಾರ್ನಿ ಜನರಲ್ ಅವರು ನ್ಯಾಯಪೀಠಕ್ಕೆ ತಿಳಿಸಿದರು.

ಹಿಂಸಾಚಾರದ ತನಿಖೆಗೆ ಎಸ್‌ಐಟಿ ರಚಿಸಬೇಕು ಎಂದು ಹಿರಿಯ ವಕೀಲರಾದ ಇಂದಿರಾ ಜೈಸಿಂಗ್, ಸಂಜಯ್ ಹೆಗ್ಡೆ, ಸಿ.ಯು. ಸಿಂಗ್, ಗೋಪಾಲ್ ಶಂಕರನಾರಾಯಣನ್ ಮತ್ತು ವಕೀಲರಾದ ಪ್ರಶಾಂತ ಭೂಷಣ್, ವೃಂದಾ ಗ್ರೋವರ್, ನಿಜಾಂ ಪಾಶಾ ಮತ್ತಿತರರು ನ್ಯಾಯಪೀಠಕ್ಕೆ ಸಲಹೆ ನೀಡಿದ್ದರು.

‘ಚಂದ್ರಯಾನ–3’ರ ಬಾಹ್ಯಾಕಾಶ ನೌಕೆ

ಚಂದ್ರನ ಸನಿಹಕ್ಕೆ ಮತ್ತೊಂದು ಹೆಜ್ಜೆ

ಬೆಂಗಳೂರು (ಪಿಟಿಐ): ‘ಚಂದ್ರಯಾನ-3’ರ ಬಾಹ್ಯಾಕಾಶ ನೌಕೆಯು ಚಂದ್ರನ ಕಕ್ಷೆ ಪ್ರವೇಶಿಸಿರುವ ಬೆನ್ನಲ್ಲೇ ಅದರ ವೇಗವನ್ನು ನಿಧಾನವಾಗಿ ತಗ್ಗಿಸಿ ಚಂದಿರನ 100 ಕಿ.ಮೀ ಅಂತರದ ಕೆಳಕಕ್ಷೆಗೆ ತರುವ ಮೊದಲ ಹಂತದ ಪ್ರಕ್ರಿಯೆಯು ಭಾನುವಾರ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ನೌಕೆಯು ಭೂಕಕ್ಷೆಯಲ್ಲಿ ಮೂರು ವಾರಗಳ ಕಾಲ ಯಶಸ್ವಿಯಾಗಿ ಪರಿಭ್ರಮಿಸಿತ್ತು. ಬಳಿಕ ಅದನ್ನು ಶನಿವಾರ ಚಂದ್ರನ ಕಕ್ಷೆಗೆ ಯಶಸ್ವಿಯಾಗಿ ಸೇರಿಸಲಾಗಿತ್ತು. ಸಾಫ್ಟ್ ಲ್ಯಾಂಡಿಂಗ್‌ನ ಭಾಗವಾಗಿ ಈಗ ಇಸ್ರೊ ವಿಜ್ಞಾನಿಗಳು, ಅದರ ವೇಗವನ್ನು ನಿಧಾನವಾಗಿ ಕಡಿಮೆಗೊಳಿಸುವ ಪ್ರಕ್ರಿಯೆ ಆರಂಭಿಸಿದ್ದಾರೆ.

‘ನೌಕೆಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಚಂದಿರನ ಕಕ್ಷೆಯಲ್ಲಿ ಕೈಗೊಳ್ಳಬೇಕಿರುವ ಮುಂದಿನ ಹಂತದ ಪ್ರಕ್ರಿಯೆಯು ಆಗಸ್ಟ್ 9ರಂದು ಮಧ್ಯಾಹ್ನ 1ಗಂಟೆಯಿಂದ 2 ಗಂಟೆಯ ನಡುವೆ ನಡೆಯಲಿದೆ’ ಎಂದು ಇಸ್ರೊ ತಿಳಿಸಿದೆ.

ಚಂದ್ರನ ಕೆಳಕಕ್ಷೆವರೆಗೆ ಪ್ರೊಪಲ್ಷನ್ ಮಾಡೆಲ್, ‘ಲ್ಯಾಂಡರ್’ ಮತ್ತು ‘ರೋವರ್’ ಅನ್ನು ಹೊತ್ತೊಯ್ಯಲಿದೆ. ಬಳಿಕ ಇದು ಬೇರ್ಪಡುವುದಕ್ಕೂ ಮೊದಲು ಆಗಸ್ಟ್ 17ರ ವರೆಗೆ ನೌಕೆಯ ವೇಗವನ್ನು ನಿಧಾನಗೊಳಿಸುವ ಮೂರು ಹಂತದ ಪ್ರಕ್ರಿಯೆಗಳು ನಡೆಯಲಿವೆ. ಆಗಸ್ಟ್ 23ರ ಸಂಜೆ 5.47ಕ್ಕೆ ದಕ್ಷಿಣ ಧ್ರುವದಲ್ಲಿ ಸಾಫ್ಟ್ ಲ್ಯಾಂಡಿಂಗ್ ಪ್ರಕ್ರಿಯೆ ನಡೆಯಲಿದೆ ಎಂದು ವಿವರಿಸಿದೆ.

ನೌಕೆಯಲ್ಲಿ ‘ಶೇಪ್’ (ಸ್ಪೆಕ್ಟ್ರೊ ಪೋಲರಿಮೆಟ್ರಿ ಆಫ್ ಹ್ಯಾಬಿಟೇಬಲ್ ಪ್ಲಾನೆಟ್ ಅರ್ಥ್) ಎಂಬ ಸಾಧನ ಅಳವಡಿಸಲಾಗಿದೆ. ಇದು ಚಂದ್ರನ ಕಕ್ಷೆಯಲ್ಲಿಯೇ ಪರಿಭ್ರಮಿಸಲಿದ್ದು, ಬಾಹ್ಯಾಕಾಶ ಕುರಿತು ಡೇಟಾವನ್ನು ಭೂಮಿಗೆ ರವಾನಿಸಲಿದೆ ಎಂದು ತಿಳಿಸಿದೆ.

ವಿಡಿಯೊ ಬಿಡುಗಡೆ: ಚಂದ್ರನ ಕಕ್ಷೆ ಪ್ರವೇಶಿಸಿದ ತಕ್ಷಣವೇ ನೌಕೆಯು, ಚಂದ್ರನ ಮೇಲ್ಮೈ ಚಿತ್ರಣವನ್ನು ಭೂಮಿಗೆ ಕಳುಹಿಸಿದೆ. ಇಸ್ರೊ ವಿಡಿಯೊ ಹಂಚಿಕೊಂಡಿದೆ. ಇದರಲ್ಲಿ ಚಂದ್ರನ ಮೇಲ್ಮೈನಲ್ಲಿರುವ ಕುಳಿಗಳು ನೀಲಿ ಹಸಿರು ಬಣ್ಣದಿಂದ ಕೂಡಿರುವುದು ಕಂಡುಬರುತ್ತದೆ.

‘ಸಾಫ್ಟ್ ಲ್ಯಾಂಡಿಂಗ್ ನಿಜಕ್ಕೂ ಸವಾಲು’

ನವದೆಹಲಿ (ಪಿಟಿಐ): ‘ಚಂದ್ರನ 100 ಕಿ.ಮೀ ಅಂತರದ ಕೆಳ ಕಕ್ಷೆಗೆ ನೌಕೆಯನ್ನು ಇಳಿಸಲು ಯಾವುದೇ ಕಷ್ಟವಾಗುವುದಿಲ್ಲ. ಆದರೆ, ಆ ನಂತರದ ಪ್ರಕ್ರಿಯೆಯು ನಿರ್ಣಾಯಕವಾಗಿದ್ದು, ಸವಾಲಿನಿಂದ ಕೂಡಿದೆ’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

ಪ್ರಸ್ತುತ ನೌಕೆಯು ಚಂದ್ರನ ಸಮೀಪಕ್ಕೆ ತೆರಳಿದೆ. ಚಂದ್ರನ ಮೇಲ್ಮೈನ 4,313 ಕಿ.ಮೀ. ದೀರ್ಘ ವೃತ್ತದ ಕಕ್ಷೆಯಿಂದ 170 ಕಿ.ಮೀ.ಗೆ ಇಳಿಸಲಾಗಿದೆ. ಆಗಸ್ಟ್ 9ರಿಂದ 17ರ ವರೆಗೆ ವಿವಿಧ ಹಂತಗಳಲ್ಲಿ 100 ಕಿ.ಮೀ. ಅಂತರದ ಕೆಳ ಕಕ್ಷೆಗೆ ತರಲಾಗುತ್ತದೆ.

‘ನಿಗದಿತ ಸ್ಥಳದಲ್ಲಿ ಲ್ಯಾಂಡರ್ ಅನ್ನು ಸಾಫ್ಟ್ ಲ್ಯಾಂಡಿಂಗ್ ಮಾಡುವ ಪ್ರಕ್ರಿಯೆಯು ಸವಾಲಿನಿಂದ ಕೂಡಿದೆ. ಆದರೆ, ಎಲ್ಲಾ ಅಗತ್ಯ ಸಿದ್ಧತೆಯನ್ನು ಪೂರ್ಣಗೊಳಿಸಿದ್ದೇವೆ. ಲ್ಯಾಂಡಿಂಗ್ ವೇಳೆ ಎದುರಾಗುವ ಅಡೆತಡೆಗಳನ್ನು ನಿವಾರಿಸಲೂ ಸಜ್ಜಾಗಿದ್ದೇವೆ. ಹಾಗಾಗಿ, ಈ ಬಾರಿ ನಿರೀಕ್ಷಿತ ಫಲಿತಾಂಶ ಲಭಿಸುವ ನಿರೀಕ್ಷೆಯಿದೆ’ ಎಂದು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಚಂದ್ರಯಾನ-2’ರ ವೈಫಲ್ಯವು ನಮಗೆ ಸಾಕಷ್ಟು ಪಾಠ ಕಲಿಸಿದೆ. ಆ ವೇಳೆ ಆದ ತಪ್ಪುಗಳನ್ನು ತಿದ್ದುಕೊಂಡಿದ್ದೇವೆ. ‘ಚಂದ್ರಯಾನ-3’ರಲ್ಲಿ ಅಂತಹ ಯಾವುದೇ ತಪ್ಪುಗಳು ನುಸುಳದಂತೆ ಎಚ್ಚರಿಕೆವಹಿಸಿದ್ದೇವೆ’ ಎಂದಿದ್ದಾರೆ.

ನ್ಯಾಯಮೂರ್ತಿಗಳಿಂದಲೂ ಆಸ್ತಿ ಘೋಷಣೆ: ಶಿಫಾರಸು

ನವದೆಹಲಿ (ಪಿಟಿಐ): ‘ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು ಸಕ್ಷಮ ಪ್ರಾಧಿಕಾರದ ಎದುರು ತಮ್ಮ ಆಸ್ತಿ ವಿವರಗಳನ್ನು ಕಡ್ಡಾಯವಾಗಿ ಘೋಷಿಸುವಂತೆ ಕಾಯ್ದೆ ರೂಪಿಸಬೇಕು’ ಎಂದು ಸಂಸದೀಯ ಸ್ಥಾಯಿ ಸಮಿತಿಯು ಶಿಫಾರಸು ಮಾಡಿದೆ.

ಕಾನೂನು ಮತ್ತು ಸಿಬ್ಬಂದಿ ಆಡಳಿತ ಕುರಿತ ಸ್ಥಾಯಿ ಸಮಿತಿಯು, ‘ನ್ಯಾಯಮೂರ್ತಿಗಳು ವಾರ್ಷಿಕ ಆಸ್ತಿ ವಿವರ ಘೋಷಿಸುವುದನ್ನು ಹಾಗೂ ಈ ವಿವರಗಳನ್ನು ಸಾರ್ವಜನಿಕವಾಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ವ್ಯವಸ್ಥೆ ರೂಪಿಸುವ ಅಗತ್ಯವಿದೆ ಎಂದು ಹೇಳಿದೆ.

ನ್ಯಾಯಮೂರ್ತಿಗಳು ಸ್ವಯಂಪ್ರೇರಿತವಾಗಿ ಆಸ್ತಿ ವಿವರಗಳನ್ನು ಘೋಷಿಸುವ ಸಂಬಂಧ ಸುಪ್ರೀಂ ಕೋರ್ಟ್ ಈ ಹಿಂದೆ ಅಂಗೀಕರಿಸಿರುವ ನಿರ್ಣಯವು ಒಪ್ಪಿತವಲ್ಲ ಎಂದು ಸಮಿತಿಯು ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿದೆ. ‘ಉನ್ನತ ಕೋರ್ಟ್‌ಗಳ ನ್ಯಾಯಮೂರ್ತಿಗಳು ಸಕ್ಷಮ ಪ್ರಾಧಿಕಾರದ ಎದುರು ಪ್ರತಿವರ್ಷ ಆಸ್ತಿ ವಿವರ ಸಲ್ಲಿಕೆಯನ್ನು ಕಡ್ಡಾಯಗೊಳಿಸಿ ಕಾಯ್ದೆ ರೂಪಿಸಲು ಶಿಫಾರಸು ಮಾಡಲಾಗಿದೆ’ ಎಂದು ಸಮಿತಿ ಅಧ್ಯಕ್ಷ ಬಿಜೆಪಿಯ ಸುಶೀಲ್ ಕುಮಾರ್ ಮೋದಿ ಹೇಳಿದ್ದಾರೆ.

‘ನ್ಯಾಯಾಂಗದಲ್ಲಿ ಮೌಲ್ಯಗಳ ಮರುಸ್ಥಾಪನೆ’ ಕುರಿತಂತೆ ಸುಪ್ರೀಂ ಕೋರ್ಟ್‌ನ ಪೂರ್ಣ ಸಭೆ ಮೇ 7, 1997ರಲ್ಲಿ ಅಂಗೀಕರಿಸಿದ ನಿರ್ಣಯವು ನಿರ್ದಿಷ್ಟವಾಗಿ ಕೆಲವೊಂದು ನ್ಯಾಯಾಂಗ ಮಾನದಂಡಗಳಿರಬೇಕು ಎಂದು ಪ್ರತಿಪಾದಿಸಿದೆ ಎಂದು ವರದಿ ಉಲ್ಲೇಖಿಸಿದೆ.

‘ಈ ನಿರ್ಣಯದ ಪ್ರಕಾರ, ಪ್ರತಿ ವರ್ಷ ಸುಪ್ರೀಂ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು ತಮ್ಮ ಆಸ್ತಿ ಮತ್ತು ಹೊಣೆಗಾರಿಕೆ ವಿವರಗಳನ್ನು ಪ್ರಕಟಿಸಬೇಕು. ಆ. 26, 2009ರ ಸಭೆಯಲ್ಲಿ ಸುಪ್ರೀಂ ಕೋರ್ಟ್‌ನ ಪೂರ್ಣ ಪೀಠವು, ‘ನ್ಯಾಯಮೂರ್ತಿಗಳು ಸಲ್ಲಿಸಿದ ಆಸ್ತಿವಿವರಗಳನ್ನು ಸುಪ್ರೀಂಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ತೀರ್ಮಾನ ಕೈಗೊಂಡಿದೆ’ ಎಂದು ಉಲ್ಲೇಖಿಸಿದೆ.

ಪ್ರಸ್ತುತ, ವೆಬ್‌ಸೈಟ್‌ನಲ್ಲಿ ಮಾರ್ಚ್ 31, 2018ರಲ್ಲಿ ಇರುವಂತೆ 55 ನ್ಯಾಯಮೂರ್ತಿಗಳು ಘೋಷಿಸಿಕೊಂಡಿರುವ ಆಸ್ತಿ ವಿವರಗಳಿವೆ. ‘ನ್ಯಾಯಾಂಗದಲ್ಲಿ ಮೌಲ್ಯಗಳ ಮರುಸ್ಥಾಪನೆ’ ಕುರಿತು ಸುಪ್ರೀಂ ಕೋರ್ಟ್‌ನ ನಿರ್ಣಯದ ಅನುಷ್ಠಾನ ಕುರಿತಂತೆ ಈಗ ಯಾವುದೇ ಕಾನೂನು ಮಾನ್ಯತೆ ಇಲ್ಲವಾಗಿದೆ ಎಂದು ಸ್ಥಾಯಿ ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ರೈಲ್ವೆ ಕಾನ್‌ಸ್ಟೆಬಲ್ ವಿರುದ್ಧ ಮತ್ತೊಂದು ಪ್ರಕರಣ

ಮುಂಬೈ(ಪಿಟಿಐ) : ಚಲಿಸುತ್ತಿದ್ದ ರೈಲಿನಲ್ಲಿ ನಾಲ್ವರನ್ನು ಗುಂಡಿಟ್ಟು ಹತ್ಯೆ ಮಾಡಿದ್ದ ರೈಲ್ವೆ ಸುರಕ್ಷತಾ ಪಡೆಯ (ಆರ್‌ಪಿಎಫ್) ಕಾನ್‌ಸ್ಟೆಬಲ್ ಚೇತನ್ ಸಿಂಗ್ ವಿರುದ್ಧ ದ್ವೇಷ ಪ್ರಚೋದಿಸಿದ ಆರೋಪದಡಿ ಈಗ ಮತ್ತೊಂದು ಪ್ರಕರಣ ದಾಖಲಿಸಲಾಗಿದೆ.

ಜೈಪುರ–ಮುಂಬೈ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಜುಲೈ 31ರಂದು ಕಾನ್‌ಸ್ಟೆಬಲ್ ಚೇತನ್ ಸಿಂಗ್ ತನ್ನ ಬಳಿಯಿದ್ದ ಸ್ವಯಂಚಾಲಿತ ಬಂದೂಕಿನಿಂದ ಗುಂಡು ಹಾರಿಸಿ ಆರ್‌ಪಿಎಫ್‌ನ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಟೀಕಾ ರಾಮ್ ಮೀನಾ ಅವರನ್ನಲ್ಲದೆ ಇತರ ಮೂವರು ಪ್ರಯಾಣಿಕರನ್ನು ಹತ್ಯೆ ಮಾಡಿದ್ದ.

ಕೃತ್ಯದ ಬಳಿಕ ರೈಲಿನ ಬೋಗಿಯೊಂದಕ್ಕೆ ತೆರಳಿದ್ದ ಚೇತನ್ ಸಿಂಗ್ ಪ್ರಚೋದನಕಾರಿ ಭಾಷಣ ಮಾಡಿದ್ದ. ಇದನ್ನು ಪ್ರಯಾಣಿಕರೊಬ್ಬರು ವಿಡಿಯೊ ಮಾಡಿಕೊಂಡಿದ್ದಾರೆ. ಆ ವಿಡಿಯೊ ಮಾಡಿದವರನ್ನು ಸಂಪರ್ಕಿಸಲು ರೈಲ್ವೆ ಪೊಲೀಸರು ಪ್ರಯತ್ನಿಸುತ್ತಿದ್ದು, ವಿಡಿಯೊವನ್ನು ಚೇತನ್ ವಿರುದ್ಧದ ಮತ್ತೊಂದು ಸಾಕ್ಷ್ಯವಾಗಿ ಸಲ್ಲಿಸಲಾಗುತ್ತಿದೆ. ಈ ಮಧ್ಯೆ, ಚೇತನ್‌ನನ್ನು ಬೋರಿವಾಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆಗಸ್ಟ್ 11ರ ವರೆಗೆ ಪೊಲೀಸ್ ವಶಕ್ಕೆ ನೀಡಿದೆ.

ಎನ್‌ಆರ್‌ಸಿ ಜಾರಿಗೆ ತರಲು ಆಗ್ರಹ

ಗುವಾಹಟಿ: ಸದ್ಯ ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರದಲ್ಲಿ ಭಾಗಿಯಾಗಿರುವ ಅಕ್ರಮ ವಲಸಿಗರ ವಿರುದ್ಧ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ 1951ನೇ ಇಸವಿಯನ್ನು ಮೂಲವಾಗಿಸಿಕೊಂಡು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೆ ತರಬೇಕು ಎಂದು ಮೈತೇಯಿ ಸಮುದಾಯದ ‘ಮಣಿಪುರ ಏಕತೆ ಸಂಯೋಜನಾ ಸಮಿತಿ’ (ಸಿಒಸಿಒಎಂಐ) ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಆಗ್ರಹಿಸಿದೆ.

ಈ ಕುರಿತು ಪ್ರಧಾನಿ ಕಚೇರಿಗೆ ಸಿಒಸಿಒಎಂಐ ಮನವಿ ಪತ್ರ ಸಲ್ಲಿಸಿದೆ. ಕುಕಿ ಸಂಘಟನೆಗಳ ಬೇಡಿಕೆಗೆ ಅನುಗುಣವಾಗಿ ಪ್ರಾದೇಶಿಕ ಏಕತೆ ಮತ್ತು ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರುವುದನ್ನು ವಿರೋಧಿಸುವುದಾಗಿಯೂ ಹೇಳಿದೆ.

ಇಬ್ಬರು ಉಗ್ರರ ಹತ್ಯೆ

ಪೂಂಚ್/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ದೆಗ್ವಾರ್ ವಲಯದ ಗಡಿ ನಿಯಂತ್ರಣ ರೇಖೆಯ ಬಳಿ ಒಳನುಸುಳಲು ಯತ್ನಿಸಿದ ಹಿಜ್ಬುಲ್ ಮುಜಾಹಿದ್ದೀನ್ ಉಗ್ರ ಸಂಘಟನೆಯ ವಿಭಾಗೀಯ ಕಮಾಂಡರ್ ಹಾಗೂ ಆತನ ಅಂಗರಕ್ಷನನ್ನು ಭದ್ರತಾಪಡೆಗಳು ಸೋಮವಾರ ಹೊಡೆದುರುಳಿಸಿವೆ.

ಕಮಾಂಡರ್ ಮನೇಸರ್ ಹುಸೇನ್‌ನ ಮೃತದೇಹ ಪತ್ತೆಹಚ್ಚಲಾಗಿದೆ. ಆತನ ಅಂಗರಕ್ಷಕನ ಮೃತದೇಹವು ಇನ್ನೂ ದೆಗ್ವಾರ್ ವಲಯದ ಗಡಿ ನಿಯಂತ್ರಣ ರೇಖೆ ಬಳಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂರನೇ ಟಿ–20 ಪಂದ್ಯ ಇಂದು: ಸರಣಿ ಗೆಲ್ಲಲು ಭಾರತಕ್ಕೆ ಜಯ ಅನಿವಾರ್ಯ

ಯುವ ಬ್ಯಾಟರ್‌ಗಳ ಮೇಲೆ ಒತ್ತಡ

ಪ್ರಾವಿಡೆನ್ಸ್ (ಗಯಾನಾ) (ಪಿಟಿಐ): ಕ್ರಿಕೆಟ್‌ನ ಚುಟುಕು ಮಾದರಿಯಲ್ಲಿ ಭಾರತದ ಯುವ ಆಟಗಾರರಿಂದ ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶನ ಬರುತ್ತಿಲ್ಲ. ಹೀಗಾಗಿ ಅಪರೂಪ ಎಂಬಂತೆ ಭಾರತ ತಂಡ, ವೆಸ್ಟ್ ಇಂಡೀಸ್‌ನಲ್ಲಿ ಸರಣಿ ಸೋಲಿನ ಆತಂಕ ಎದುರಿಸುತ್ತಿದೆ. ಇದನ್ನು ತಪ್ಪಿಸಿಕೊಳ್ಳಬೇಕಾದರೆ ಮಂಗಳವಾರ ನಡೆಯುವ ಮೂರನೇ ಪಂದ್ಯವನ್ನು ಪ್ರವಾಸಿ ತಂಡ ಗೆಲ್ಲಲೇಬೇಕಿದೆ.

ಇಲ್ಲಿನ ನಿಧಾನಗತಿಯ ಪಿಚ್‌ಗಳು ಬ್ಯಾಟಿಂಗ್ ಸ್ನೇಹಿಯಲ್ಲ. ಆದರೆ ಭಾರತದ ಆಟಗಾರರು ವಿಶ್ವಾಸದಿಂದ ಆಡುತ್ತಿಲ್ಲ. ‘ನಾವು ಇನ್ನೂ 10–20 ರನ್ ಹೆಚ್ಚುವರಿಯಾಗಿ ಗಳಿಸಬೇಕಿತ್ತು. ಬ್ಯಾಟರ್‌ಗಳು ಹೆಚ್ಚು ಜವಾಬ್ದಾರಿಯಿಂದ ಆಡಬೇಕಾಗಿದೆ’ ಎಂದು ನಾಯಕ ಹಾರ್ದಿಕ್ ಪಾಂಡ್ಯ ಭಾನುವಾರ ಎರಡನೇ ಪಂದ್ಯದ ನಂತರ ಪ್ರತಿಕ್ರಿಯಿಸಿದ್ದು ಉಲ್ಲೇಖನೀಯ.

ಸ್ಪಿನ್ನರ್‌ಗಳ ಉತ್ತಮ ಪ್ರದರ್ಶನದಿಂದ, ಭಾನುವಾರ ಕೊನೆಯ 3–4 ಓವರುಗಳಲ್ಲಿ ಭಾರತವು ಆತಿಥೇಯ ತಂಡಕ್ಕೆ ತಿರುಗೇಟು ನೀಡುವಂತೆ ಕಂಡಿತ್ತು. ಕೊನೆಗೂ ಎರಡು ವಿಕೆಟ್‌ಗಳಿಂದ ಗೆದ್ದ ಆತಿಥೇಯರು ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆದರು.

ಭಾರತ 2016ರಲ್ಲಿ ಕೊನೆಯ ಬಾರಿ ಟಿ–20 ಸರಣಿಯಲ್ಲಿ ಕೆರಿಬಿಯನ್ ತಂಡಕ್ಕೆ ಸೋತಿತ್ತು.

ಟಿ–20 ಪಂದ್ಯದಲ್ಲಿ ಆರಂಭದಿಂದಲೇ ರನ್ ವೇಗ ಹೆಚ್ಚಿಸಬೇಕಾಗುತ್ತದೆ. ಆದರೆ ಭಾರತ ಈ ಬಾರಿ ಯಶಸ್ಸು ಕಂಡಿಲ್ಲ. ಈ ನಿಟ್ಟಿನಲ್ಲಿ ಅಗ್ರ ಬ್ಯಾಟರ್‌ಗಳಾದ ಇಶಾನ್ ಕಿಶನ್, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ ಅವರ ಮೇಲೆ ಹೆಚ್ಚಿನ ಹೊಣೆಯಿದೆ. ಇವರು ವಿಫಲರಾಗುತ್ತಿರುವ ಕಾರಣ ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಮೇಲೆ ಒತ್ತಡ ಬೀಳುತ್ತಿದೆ.


ಭಾರತ ತಂಡದ ಶುಭಮನ್ ಗಿಲ್ (ಎಡದಿಂದ), ಇಶಾನ್ ಕಿಶನ್ ಮತ್ತು ಯಜುವೇಂದ್ರ ಚಾಹಲ್ –ಎಎಫ್‌ಪಿ ಚಿತ್ರ

ಭಾರತ ತಂಡದಲ್ಲಿ ಬದಲಾವಣೆ ಸಾಧ್ಯತೆ ಕಡಿಮೆ. ಹೆಬ್ಬೆರಳ ನೋವಿನಿಂದ ಎರಡನೇ ಪಂದ್ಯಕ್ಕೆ ಗೈರಾಗಿದ್ದ ಕುಲದೀಪ್ ಯಾದವ್ ಮಂಗಳವಾರದ ಪಂದ್ಯಕೆ ಲಭ್ಯರಿರುವರೇ ಎಂಬುದು ಸ್ಪಷ್ಟವಾಗಿಲ್ಲ.

ಚೆನ್ನಾಗಿಯೇ ಬ್ಯಾಟ್ ಬೀಸುತ್ತಿರುವ ನಿಕೋಲಸ್ ಪೂರನ್ ಅವರಿಗೆ ಬೌಲರ್‌ಗಳು, ವಿಶೇಷವಾಗಿ ಸ್ಪಿನ್ನರ್‌ಗಳು ಲಗಾಮು ಹಾಕುವ ಅಗತ್ಯವಿದೆ. ಯಜುವೇಂದ್ರ ಚಾಹಲ್, ರವಿ ಬಿಷ್ಣೋಯಿ ಅವರನ್ನು ದಂಡಿಸುವಲ್ಲೂ ಈ ಎಡಗೈ ಆಟಗಾರ ಒಂದಿಷ್ಟೂ ಅಳುಕಲಿಲ್ಲ. ಎರಡನೇ ಪಂದ್ಯದಲ್ಲಿ ಅಕ್ಷರ್ ಪಟೇಲ್ ಬೌಲಿಂಗ್ ಮಾಡಲಿಲ್ಲ.

ಹಾರ್ದಿಕ್, ಅರ್ಷದೀಪ್ ಉತ್ತಮವಾಗಿ ಬೌಲ್ ಮಾಡಿದ್ದಾರೆ. ಒಟ್ಟಾರೆ, ಸ್ಪಿನ್ನರ್‌ಗಳಲ್ಲಿ ಚಾಹಲ್ ಪರಿಣಾಮಕಾರಿ ಆಗಿದ್ದಾರೆ. ಬಿಷ್ಣೋಯಿ ಅವರ ಗೂಗ್ಲಿ ಎಸೆತಗಳು ಹಿಂದಿನಂತೆ ಅಪಾಯ ಒಡ್ಡುತ್ತಿಲ್ಲ. ಧಾರಾಳಿ ಆದ ಮುಕೇಶ್ ಬದಲು ಆವೇಶ್ ಖಾನ್ ಅಥವಾ ಉಮ್ರಾನ್ ಮಲಿಕ್ ಅವಕಾಶ ಪಡೆಯಬಹುದು.

ಇನ್ನೊಂದೆಡೆ ವೆಸ್ಟ್ ಇಂಡೀಸ್ ಏಳು ವರ್ಷಗಳ ನಂತರ ಮೊದಲ ಬಾರಿ ಭಾರತ ವಿರುದ್ಧ ಸರಣಿಯೊಂದನ್ನು ಗೆಲ್ಲುವ ಸುವರ್ಣಾವಕಾಶ ಹೊಂದಿದೆ. ಎದುರಾಳಿ ತಂಡದ ರೀತಿಯಲ್ಲೇ ವೆಸ್ಟ್ ಇಂಡೀಸ್ ತಂಡದ ಹೆಚ್ಚಿನ ಬ್ಯಾಟರ್‌ಗಳು ವಿಫಲರಾಗಿದ್ದಾರೆ. ಆದರೆ ಪೂರನ್ ಆಟದಿಂದಾಗಿ ಗೆಲುವು ಸಾಧಿಸುತ್ತಿದೆ.

ಆತಿಥೇಯ ತಂಡದ ಬೌಲರ್‌ಗಳು ಉತ್ತಮ ನಿರ್ವಹಣೆ ತೋರಿದ್ದು, ಅದನ್ನು ಮುಂದುವರಿಸುವ ಉತ್ಸಾಹದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 8

ನೇರ ಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್ ಮತ್ತು ಜಿಯೊ ಸಿನಿಮಾ


ದಕ್ಷಿಣ ಕೊರಿಯಾ ವಿರುದ್ಧದ ಪಂದ್ಯದಲ್ಲಿ ಗೋಲು ಗಳಿಸಿದ ಮನ್‌ದೀಪ್ ಸಿಂಗ್ (ಬಲದಿಂದ ಎರಡನೆಯವರು) ಅವರು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಹಾಕಿ: ಕೊರಿಯಾ ವಿರುದ್ಧ 3–2 ಗೋಲುಗಳ ಗೆಲುವು

ಭಾರತ ಅಜೇಯ ಓಟ

ಚೆನ್ನೈ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾರತ ತಂಡದ ಅಜೇಯ ಓಟ ಮುಂದುವರಿದಿದೆ. ಸೋಮವಾರ ನಡೆದ ಪಂದ್ಯದಲ್ಲಿ ಆತಿಥೇಯರು 3–2 ಗೋಲುಗಳಿಂದ ದಕ್ಷಿಣ ಕೊರಿಯಾ ವಿರುದ್ಧ ಗೆದ್ದರು.

ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಹರ್ಮನ್‌ಪ್ರೀತ್ ಸಿಂಗ್ ಬಳಗ ಈ ಜಯದ ಮೂಲಕ ನಾಲ್ಕು ಪಂದ್ಯಗಳಿಂದ 10 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು. ಮೂರು ಪಂದ್ಯಗಳನ್ನು ಗೆದ್ದಿರುವ ಆತಿಥೇಯರು, ಒಂದನ್ನು ಡ್ರಾ ಮಾಡಿಕೊಂಡಿದ್ದಾರೆ.

ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚುರುಕಿನ ಆಟವಾಡಿದ ಭಾರತ ತಂಡಕ್ಕೆ ನೀಲಕಂಠ ಶರ್ಮಾ ಅವರು 6ನೇ ನಿಮಿಷದಲ್ಲಿ ಮುನ್ನಡೆ ತಂದಿತ್ತರು. ಆದರೆ ಕಿಮ್ ಸುಂಗ್‌ಹ್ಯೂನ್ 12ನೇ ನಿಮಿಷದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಕೊರಿಯಾ ಪಂದ್ಯವನ್ನು ಸಮಸ್ಥಿತಿಗೆ ತಂದಿತು.

ಎರಡನೇ ಕ್ವಾರ್ಟರ್ ಬಳಿಕ ಭಾರತ ತಂಡ ಪಂದ್ಯದ ಮೇಲಿನ ಹಿಡಿತ ಬಿಗಿಗೊಳಿಸಿತು. ಹರ್ಮನ್‌ಪ್ರೀತ್ ಸಿಂಗ್ (23ನೇ ನಿ.) ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿ ಭಾರತಕ್ಕೆ 2–1 ಮುನ್ನಡೆ ತಂದಿತ್ತರು. ಮೂರನೇ ಕ್ವಾರ್ಟರ್‌ನಲ್ಲಿ ಮನ್‌ದೀಪ್ ಸಿಂಗ್ (33 ನೇ ನಿ.) ತಂಡದ ಮೂರನೇ ಗೋಲು ಗಳಿಸಿದರು.

ಅಂತಿಮ ಕ್ವಾರ್ಟರ್‌ನಲ್ಲಿ ಮರುಹೋರಾಟ ನಡೆಸಿದ ಕೊರಿಯಾ, ಯಾಂಗ್ ಜಿಹುನ್ (58) ಅವರ ಗೋಲಿನ ನೆರವಿನಿಂದ ಸೋಲಿನ ಅಂತರ ತಗ್ಗಿಸಿತು.

ಬುಧವಾರ ನಡೆಯಲಿರುವ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಬಳಗ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಪಾಕಿಸ್ತಾನ, ಮಲೇಷ್ಯಾ ತಂಡಗಳಿಗೆ ಜಯ: ದಿನದ ಇತರ ಪಂದ್ಯಗಳಲ್ಲಿ ಪಾಕಿಸ್ತಾನ 2–1 ಗೋಲುಗಳಿಂದ ಚೀನಾ ತಂಡವನ್ನು ಮಣಿಸಿದರೆ, ಮಲೇಷ್ಯಾ 3–1 ರಿಂದ ಜಪಾನ್ ವಿರುದ್ಧ ಗೆದ್ದಿತು.

ಮೊಹಮ್ಮದ್ ಖಾನ್ (20) ಮತ್ತು ಅಫ್ರಾಜ್ (39) ಅವರು ಪಾಕ್ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಚೀನಾ ತಂಡದ ಪರ ಗಾವೊ ಜೀಶೆಂಗ್ (33) ಗೋಲು ತಂದಿತ್ತರು.

ಪಾಯಿಂಟ್ಸ್‌ಗಳ ಸಂಖ್ಯೆಯನ್ನು ಐದಕ್ಕೆ ಹೆಚ್ಚಿಸಿಕೊಂಡ ಪಾಕ್, ಸೆಮಿಫೈನಲ್ ಪ್ರವೇಶಿಸುವ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡಿದೆ. ಮೂರನೇ ಸೋಲು ಅನುಭವಿಸಿದ ಚೀನಾ (1 ಪಾಯಿಂಟ್) ಸೆಮಿ ‘ರೇಸ್’ನಿಂದ ಹೊರಬಿದ್ದಿತು.

ಜಪಾನ್ ವಿರುದ್ಧ ಗೆದ್ದ ಮಲೇಷ್ಯಾ ತಂಡ ಸೆಮಿಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಂಡಿತು. ಈ ತಂಡ ನಾಲ್ಕು ಪಂದ್ಯಗಳಿಂದ 9 ಪಾಯಿಂಟ್ಸ್ ಕಲೆಹಾಕಿದೆ.

ನಜ್ಮಿ ಜಝ್ಲಾನ್ (13), ಅಶ್ರನ್ ಹಂಸಾನಿ (37) ಮತ್ತು ಶೆಲೊ ಸಿಲ್ವೇರಿಯಸ್ (59) ಅವರು ಮಲೇಷ್ಯಾ ಪರ ಚೆಂಡನ್ನು ಗುರಿ ಸೇರಿಸಿದರು. ಹಲವು ಅವಕಾಶಗಳನ್ನು ಹಾಳುಮಾಡಿಕೊಂಡ ಜಪಾನ್ ತಂಡದ ಏಕೈಕ ಗೋಲನ್ನು ನಿವಾ ತಕುಮಾ (59) ತಂದಿತ್ತರು.

ನಾಲ್ಕು ಪಂದ್ಯಗಳಿಂದ ಎರಡು ಪಾಯಿಂಟ್ಸ್ ಕಲೆಹಾಕಿರುವ ಜಪಾನ್ ತಂಡದ ಸೆಮಿಫೈನಲ್ ಪ್ರವೇಶದ ಸಾಧ್ಯತೆ ಕ್ಷೀಣಿಸಿದೆ.

ಎಂಟರ ಘಟ್ಟಕ್ಕೆ ಆಸ್ಟ್ರೇಲಿಯಾ

ವಿಶ್ವಕಪ್ ಫುಟ್‌ಬಾಲ್: ನೈಜೀರಿಯಾ ಮಣಿಸಿದ ಇಂಗ್ಲೆಂಡ್

ಸಿಡ್ನಿ/ ಬ್ರಿಸ್ಬೇನ್ (ಎಎಫ್‌ಪಿ): ಆತಿಥೇಯ ಆಸ್ಟ್ರೇಲಿಯಾ ಮತ್ತು ಯೂರೋಪಿಯನ್ ಚಾಂಪಿಯನ್ ಇಂಗ್ಲೆಂಡ್ ತಂಡಗಳು ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

ಸಿಡ್ನಿ ಫುಟ್‌ಬಾಲ್ ಕ್ರೀಡಾಂಗಣದಲ್ಲಿ 76 ಸಾವಿರ ಪ್ರೇಕ್ಷಕರ ಸಮ್ಮುಖದಲ್ಲಿ ಸೋಮವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ 2–0 ಗೋಲುಗಳಿಂದ ಡೆನ್ಮಾರ್ಕ್ ತಂಡವನ್ನು ಮಣಿಸಿತು. ಬ್ರಿಸ್ಬೇನ್‌ನಲ್ಲಿ ನಡೆದ ಹಣಾಹಣಿಯಲ್ಲಿ ಇಂಗ್ಲೆಂಡ್, ಪೆನಾಲ್ಟಿ ಶೂಟೌಟ್‌ನಲ್ಲಿ 4–2 ರಿಂದ ನೈಜೀರಿಯಾ ವಿರುದ್ಧ ಗೆದ್ದಿತು.

1995ರ ಬಳಿಕ ಇದೇ ಮೊದಲ ಬಾರಿ ವಿಶ್ವಕಪ್‌ನಲ್ಲಿ ನಾಕೌಟ್ ಪಂದ್ಯವನ್ನಾಡಿದ ಡೆನ್ಮಾರ್ಕ್ ತಂಡ, ಆಸ್ಟ್ರೇಲಿಯಾಕ್ಕೆ ಪ್ರಬಲ ಪೈಪೋಟಿ ಒಡ್ಡಲು ವಿಫಲವಾಯಿತು. ಕೈಟ್ಲಿನ್ ಫೂರ್ಡ್ ಅವರು 29ನೇ ನಿಮಿಷದಲ್ಲಿ ಆತಿಥೇಯರಿಗೆ ಮುನ್ನಡೆ ತಂದಿತ್ತರು. ಹೇಯ್ಲಿ ರಾಸೊ 70ನೇ ನಿಮಿಷದಲ್ಲಿ ಎರಡನೇ ಗೋಲು ಗಳಿಸಿ ತಂಡದ ಗೆಲುವು ಖಚಿತಪಡಿಸಿಕೊಂಡರು.

ತಂಡದ ನಾಯಕಿ ಸ್ಯಾಮ್ ಕೆರ್ ಅವರು ಗಾಯದಿಂದ ಚೇತರಿಸಿಕೊಂಡಿದ್ದು, ಕೊನೆಯ 10 ನಿಮಿಷಗಳು ಇದ್ದಾಗ ಆಡಲಿಳಿದರು. ಇದು ಕ್ವಾರ್ಟರ್ ಫೈನಲ್ ಪಂದ್ಯಕ್ಕೆ ಮುನ್ನ ಸಹಜವಾಗಿ ಆಸ್ಟ್ರೇಲಿಯಾದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.


ಗೆಲುವಿನ ಸಂಭ್ರಮದಲ್ಲಿ ಆಸ್ಟ್ರೇಲಿಯಾ ತಂಡದ ಆಟಗಾರ್ತಿಯರು –ಎಎಫ್‌ಪಿ ಚಿತ್ರ

ಇನ್ನೊಂದು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ನೈಜೀರಿಯಾ ತಂಡ, ಇಂಗ್ಲೆಂಡ್‌ಗೆ ಅನಿರೀಕ್ಷಿತ ಪೈಪೋಟಿ ಒಡ್ಡಿತು. 120 ನಿಮಿಷಗಳ ಆಟದ ಬಳಿಕ ಯಾವುದೇ ಗೋಲುಗಳ ದಾಖಲಾಗದ ಕಾರಣ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಶೂಟೌಟ್‌ನಲ್ಲಿ ಗೆದ್ದ ಇಂಗ್ಲೆಂಡ್ ಎಂಟರಘಟ್ಟಕ್ಕೆ ಲಗ್ಗೆಯಿಟ್ಟಿತು. ಇಂಗ್ಲೆಂಡ್‌ನ ಲಾರೆನ್ ಜೇಮ್ಸ್ ಅವರು 87ನೇ ನಿಮಿಷದಲ್ಲಿ ರೆಡ್ ಕಾರ್ಡ್ ಪಡೆದು ಹೊರನಡೆದರು.

ಸನ್‌ರೈಸರ್ಸ್‌ಗೆ ಡೇನಿಯಲ್ ವೆಟೋರಿ ಮುಖ್ಯ ಕೋಚ್

ಹೈದರಾಬಾದ್ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡ ಡೇನಿಯಲ್ ವೆಟೋರಿ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಿರುವುದಾಗಿ ಸೋಮವಾರ ಪ್ರಕಟಿಸಿದೆ. ಎರಡು ವರ್ಷಗಳ ಕಾಲ ಆ ಸ್ಥಾನದಲ್ಲಿದ್ದ ಬ್ರಯಾನ್ ಲಾರಾ ಅವರನ್ನು ಕೈಬಿಟ್ಟಿದೆ.

ನ್ಯೂಜಿಲೆಂಡ್ ತಂಡದ ಮಾಜಿ ನಾಯಕ ವೆಟೋರಿ ಐಪಿಎಲ್‌ನಲ್ಲಿ ಎರಡನೇ ಬಾರಿ ತಂಡವೊಂದಕ್ಕೆ ಕೋಚ್ ಆಗಿದ್ದಾರೆ. ಈ ಹಿಂದೆ 2014 ರಿಂದ 2018ರವರೆಗೆ ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಕೋಚ್ ಆಗಿದ್ದರು.

ವೆಟೋರಿ ಸಮೃದ್ಧ ಕೋಚಿಂಗ್ ಅನುಭವ ಹೊಂದಿದ್ದಾರೆ. ಇತ್ತೀಚಿನವರೆಗೂ ಆಸ್ಟ್ರೇಲಿಯಾ ತಂಡದ ಸಹಾಯಕ ಕೋಚ್ ಆಗಿದ್ದ ಅವರು, ಕೆಲಕಾಲ ಬಾಂಗ್ಲಾದೇಶ ತಂಡಕ್ಕೆ ಸ್ಪಿನ್ ಕನ್ಸಲ್ಟೆಂಟ್ ಆಗಿಯೂ ಕೆಲಸ ಮಾಡಿದ್ದಾರೆ.

‘ಕಿವಿ ದಂತಕತೆ ಡೇನಿಯಲ್ ವೆಟೋರಿ ‘ಆರೆಂಜ್ ಆರ್ಮಿ’ ಹೆಡ್ ಕೋಚ್ ಆಗಿ ಸೇರ್ಪಡೆ ಆಗುತ್ತಿದ್ದಾರೆ’ ಎಂದು ಸನ್‌ರೈಸರ್ಸ್ ಟ್ವಿಟರ್ ಹ್ಯಾಂಡಲ್‌ನಲ್ಲಿ ತಿಳಿಸಲಾಗಿದೆ.


ಡೇನಿಯಲ್ ವೆಟೋರಿ

ಈ ಹಿಂದೆ ಆರ್‌ಸಿಬಿ ತಂಡಕ್ಕೆ ಕೋಚ್ ಆಗಿದ್ದಾಗ ಅವರು 2015ರಲ್ಲಿ ತಂಡವನ್ನು ಪ್ಲೇ ಆಫ್ ಹಂತಕ್ಕೆ, 2016ರಲ್ಲಿ ಫೈನಲ್‌ಗೆ ತಲುಪಿಸುವಲ್ಲಿ ಮಾರ್ಗದರ್ಶನ ಮಾಡಿದ್ದರು.

ಲಾರಾ ಅವರಿಗಿಂತ ಮೊದಲು ಟಾಮ್ ಮೂಡಿ ಅವರು ಸನ್‌ರೈಸರ್ಸ್ ಹೆಡ್ ಕೋಚ್ ಆಗಿದ್ದರು. ಲಾರಾ ಅವರು ಕೋಚ್ ಆಗಿದ್ದ ಅವಧಿಯಲ್ಲಿ ಸನ್ ರೈಸರ್ಸ್ ಪ್ರದರ್ಶನ ನಿರಾಶಾದಾಯಕವಾಗಿದ್ದು ಆ ತಂಡ 10ನೇ ಸ್ಥಾನಕ್ಕೆ ಇಳಿದಿತ್ತು.

ಡುರಾಂಡ್ ಕಪ್: ಇಂಡಿಯನ್ ಆರ್ಮಿ ತಂಡಕ್ಕೆ ಜಯ

ಕೊಕ್ರಜಾರ್, ಅಸ್ಸಾಂ (ಪಿಟಿಐ): ಲಿಟನ್ ಶಿಲ್ ಅವರ ಗೋಲಿನ ನೆರವಿನಿಂದ ಇಂಡಿಯನ್ ಆರ್ಮಿ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಒಡಿಶಾ ತಂಡವನ್ನು 1–0ಯಿಂದ ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ 42ನೇ ನಿಮಿಷದಲ್ಲಿ ಲಿಟನ್ ಅವರು ಚೆಂಡನ್ನು ಗುರಿ ಸೇರಿಸಿ ಆರ್ಮಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು.

ಕೋಲ್ಕತ್ತ: ಮತ್ತೊಂದು ಪಂದ್ಯದಲ್ಲಿ ಇಂಡಿಯನ್ ಸೂಪರ್ ಲೀಗ್ ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡವು ಪಂಜಾಬ್ ಎಫ್‌ಸಿ ತಂಡವನ್ನು 2–0ಯಿಂದ ಸೋಲಿಸಿತು.

23ನೇ ನಿಮಿಷದಲ್ಲಿ ಮೆಲ್ರಾಯ್ ಅಸ್ಸಿಸ್ಸಿ ಮತ್ತು 48ನೇ ನಿಮಿಷದಲ್ಲಿ ಹ್ಯೂಗೋ ಬುಮೊಸ್ ಅವರು ಗೋಲು ಹೊಡೆಯುವ ಮೂಲಕ ತಂಡದ ಗೆಲುವಿಗೆ ಕಾರಣರಾದರು.

ವಿಶ್ವ ಜೂನಿಯರ್ ಬ್ಯಾಡ್ಮಿಂಟನ್: ಭಾರತ ತಂಡಕ್ಕೆ ಆಯುಷ್ ಸಾರಥ್ಯ

ನವದೆಹಲಿ (ಪಿಟಿಐ): ಉದಯೋನ್ಮುಖ ಷಟ್ಲರ್ ಆಯುಷ್ ಶೆಟ್ಟಿ ಮತ್ತು ಉನ್ನತಿ ಹೂಡಾ ಅವರು ಅಮೆರಿಕದ ಸ್ಪೋಕಾನ್‌ನಲ್ಲಿ ಸೆ.25ರಿಂದ ನಡೆಯಲಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ 16 ಸದಸ್ಯರ ತಂಡವನ್ನು ಮುನ್ನಡೆಸಲಿದ್ದಾರೆ.

ಜುಲೈ 26ರಿಂದ 29ರ ವರೆಗೆ ನವದೆಹಲಿಯಲ್ಲಿ ನಡೆದ ಟ್ರಯಲ್ಸ್ ನಂತರ ತಂಡವನ್ನು ಆಯ್ಕೆ ಮಾಡಲಾಗಿದೆ.

19 ವರ್ಷದೊಳಗಿನವರ ವಿಭಾಗ ದಲ್ಲಿ ಎರಡು ಬಾರಿಯ ಚಾಂಪಿಯನ್ ಆಯುಷ್ ಪುರುಷರ ತಂಡವನ್ನು ಮುನ್ನಡೆಸಲಿದ್ದಾರೆ. ಅವರೊಂದಿಗೆ ತುಷಾರ್ ಸುವೀರ್ ಮತ್ತು ಲೋಕೇಶ್ ರೆಡ್ಡಿ ಇರಲಿದ್ದಾರೆ.

2022ರ ಒಡಿಶಾ ಓಪನ್ ಚಾಂಪಿಯನ್ ಉನ್ನತಿ ಹೂಡಾ ಅವರು ತಾರಾ ಶಾ ಮತ್ತು ದೇವಿಕಾ ಸಿಹಾಗ್ ಅವರೊಂದಿಗೆ ಮಹಿಳೆಯರ ಸಿಂಗಲ್ಸ್ ವಿಭಾಗವನ್ನು ಮುನ್ನಡೆಸಲಿದ್ದಾರೆ.


ಆಯುಷ್ ಶೆಟ್ಟಿ

ಭಾರತ ತಂಡ: ಆಯುಷ್ ಶೆಟ್ಟಿ, ತುಷಾರ್ ಸುವೀರ್, ಲೋಕೇಶ್ ರೆಡ್ಡಿ, ನಿಕೋಲಸ್ ನಾಥನ್ ರಾಜ್, ದಿವ್ಯಂ ಅರೋರಾ, ಮಯಾಂಕ್ ಅರೋರಾ, ಸಮರ್‌ವೀರ್, ಕೆ. ಸಾತ್ವಿಕ್ ರೆಡ್ಡಿ, ಉನ್ನತಿ ಹೂಡ, ತಾರಾ ಶಾ, ದೇವಿಕಾ ಸಿಹಾಗ್, ಶ್ರೀಯಾನ್ಶಿ ವಲಿಶೆಟ್ಟಿ, ರಾಧಿಕಾ ಶರ್ಮಾ, ತನ್ವಿ ಶರ್ಮಾ, ಕೆ. ವೆನ್ನಾಲ, ವೈಷ್ಣವಿ ಖಡ್ಕೇಕರ್.

ಫುಟ್‌ಬಾಲ್: ಸೆಮಿಫೈನಲ್‌ಗೆ ಥಾಂಕೋಸ್, ಡೆಕ್ಕನ್

ಬೆಂಗಳೂರು: ಥಾಂಕೋಸ್ ಸ್ಟೂಡೆಂಟ್ಸ್ ಹಾಗೂ ಎಫ್.ಸಿ ಡೆಕ್ಕನ್ ತಂಡಗಳು ಬಿಡಿಎಫ್‌ಎ ಆಶ್ರಯದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶ ಮಾಡಿವೆ.

ಸೋಮವಾರ ನಡೆದ ಮೊದಲ ಕ್ವಾರ್ಟರ್ ಫೈನಲ್‌ನಲ್ಲಿ ಥಾಂಕೋಸ್ ಸ್ಟೂಡೆಂಟ್ಸ್ ತಂಡವು 2–1 ಗೋಲುಗಳಿಂದ ಸೌತ್ ಯುನೈಟೆಡ್ ಎಫ್.ಸಿ ತಂಡವನ್ನು ಮಣಿಸಿತು. ಥಾಂಕೋಸ್ ಪರವಾಗಿ ಮೃಣಾಲ್ ಮುತ್ತಣ್ಣ (38ನೇ ನಿ), ರೂಟಗ್ ಆಗಿರಾವ್ (39ನೇ) ಗೋಲು ದಾಖಲಿಸಿ ಮಿಂಚಿದರು. ಯುನೈಟೆಡ್ ಪರ ಏಕೈಕ ಗೋಲನ್ನು 82ನೇ ನಿಮಿಷದಲ್ಲಿ ಅಲ್ತಾಬ್ ಹುಸೇನ್ ತಂದಿತ್ತರು.

ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ತಂಡವು ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡದೊಂದಿಗೆ 3–3 ಡ್ರಾ ಸಾಧಿಸಿದ ಕಾರಣ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಅಲ್ಲಿ ಡೆಕ್ಕನ್ ತಂಡವು 5–3ರಿಂದ ಜಯ ಸಾಧಿಸಿತು.

ಡೆಕ್ಕನ್ ತಂಡದ ಪರ ಎನ್. ರಾಕೇಶ್ ಸಿಂಗ್ (49, 62ನೇ), ನವೀನ್ ದಾಸ್ (80ನೇ) ಗೋಲು ಗಳಿಸಿದರು. ಎಎಸ್‌ಸಿ ತಂಡದ ಪರ ಉಶಮ್ ರಾಬಿನ್ಸನ್ ಸಿಂಗ್ (3ನೇ), ವಹೆಂಗಬಾಮ್ ನೀರಜ್ ಸಿಂಗ್ (32ನೇ), ಟೋನಿ ಹ್ಯಡ್ರೊಮ್ (85) ಚೆಂಡನ್ನು ಗುರಿ ಸೇರಿಸಿದರು.

ಪಿಸಿಬಿ ಆಯ್ಕೆ ಸಮಿತಿಗೆ ಇಂಜಮಾಮ್ ಮುಖ್ಯಸ್ಥ

ಕರಾಚಿ (ಪಿಟಿಐ): ಪಾಕ್ ತಂಡದ ಮಾಜಿ ನಾಯಕ ಇಂಜಮಾಮ್‌-ಉಲ್‌-ಹಕ್ ಅವರು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಮುಖ್ಯ ಆಯ್ಕೆಗಾರನಾಗಿ ನೇಮಕಗೊಂಡಿದ್ದಾರೆ.

ಮುಂಬರುವ ಏಷ್ಯಾ ಕಪ್ ಮತ್ತು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಪಾಕ್ ತಂಡವನ್ನು ಆಯ್ಕೆ ಮಾಡುವ ಜವಾಬ್ದಾರಿ ಅವರಿಗೆ ದೊರೆತಿದೆ. ಇಂಜಮಾಮ್ ಅವರು ಆಯ್ಕೆ ಸಮಿತಿಯ ಮುಖ್ಯಸ್ಥನಾಗಲು ಒಪ್ಪಿಕೊಂಡಿದ್ದಾರೆ ಎಂದು ಪಿಸಿಬಿ ಮೂಲಗಳು ಎರಡು ದಿನಗಳ ಹಿಂದೆಯೇ ಖಚಿತಪಡಿಸಿದ್ದವು. ಸೋಮವಾರ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಡಿಸಿದೆ.


ಇಂಜಮಾಮ್

‘ಆಯ್ಕೆ ಸಮಿತಿಯನ್ನು ಮುನ್ನಡೆಸುವುದು ಕಠಿಣ ಕೆಲಸ. ಏಷ್ಯಾ ಕಪ್ ಮತ್ತು ವಿಶ್ವಕಪ್ ಟೂರ್ನಿಗಳು ಮುಂದಿರುವುದರಿಂದ ಸವಾಲು ಇನ್ನಷ್ಟು ಹೆಚ್ಚಿದೆ’ ಎಂದು ಇಂಜಮಾಮ್ ಪ್ರತಿಕ್ರಿಯಿಸಿದ್ದಾರೆ.

53 ವರ್ಷದ ಇಂಜಮಾಮ್, ಈ ಹಿಂದೆ 2016 ರಿಂದ 2019ರವರೆಗೆ ಇದೇ ಹುದ್ದೆಯಲ್ಲಿದ್ದರು. ಫಖರ್ ಜಮಾನ್, ಶಾಹೀನ್ ಶಾ ಆಫ್ರಿದಿ, ಹಸನ್ ಅಲಿ, ಶಾದಾಬ್ ಖಾನ್ ಮತ್ತು ಇಮಾಮ್ ಉಲ್ ಹಕ್ ಅವರಂತಹ ಪ್ರತಿಭೆಗಳನ್ನು ರಾಷ್ಟ್ರೀಯ ತಂಡಕ್ಕೆ ಆಯ್ಕೆ ಮಾಡಿದ ಶ್ರೇಯ ಇಂಜಮಾಮ್ ಅವರಿಗೆ ಸಲ್ಲುತ್ತದೆ.

ಎಫ್‌ಐಬಿಎ ಮಧ್ಯಪ್ರವೇಶಕ್ಕೆ ಮನವಿ

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ನ (ಬಿಎಫ್‌ಐ) ಆಡಳಿತ ದಲ್ಲಿ ತಲೆದೋರಿರುವ ಗೊಂದಲ ಬಗೆಹರಿಸಲು ಮಧ್ಯಪ್ರವೇಶಿಸಬೇಕೆಂದು ಕರ್ನಾಟಕ ರಾಜ್ಯ ಬ್ಯಾಸ್ಕೆಟ್ ಬಾಲ್ ಸಂಸ್ಥೆಯ ಕಾರ್ಯದರ್ಶಿ ಕೆ.ಗೋವಿಂದರಾಜ್ ಅವರು ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ಗೆ (ಎಫ್‌ಐಬಿಎ) ಮನವಿ ಮಾಡಿದ್ದಾರೆ.

ಬಿಎಫ್‌ಐ ಆಡಳಿತ ನೋಡಿಕೊಳ್ಳಲು ಎರಡು ಬಣಗಳ ನಡುವೆ ತಿಕ್ಕಾಟ ನಡೆಯುತ್ತಿರುವುದರಿಂದ, ಭಾರತದ ತಂಡಗಳು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪಾಲ್ಗೊಳ್ಳುವ ಅವಕಾಶದಿಂದ ವಂಚಿತವಾಗುತ್ತಿವೆ.

ಥಾಯ್ಲೆಂಡ್‌ನಲ್ಲಿ ನಡೆಯುತ್ತಿರುವ ಎಫ್‌ಐಬಿಎ ಏಷ್ಯಾ ಕಪ್ ಮಹಿಳೆಯರ ‘ಬಿ’ ಡಿವಿಷನ್ ಟೂರ್ನಿಯಲ್ಲಿ ಭಾರತ ತಂಡ ಪಾಲ್ಗೊಳ್ಳಬೇಕಿತ್ತು. ಅದರೆ ಕೊನೆಯ ಕ್ಷಣದಲ್ಲಿ ಭಾರತದ ಬದಲು ಶ್ರೀಲಂಕಾ ತಂಡಕ್ಕೆ ಅವಕಾಶ ನೀಡಲಾಗಿತ್ತು. ಅದೇ ರೀತಿ ಭಾರತದ 16 ವರ್ಷದೊಳಗಿನ ಬಾಲಕಿಯರ ತಂಡ, ಜೋರ್ಡಾನ್‌ನಲ್ಲಿ ಕಳೆದ ತಿಂಗಳು ನಡೆದಿದ್ದ ಎಫ್‌ಐಬಿಎ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರಲಿಲ್ಲ.

‘ಆಟಗಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಈಗ ತಲೆದೋರಿರುವ ಗೊಂದಲ ಬಗೆಹರಿಸಬೇಕು’ ಎಂದು ಗೋವಿಂದರಾಜ್ ಎಫ್‌ಐಬಿಎಗೆ ಬರೆದ ಪತ್ರದಲ್ಲಿ ಕೋರಿದ್ದಾರೆ.

ಭಗತ್–ಕದಂ ಜೋಡಿಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಪ್ರಮೋದ್ ಭಗತ್ ಮತ್ತು ಸುಕಾಂತ್ ಕದಂ ಜೋಡಿಯು ಇಂಗ್ಲೆಂಡ್‌ನಲ್ಲಿ ನಡೆದ ನಾಲ್ಕು ರಾಷ್ಟ್ರಗಳ ಪ್ಯಾರಾ ಬ್ಯಾಡ್ಮಿಂಟನ್ ಅಂತರರಾಷ್ಟ್ರೀಯ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಚಿನ್ನ ಗೆದ್ದಿದೆ.

ವಿಶ್ವದ ನಂ.1 ಜೋಡಿಯಾಗಿರುವ ಭಗತ್ ಮತ್ತು ಕದಂ ಅವರು ಎಸ್‌ಎಲ್ 3–ಎಸ್‌ಎಲ್ 4 ವರ್ಗದಲ್ಲಿ ಸ್ವದೇಶದ ದೀಪ್ ರಂಜನ್ ಬಿಸೋಯಿ ಮತ್ತು ಮನೋಜ್ ಸರ್ಕಾರ್ ಜೋಡಿಯನ್ನು 21-17, 21-17ರಿಂದ ಮಣಿಸಿದರು. ಭಗತ್ ಅವರು ಎಸ್‌ಎಲ್ 3 ವರ್ಗದ ಸಿಂಗಲ್ಸ್‌ನಲ್ಲಿ ಮತ್ತು ಮನೀಶಾ ರಾಮ್‌ದಾಸ್ ಅವರೊಂದಿಗೆ ಎಸ್‌ಎಲ್ 3–ಎಸ್‌ಯು 5 ವರ್ಗದ ಮಿಕ್ಸೆಡ್ ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿಯ ಸಾಧನೆ ಮಾಡಿದ್ದಾರೆ.

ಸಿಂಗಲ್ಸ್‌ನ ಫೈನಲ್‌ನಲ್ಲಿ ಭಗತ್ ಅವರು ಇಂಗ್ಲೆಂಡ್‌ನ ಬೆಥೆಲ್ ಅವರಿಗೆ ಮಣಿದರು.

ಶ್ರೇಯಸ್ ಹರೀಶ್ ಅಂತ್ಯಕ್ರಿಯೆ

ಬೆಂಗಳೂರು: ಬೈಕ್ ರೇಸ್ ವೇಳೆ ನಡೆದ ಅವಘಡದಲ್ಲಿ ದುರಂತ ಸಾವನ್ನಪ್ಪಿದ 13 ವರ್ಷದ ಕೊಪ್ಪರಂ ಶ್ರೇಯಸ್ ಹರೀಶ್ ಅವರ ಅಂತ್ಯಕ್ರಿಯೆ ಸೋಮವಾರ ನಡೆಯಿತು.

ಸಹಕಾರನಗರದಲ್ಲಿರುವ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಕುಟುಂಬ ಸದಸ್ಯರು, ಸಂಬಂಧಿಕರು, ರೇಸಿಂಗ್ ವಲಯದ ಹಲವರು ಅಂತಿಮ ನಮನ ಸಲ್ಲಿಸಿದರು. ಚೆನ್ನೈನಲ್ಲಿ ಶನಿವಾರ ನಡೆದಿದ್ದ ಎಂಆರ್‌ಎಫ್ ಇಂಡಿಯನ್ ನ್ಯಾಷನಲ್ ಮೋಟರ್‌ಸೈಕಲ್ ರೇಸಿಂಗ್ ವೇಳೆ ಅವಘಡ ಸಂಭವಿಸಿತ್ತು. ನಿಯಂತ್ರಣ ಕಳೆದುಕೊಂಡು ಬೈಕ್ ಉರುಳಿ ಬಿದ್ದು ಶ್ರೇಯಸ್ ಗಂಭೀರ ಗಾಯಗೊಂಡಿದ್ದರು. ಆಸ್ಪತ್ರೆಗೆ ಸಾಗಿಸುವಷ್ಟರಲ್ಲೇ ಕೊನೆಯುಸಿರೆಳೆದಿದ್ದರು.

ಪ್ರೊ ಕಬಡ್ಡಿ ಲೀಗ್: ಸೆ. 8, 9ರ ಹರಾಜಿಗೆ ಪವನ್, ವಿಕಾಶ್

84 ಆಟಗಾರರನ್ನು ಉಳಿಸಿಕೊಂಡ ಫ್ರಾಂಚೈಸಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನಲ್ಲಿ ಭಾಗವಹಿಸುವ 12 ತಂಡಗಳು, ಮುಂಬರುವ 10ನೇ ಆವೃತ್ತಿಗೆ ಮೂರು ವಿಭಾಗಗಳಲ್ಲಿ ತಾವು ಉಳಿಸಿಕೊಂಡಿರುವ 84 ಆಟಗಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಿವೆ. ಸ್ಟಾರ್ ಆಟಗಾರರಾದ ಪವನ್ ಸಹ್ರಾವತ್ ಮತ್ತು ವಿಕಾಶ್ ಖಂಡೋಲಾ ಸೇರಿದಂತೆ ಇತರ ಆಟಗಾರರು ಮುಂಬೈನಲ್ಲಿ ಸೆಪ್ಟೆಂಬರ್ 8 ಮತ್ತು 9 ರಂದು ಹರಾಜಿಗೆ ಒಳಪಡಲಿದ್ದಾರೆ.

ಪಿಕೆಎಲ್‌ನ ಅತ್ಯಂತ ಯಶಸ್ವಿ ದಾಳಿಗಾರರಲ್ಲಿ ಒಬ್ಬರಾದ ಸಹ್ರಾವತ್ ಕಳೆದ ಋತುವಿನಲ್ಲಿ ತಮಿಳು ತಲೈವಾಸ್ ತಂಡಕ್ಕೆ ಆಡಿದ್ದರು. ವಿಕಾಶ್, 2022ರಲ್ಲಿ ಬೆಂಗಳೂರು ಪರ ಆಡಿದ್ದರು.


ಪವನ್ ಸಹ್ರಾವತ್

ಎಲೀಟ್ ರೀಟೇನ್ಡ್ ಆಟಗಾರರ (ಇಆರ್‌ಪಿ) ವಿಭಾಗದಲ್ಲಿ 22 ಮಂದಿಯನ್ನು ವಿವಿಧ ಫ್ರಾಂಚೈಸಿಗಳು ಉಳಿಸಿಕೊಂಡಿವೆ. ರೀಟೇನ್ಡ್ ಯಂಗ್ ಪ್ಲೇಯರ್ಸ್ (ಆರ್‌ವೈಪಿ) ವಿಭಾಗದಲ್ಲಿ 24 ಮಂದಿ ಆಯಾ ಫ್ರಾಂಚೈಸಿಗಳಲ್ಲಿ ಉಳಿದುಕೊಂಡಿದ್ದಾರೆ. ಎಕ್ಸಿಸ್ಟಿಂಗ್ ನ್ಯೂ ಯಂಗ್‌ಪ್ಲೇಯರ್ಸ್ (ಇಎನ್‌ವೈಪಿ) ವಿಭಾಗದಲ್ಲಿ 38 ಮಂದಿ ಹಿಂದಿನ ತಂಡಗಳಲ್ಲೇ ಮುಂದುವರಿಯಲಿದ್ದಾರೆ.

ಇಆರ್‌ಪಿ ವಿಭಾಗದಲ್ಲಿ ರೇಡರ್ ನೀರಜ್ ನರ್ವಾಲ್ ಅವರನ್ನು ಬೆಂಗಳೂರು ಬುಲ್ಸ್ ಉಳಿಸಿಕೊಂಡಿದೆ. ಆರ್‌ವೈಪಿ ವಿಭಾಗದಲ್ಲಿ ರೇಡರ್ ಭರತ್ ಮತ್ತು ರಕ್ಷಣೆ ಆಟಗಾರ ಸೌರಭ್ ನಂದಾಲ್, ಇಎನ್‌ವೈಪಿ ವಿಭಾಗದಲ್ಲಿ ಅಮನ್ ಮತ್ತು ಯಶ್ ಹೂಡಾ, ಬುಲ್ಸ್ ತಂಡದಲ್ಲಿ ಮುಂದುವರಿಯಲಿದ್ದಾರೆ.

ಪಿಕೆಎಲ್ ದಂತಕತೆ ಪ್ರದೀಪ್ ನರ್ವಾಲ್ ಅವರನ್ನು ಯು.ಪಿ. ಯೋಧಾಸ್ ತಂಡ ಉಳಿಸಿಕೊಂಡಿದೆ. ಅಸ್ಲಂ ಮುಸ್ತಾಫಾ ಇನಾಮದಾರ್ ಅವರು ಪುಣೇರಿ ಪಲ್ಟನ್ಸ್ ತಂಡದಲ್ಲಿ ಮುಂದುವರಿಯಲಿದ್ದಾರೆ. ಸೀಸನ್ 9ರ ಅತ್ಯಂತ ಮೌಲ್ಯಯುತ ಆಟಗಾರ ಗೌರವ ಪಡೆದ ಅರ್ಜುನ್ ದೇಶ್ವಾಲ್ ಅವರನ್ನು ಜೈಪುರ್ ಪಿಂಕ್ ಪ್ಯಾಂಥರ್ಸ್ ಉಳಿಸಿಕೊಂಡಿದೆ.

ಮಶಾಲ್ ಸ್ಪೋರ್ಟ್ಸ್‌ನ ಕ್ರೀಡಾ ಲೀಗ್‌ಗಳ ಮುಖ್ಯಸ್ಥ ಅನುಪಮ್ ಗೋಸ್ವಾಮಿ ಮಾತನಾಡಿ ‘ತಂಡಗಳು ಪ್ರಮುಖ ಆಟಗಾರರನ್ನು ಉಳಿಸಿಕೊಳ್ಳುವ ಮೂಲಕ 10ನೇ ಆವೃತಿ ಉತ್ತಮ ಹೋರಾಟದ ಭರವಸೆ ಮೂಡಿಸಿದೆ’ ಎಂದು ಹೇಳಿದರು.